بِسْمِ اللهِ الرَّحْمٰنِ الرَّحِيْمِ  نَحْمَدُهٗ وَنُصَلِّی عَلٰی رَسُوْلِهِ الْکَرِيْمِ  وَعَلٰی عَبْدِهِ الْمَسِيْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 01

ಸಂಚಿಕೆ: 32

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

20 ಆಗಸ್ಟ್ 2020, 20 ತಬ್‌ಲೀಗ್ 1399 ಹಿಜರಿ ಶಮ್‌ಸಿ,
29 ಝುಲ್-ಹಜ್ಜ್ 1441 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمْرِهٖ وَاَمْرِهٖ۔

## ಅಲ್ಲಾಹನ ಉಪದೇಶ

فَكَيْفَ اِذَا جِئْنَا مِنْ كُلِّ اُمَّةٍۭ بِشَهِيْدٍ
وَّجِئْنَا بِكَ
عَلٰی هٰٓؤُلَآءِ شَهِيْدًا (النساء:42)

(ಅನ್ನಿಸಾಅ್:42)

ಅಂದರೆ: ನಾವು ಪ್ರತಿಯೊಂದು ಸಮುದಾಯದಿಂದ ಒಬ್ಬೊಬ್ಬ ಸಾಕ್ಷಿಯನ್ನು ತಂದು, ಇವರಿಗೆ ಸಾಕ್ಷಿಯಾಗಿ ನಿನ್ನನ್ನೂ ತರುವಾಗ (ಇವರ) ಸ್ಥಿತಿ ಏನಾಗಿರಬಹುದು?

**ಅಲ್ಲಾಹನು ನಿಮ್ಮನ್ನು ಸೃಷ್ಟಿಸಿದ ಉದ್ದೇಶವೇನೆಂದರೆ ನೀವು ಅವನನ್ನು ಆರಾಧಿಸಬೇಕು ಮತ್ತು ಅವನದ್ದೇ ಆಗಿರಬೇಕು. ಇಹಲೋಕವೇ ನಿಮ್ಮ ಸರ್ವಸ್ವ ಆಗಿರಬಾರದು.**

**ಒಟ್ಟಿನಲ್ಲಿ ಅಲ್ಲಾಹನು ಭಯ ಭಕ್ತಿಯುಳ್ಳವರ ಬಗ್ಗೆ ಕಾಳಜಿ ವಹಿಸುತ್ತಾನೆ ಮತ್ತು ಅವನ ಜೀವನವನ್ನು ಶಾಶ್ವತವಾಗಿರಿಸಲು ಇಷ್ಟ ಪಡುತ್ತಾನೆ. ಆದರೆ ಯಾರು ಅವನ ಆಜ್ಞೆಗಳನ್ನು ಪಾಲಿಸುವುದಿಲ್ಲವೋ ಅವರ ಬಗ್ಗೆ ಕಾಳಜಿ ವಹಿಸುವುದಿಲ್ಲ.**

### ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಮಾನವ ಜನ್ಮದ ಉದ್ದೇಶವು ದೇವಾರಾಧನೆಯಾಗಿದೆ. ಈ ವಿಷಯವನ್ನು ಮನವರಿಕೆ ಮಾಡಿಕೊಳ್ಳುವುದು ತುಂಬ ಅವಶ್ಯಕವಾಗಿದೆ. ಅದೇನೆಂದರೆ ಅಲ್ಲಾಹನು ನಿಮ್ಮನ್ನು ಸೃಷ್ಟಿಸಿದ ಉದ್ದೇಶವೇನೆಂದರೆ ನೀವು ಅವನನ್ನು ಆರಾಧಿಸಬೇಕು ಮತ್ತು ಅವನದ್ದೇ ಆಗಿರಬೇಕು. ಇಹ ಲೋಕವೇ ನಿಮ್ಮ ಸರ್ವಸ್ವ ಆಗಿರಬಾರದು. ನಾನು ಪದೇ ಪದೇ ಈ ವಿಷಯ ಪ್ರಸ್ತಾಪಿಸುತ್ತಾ ಇರುತ್ತೇನೆ. ನನ್ನ ದೃಷ್ಟಿಯಲ್ಲಿ ಇದೊಂದು ಉದ್ದೇಶ ಮಾತ್ರವೇ ಆಗಿದೆ ಅದಕ್ಕಾಗಿ ಮಾನವ ಬಂದಿರುವನು ಮತ್ತು ಅದೇ ಮಾರ್ಗದಿಂದ ಅವನು ದೂರವಾಗಿದ್ದಾನೆ. ನಾನು ನಿಮಗೆ ಇಹ-ಸಂಸಾರವನ್ನು ಬಿಡಲು ಹೇಳುತ್ತಿಲ್ಲ. ಹೆಂಡತಿ ಮಕ್ಕಳನ್ನು ಬಿಟ್ಟು ಯಾವುದೇ ಅರಣ್ಯ ಅಥವಾ ಪರ್ವತಕ್ಕೆ ಹೋಗಿ ಕುಳಿತುಕೊಳ್ಳಲು ಹೇಳುತ್ತಿಲ್ಲ. ಇಸ್ಲಾಮ್ ಧರ್ಮ ಇದನ್ನು ಧರ್ಮ ಸಮ್ಮತ ಎಂದು ಒಪ್ಪುವುದೂ ಇಲ್ಲ. ಸನ್ಯಾಸಿಯಾಗಿರಬೇಕೆಂದು ಇಸ್ಲಾಮ್ ಬಯಸುವುದಿಲ್ಲ ಅದು ಮನುಷ್ಯನನ್ನು ಸ್ವಸ್ತ ಮತ್ತು ಚತುರ ಹಾಗೂ ಯಾವಾಗಲೂ ಸಿದ್ಧಹಸ್ತರಾಗಿರಬೇಕೆಂದು ಬಯಸುತ್ತದೆ. ಆದುದರಿಂದ ನಾನು ಹೇಳುವುದು ನೀವು ನಿಮ್ಮ ವ್ಯಾಪಾರ ಕಾರ್ಯಗಳಿಗಾಗಿ ಶ್ರಮಿಸುತ್ತಿರಿ. ಹದೀಸಿನಲ್ಲಿ ಬರುತ್ತದೆ. ಯಾರ ಹತ್ತಿರ ಭೂಮಿಯಿದೆಯೋ ಅದನ್ನು ಅವನು ಉಪಯೋಗಿಸಲಿಲ್ಲವಾದರೆ ಅವನು ಕೇಳಲ್ಪಡುವನು. ಆದುದರಿಂದ ಯಾರಾದರೂ ಇಹ ಲೋಕ ಕಾರ್ಯಗಳಿಂದ ವಿಮುಖನಾಗ ಬಯಸಿದರೆ ಅವನು ತಪ್ಪು ಮಾಡುತ್ತಿದ್ದಾನೆ. ಹಾಗೆ ಮಾಡಬಾರದು, ವಾಸ್ತವವೇನೆಂದರೆ ನೀವು ಮಾಡುತ್ತಿರುವ ಈ ಎಲ್ಲ ಕಾರ್ಯಗಳಲ್ಲಿ ಅಲ್ಲಾಹನ ಸಾನಿಧ್ಯದ ಉದ್ದೇಶ ಹೊಂದಿರಬೇಕು. ಅವನ ಆಪೇಕ್ಷೆಗಳಿಂದ ದೂರ ಸರಿದು ತನ್ನ ವ್ಯಾಮೋಹವನ್ನು ಪ್ರದರ್ಶಿಸಬಾರದು.

ಮಾನವನ ಜೀವಿತದ ಉದ್ದೇಶವು ಕೇವಲ **"ತನವ್ವುಮ್"** ಅವನ ಎಲ್ಲ ಪ್ರಯತ್ನಗಳು ಕೇವಲ ಭೋಗಗಳಿಗಾಗಿ ಮತ್ತು ಬಟ್ಟೆಬರೆಗಾಗಿ ಇದ್ದು, ಅಲ್ಲಾಹನಿಗಾಗಿ ಯಾವ ಸ್ಮರಣೆಯು ಮನದಲ್ಲಿರದಿದ್ದರೆ ನೆನಪಿಡಿರಿ ಇಂತಹ ವ್ಯಕ್ತಿ ಸೃಷ್ಟಿಸಿಯ ವಿರುದ್ಧವಾಗಿದ್ದಾನೆ ಎಂದು ಅರ್ಥ. ಅದರ ಪರಿಣಾಮ ಏನಾಗುವುದೇನೆಂದರೆ ಅವನು ನಿಧಾನವಾಗಿ ತನ್ನ ಸಹಜ ಶಕ್ತಿಗಳನ್ನು ಕಳೆದುಕೊಳ್ಳುವನು. ಇದೊಂದು ಸಹಜವಾದ ವಿಷಯವಾಗಿದೆ. ಯಾವ ಉದ್ದೇಶಕ್ಕಾಗಿ ಒಂದು ವಸ್ತುವನ್ನು ನಾವು ತೆಗೆದುಕೊಳ್ಳುತ್ತೇವೋ ಆ ವಸ್ತುವಿನೊಂದಿಗೆ, ಉದಾಹರಣೆಗೆ ಒಂದು ಮರ, ಕುರ್ಚಿ ಅಥವಾ ಮೇಜು ಮಾಡಲು ತೆಗೆದುಕೊಂಡರೆ ಅದು ಆ ಕಾರ್ಯಯಕ್ಕೆ ಹೊಂದಲಿಲ್ಲವಾದರೆ ಅದನ್ನು ಸುಡಲು ಉಪಯೋಗಿಸುತ್ತಾರೆ. ಅದೇ ರೀತಿ ಮಾನವ ಜನ್ಮದ ಅಸಲು ಉದ್ದೇಶ ದೇವಾರಾಧನೆಯಾಗಿದೆ. ಆದರೆ ಅವನು ತನ್ನ ಈ ಸಹಜ ಉದ್ದೇಶವನ್ನು ಈಡೇರದ ರೀತಿಯಲ್ಲಿ ತಮಗೆ ದೊರೆತ ಶಕ್ತಿಗಳನ್ನು ಇತರ ಕಾರ್ಯಗಳಿಗಾಗಿ ಉಪಯೋಗಿಕೊಳ್ಳುವನಾದರೆ ಅಲ್ಲಾಹನು ಅವನನ್ನು ಲೆಕ್ಕಿಸುವುದಿಲ್ಲ. ಅದರೆಡೆಯೇ ಈ ವಚನ ಸೂಚಿಸುತ್ತಿದೆ. **"ಖುಲ್ ಮಾಯಾಬವು ಬಿಕುಂ ರಬ್ಬಿ ಲೌಲಾದುಆವುಕಂ** (ಅಲ್-ಫುರ್ಖಾನ್:78) ನಾನು ಈ ಮೊದಲು ಒಂದು ಸಲ ಹೇಳಿದ್ದೆ ನಾನು ಒಂದು ಅರಣ್ಯದಲ್ಲಿ ನಿಂತುಕೊಂಡಿದ್ದೇನೆ, ಪೂರ್ವ ಪಶ್ಚಿಮ ದಿಕ್ಕಿನಲ್ಲಿ ಒಂದು ದೊಡ್ಡ ಕಾಲುವೆ ಇದೆ, ಆ ಕಾಲುವೆಯ ಮೇಲೆ ಕುರಿಗಳನ್ನು ಮಲಗಿಸಲಾಗಿದೆ. ಪ್ರತಿಯೊಂದು ಕುರಿಯ ಮೇಲೆ ಕಟುಕರು ಚೂರಿಯೊಂದಿಗೆ ನಿಂತಿದ್ದಾರೆ, ಅವರು ಆ ಚೂರಿಗಳನ್ನು ಕುರಿಗಳ ಕುತ್ತಿಗೆಯ ಮೇಲೆ ಇಟ್ಟಿದ್ದಾರೆ, ಆಕಾಶದ ಕಡೆ ನೀಡುತ್ತಿದ್ದಾರೆ. ನಾನು ಅವರ ಬಳಿ ನಡೆದಾಡುತಿದ್ದೇನೆ, ನಾನು ಈ ದೃಶ್ಯವನ್ನು ಕಂಡು ತಿಳಿದುಕೊಂಡೆ ಇವರು ದೇವಾಜ್ಞೆಯನ್ನು ನಿರೀಕ್ಷಿಸುತ್ತಿದ್ದಾರೆಂದು. ಆಗ ನಾನು ಇದೇ ವಚನವನ್ನು ಪಠಿಸಿದೆ. **"ಖುಲ್ ಮಾಯಾಬವು ಬಿಕುಂ ರಬ್ಬಿ ಲೌಲಾದುಆವುಕಂ** (ಅಲ್-ಫುರ್ಖಾನ್:78) ಇದನ್ನು ಕೇಳುತ್ತಲೇ ಆ ಕಟುಕರು ತಕ್ಷಣದಿಂದ ತಮ್ಮ ಚೂರಿಗಳನ್ನು ಚಲಾಯಿಸಿದರು ಮತ್ತು ಹೇಳಿದರು: ನೀವು ಏನಾಗಿದ್ದೀರ? ಮೇವು ತಿನ್ನುವ ಕುರಿಗಳಷ್ಟೆ ತಾನೆ.

ಒಟ್ಟಿನಲ್ಲಿ ಅಲ್ಲಾಹನು ಭಯಭಕ್ತಿಯುಳ್ಳವರ ಜೀವಿತದ ಬಗ್ಗೆ ಕಾಳಜಿವಹಿಸುತ್ತಾನೆ, ಅವರ ರಕ್ಷಣೆ ಅವನಿಗೆ ಪ್ರಿಯವಾಗಿರುತ್ತದೆ ಮತ್ತು ಯಾರು ಅದರ ವಿರುದ್ಧ ನಡೆದುಕೊಳ್ಳುವರೋ ಅವರನ್ನು ಲೆಕ್ಕಿಸುವುದಿಲ್ಲ ಮತ್ತು ಅವರಿಗೆ ನರಕಕ್ಕೆ ಸೇರಿಸುತ್ತಾನೆ. ಆದುದರಿಂದ ಪ್ರತಿಯೊಬ್ಬರಿಗೆ ಅವಶ್ಯವಾದುದೇನೆಂದರೆ ತನ್ನ ಆತ್ಮವನ್ನು ಶೈತಾನನ ಸಂಕುಲೆಯಿಂದ ಬಿಡಿಸಿಕೊಳ್ಳಬೇಕು. ಯಾವ ರೀತಿ ಕ್ಲೋರೋಫಾರ್ಮ್ ನಿದ್ರೆ ತರಿಸುತ್ತದೆಯೋ ಅದೇ ರೀತಿ ಶೈತನನು ಮನುಷ್ಯನನ್ನು ವಿನಾಷಕ್ಕೆ ತಳ್ಳುತ್ತಾನೆ. ಅವನನ್ನು ಎಚ್ಚರಾಗದಂತಹ ನಿದ್ರೆಯಲ್ಲಿ ಮಲಗಿಸುತ್ತಾನೆ ಮತ್ತು ಅದರಲ್ಲಿಯೇ ಅವನನ್ನು ನಾಶಗೊಳಿಸುತ್ತಾನೆ.

**(ಮಲ್‌ಫುಝಾತ್, ಸಂಪುಟ-1, ಪುಟ-170 ರಿಂದ 171 ಮುದ್ರಣ 2018 ಖಾದಿಯಾನ್)**

### ಪವಿತ್ರ ಖುರ್‌ಆನ್ ವಾದಿಸುವುದೇನೆಂದರೆ ಅದು ಎಲ್ಲಾ ಗತ ಗ್ರಂಥಗಳ ಸತ್ಯಸಾಕ್ಷ್ಯಗಳನ್ನು ಒಳಗೊಂಡಿದೆ

ಯಾವುದೇ ವ್ಯಕ್ತಿ ತನ್ನ ಎದುರಾಳಿಯ ವಿರುದ್ಧ ಮಾಡಬೇಕಾದ ಸರಳವಾದ ಕೆಲಸವೆಂದರೆ ಆರೋಪ ಮಾಡುವುದು. ಸತ್ಯವನ್ನು ಅಲ್ಲಗಳೆಯುವವರು ಯಾವಾಗಲೂ ಆರೋಪಗಳಿಗಷ್ಟೆ ಸೀಮಿತವಾಗಿರುತ್ತಾರೆ ಹೊರತು ತನ್ನ ಎದುರಾಳಿಯ ವಿರುದ್ಧ ಯಾವುದೇ ಒಂದು ಪ್ರಬಲ ಕಾರ್ಯ ಮಾಡಿ ತೋರಿಸುವುದಿಲ್ಲ, ಅದರಿಂದಾದರೂ ಅವರ ಸಾಮರ್ಥ್ಯ ಹೊರಬಂದಂತಾಗುತ್ತಿತ್ತು ಮತ್ತು ಆರೋಪದ ನೈಜತೆಯೂ ಹೊರ ಬಂದಂತಾಗುತ್ತಿತ್ತು ಮತ್ತು ಆರೋಪದ ನೈಜತೆಯೂ ತಿಳಿಯುತ್ತಿತ್ತು. ಅಂತಹದೆ

*(ಪುಟ ಸಂಖೆ 11 ರಲ್ಲಿ ಮುಂದುವರಿಸಲಾಗಿದೆ)*

لَا اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ❁ شَرُّ السُّمُوْمِ عَدَاوَۃُ الصُّلَحَاءِ

## ಪಂಡಿತ್ ಖಡಕ್ ಸಿಂಗ್‌ಗೆ ಐದು ನೂರು ರೂಪಾಯಿಗಳ ಬಹುಮಾನದ ಪಂಥಾಹ್ವಾನ

ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರ ಬಹುಮಾನದ ಪಂಥಾಹ್ವಾನ ವಿಷಯಗಳ ಸರಣಿ ಪ್ರಾರಂಭಿಸಿದ್ದೆವು ಆದರೆ ಎರಡು ಕಂತು ಪ್ರಕಟ ಗೊಂಡಾಗ "ಲಾಕ್ ಡೌನ್" ನಿಮಿತ್ತ ಈ ಸರಣಿ ನಿಲ್ಲಿಸಬೇಕಾಯಿತು. ಈಗ ಅದನ್ನು ಪುನಃ ಪ್ರಾರಂಭಿಸುತಿದ್ದೇವೆ. ಹಿಂದಿನ ಎರಡು ಕಂತುಗಳು ಮಾರ್ಚ್ 19 ಮತ್ತು 26 ರರ ಸಂಚಿಕೆಗಳಲ್ಲಿ ಕಾಣಬಹುದಾಗಿದೆ. ರೂಹಾನಿ ಖಝಾಯಿನ್ ಸಂಪುಟ 2ರ ಮೊದಲ ಗ್ರಂಥ "ಪುರಾನಿ ತಹ್‌ರಿರೇಂ" ಆಗಿರುತ್ತದೆ. ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರ ವಿಭಿನ್ನ ಬರಹಗಳಾಗಿವೆ. ಅದು ಆ ಸಮಯ ವಿವಿಧ ಪತ್ರಿಕೆಗಳಲ್ಲಿ, ಪುಸ್ತಕಗಳಲ್ಲಿ ಮುದ್ರಣಗೊಂಡಿದ್ದವು. 1899ರಲ್ಲಿ ಮೊದಲ ಬಾರಿಗೆ ಗ್ರಂಥ ರೂಪದಲ್ಲಿ ಪ್ರಕಟಗೊಂಡಿತು. ಸಯ್ಯದುನಾ ಹಝ್ರತ್ ಮಸೀಹ್ ಮಊದ್ ಅಲೈಹಿಸ್ಸಲಾಮ್ ಆ ಗ್ರಂಥದಲ್ಲಿ ಪಂಡಿತ್ ಖಡಕ್‌ಸಿಂಗ್ ಸಾಹೇಬರಿಗೆ ಐದು ನೂರು ರೂಪಾಯಿಗಳ ಬಹುಮಾನದ ಪಂಥಾಹ್ವಾನ ನೀಡಿದ್ದರು. ಅದರ ವಿವರ ಹೀಗಿದೆ.

ಪಂಡಿತ್ ಖಡಕ್‌ಸಿಂಗ್ ಸಾಹೇಬ್ ಅವರು ಆರ್ಯ ಸಮಾಜ ಅಮೃತ್‌ಸರ್ ಸದಸ್ಯರಾಗಿದ್ದರು. ಖಾದಿಯಾನ್ ಬಂದರು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರೊಡನೆ ಚರ್ಚಕೂಟ ಏರ್ಪಡಿಸುವ ಅಭಿಲಾಷೆ ವ್ಯಕ್ತಪಡಿಸಿದರು. ಹಝ್ರತ್ ಮಸೀಹ್ ಅಲೈಹಿಸ್ಸಲಾಮ್ ರವರಂತೂ ಇಸ್ಲಾಮಿನ ಹೆಸರು ಪ್ರಕಾಶಮಯಗೊಳಿಸಲು ಇಂತಹ ಸಂದರ್ಭಗಳನ್ನು ಕಾಯುತ್ತಿದ್ದರು. ಅವರು ತಕ್ಷಣ ಅದಕ್ಕೆ ಒಪ್ಪಿಗೆ ನೀಡಿದರು. ಅಂತೂ ಹಿಂದುಗಳ ವಿಶ್ವಾಸವಾದ "ತನಾಸುಖ್" (ಮರಣದ ನಂತರ ಒಬ್ಬರ ಆತ್ಮ ಇನ್ನಿತರಲ್ಲಿ ಸೇರುತ್ತದೆ) ಮೇಲೆ ಚರ್ಚೆ ನಡೆಸಲು ನಿರ್ಣಯ ಕೈಗೊಂಡರು. ಪಂಡಿತ್ ಖಡಕ್‌ಸಿಂಗ್ ಸಾಹೇಬ್ ತನಾಸುಖ್ ಪರವಾಗಿ ವೇದಗಳಿಂದ ಸಾಕ್ಷ್ಯಗಳನ್ನು ಒದಗಿಸುವರು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಅದರ ರದ್ದತಿಯಲ್ಲಿ (ವಿರೋಧಿಗೆ) ಪವಿತ್ರ ಖುರ್‌ಆನಿನಿಂದ ಸಾಕ್ಷ್ಯಗಳನ್ನು ಒದಗಿಸುವರು. ಈ ರೀತಿ ವೇದ ಮತ್ತು ಪವಿತ್ರ ಖುರ್‌ಆನನ್ನು ಸ್ಪರ್ಧೆಗೆ ಒಡ್ಡುವಂತಾಗುವುದು ಅದರಿಂದ ವಾಸ್ತವದಲ್ಲಿ ಯಾರು ಮಹೋನ್ನತೆಗೆ ಅರ್ಹರೆಂದು ತಿಳಿದುಬಹುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಒಂದು ಪ್ರಬಂಧ ಸಾರ್ವಜನಿಕ ಸಮ್ಮೇಳನದಲ್ಲಿ ಪುನರ್ಜನ್ಮ (ತನಾಸುಖ್) ಪದ್ದತಿ (ವಿರೋಧವಾಗಿ) ಮಂಡಿಸಿದರು. ಈಗ ಖಡಕ್‌ಸಿಂಗ್ ಅವರ ಸರತಿಯಾಗಿತ್ತು. ಅವರು ಪುನರ್ಜನ್ಮ ಪರವಾಗಿ ವೇದಗಳಿಂದ ಶ್ಲೋಕಗಳನ್ನು ಪ್ರಸ್ತುತಪಡಿಸಬೇಕಾಗಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರು ಪವಿತ್ರ ಖುರ್‌ಆನಿನಿಂದ ಒದಗಿಸಿದ ಪುರಾವೆಗಳನ್ನು ರದ್ದುಗೊಳಿಸಬೇಕಾಗಿತ್ತು. ಆದರೆ ಪಂಡಿತ್‌ಜೀ ಕೇವಲ ಎರಡು ಶ್ಲೋಕಗಳು ಪ್ರಸ್ತುತಪಡಿಸಿದರು. ಅದರಲ್ಲಿ ಅವರ ಭಾವನೆಯ ಪ್ರಕಾರ ಅವಾಗುಣಕ್ಕೆ ಸಮರ್ಥನೆ ನೀಡುತಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮಂಡಿಸಿದ ಯಾವ ಪುರಾವೆಯನ್ನು ಅಲ್ಲಗಳೆಯಲು ಸಾಧ್ಯವಾಗಲಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ.

ಪಂಡಿತ್ ದಯಾನಂದ್ ಸಾಹೇಬ್ ದೀರ್ಘ ಅವಧಿಯಿಂದ ವೇದವನ್ನು ಎಲ್ಲ ಜ್ಞಾನತಂತ್ರಗಳ ಮೂಲವಾಗಿದೆ ಎಂದು ಸಾರುತ್ತಿದ್ದರು. ಹೀಗಿರುವಾಗ ಅವರು ಪವಿತ್ರ ಖುರ್‌ಆನಿನಿಂದ ತಾನು ಮಂಡಿಸಿದ ಸಾಕ್ಷ್ಯಗಳ ವಿರುದ್ಧ ವೇದಗಳ ಶ್ಲೋಕಗಳನ್ನು ಪ್ರಸ್ತುತಪಡಿಸುವುದು ಅವರ ಕರ್ತವ್ಯವಾಗಿತ್ತು. ಆದರೆ ವಿಶಾದಕರವಾದ ಸಂಗತಿ ಏನೆಂದರೆ ಅವರಿಂದ ಏನೂ ಹೇಳಲೂ ಸಾಧ್ಯವಿಲ್ಲ. ಅಚ್ಚರಿಗೊಂಡರು, ವಿವಶರಾಗಿ ಪಂಡಿತ್ ಖಡಕ್‌ಸಿಂಗ್ ತಮ್ಮ ಊರಿಗೆ ಮರಳಿದರು. **(ಪುರಾನಿ ತಹರೀರೇಂ, ರೂಹಾನಿ ಖಝಾಯೀನ್, ಸಂಪುಟ–2, ಪುಟ–4)**

ಊರಿಗೆ ಹೋಗಿ ಪಂಡಿತ್ ಖಡಕ್‌ಸಿಂಗ್ ಸಾಹೇಬರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರಿಗೆ ಬರೆದರು ನಾನು ಯಾವುದೇ ಪತ್ರಿಕೆಯ ಮೂಲಕ ಅವಾಗನ ಸಮಸ್ಯೆಯ ವಿಷಯವಾಗಿ ಪವಿತ್ರ ಖುರ್‌ಆನ್ ವಿರುದ್ಧ ವಾದಿಸ ಬಯಸುತ್ತೇನೆ ಎಂದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಈ ವಾದವು ಒಪ್ಪಿದರು. ಅವರು ಅಲೈಹಿಸ್ಸಲಾಮ್ ಬರೆದರು: "ಯಾವ ಪ್ರಬಂಧವನ್ನು ಸಾರ್ವಜನಕ ಸಮ್ಮೇಳನದಲ್ಲಿ ನಾನು ಪವಿತ್ರ ಖುರ್‌ಆನಿನಿಂದ ಪುರಾವೆಗಳನ್ನು ಒದಗಿಸಿ ಮಂಡಿಸಿರುತ್ತೇನೋ ಆ ಪ್ರಬಂಧದ ಉತ್ತರವಾಗಿಯೇ ನೀವು ನಿಮ್ಮ ಪ್ರಬಂಧ ಪತ್ರಿಕೆ "ಸಫೀರ್ ಹಿಂದ್ ಅಥವಾ" ಬ್ರಾದರೆ ಹಿಂದ್" ನಲ್ಲಿ ಪ್ರಕಟಪಡಿಸಿರಿ. ಜನರು ಸ್ವಯಂ ನಿರ್ಣಯಿಸಿಕೊಳ್ಳುವರು. ಅವರು ಮೂರನೇ ಮಧ್ಯವರ್ತಿಯಾಗಿ ಮತ್ತು ನ್ಯಾಯಮೂರ್ತಿಯಾಗಿ ಪಾದರಿ ರಜಬ್ ಅಲಿ ಮತ್ತು ಬ್ರಹ್ಮ ಸಮಾಜದ ಪಂಡಿತ್ ಶಿವನಾರಾಯಣ ಅವರ ಹೆಸರನ್ನು ಮಂಡಿಸಿದರು. ಅವರು ಹೇಳಿದರು:

ಈ ಚರ್ಚೆಯಲ್ಲಿ ಕೇವಲ ಪಂಡಿತ್ ಖಡಕ್‌ಸಿಂಗ್ ಒಬ್ಬರೆ ಉತ್ತರ ನೀಡಲು ಪ್ರಯತ್ನಪಡುವುದು ಅನಿವಾರ್ಯವಲ್ಲ. ಬದಲು ನಾನು ಸಾರ್ವಜನಕವಾಗಿ ಈ ಘೋಷಣೆ ಮಾಡುತ್ತೇನೆ. ಯಾರಾದರೂ ಸರಿ ಪಾಂಡಿತ್ಯ ಪಡೆದವರು ಅದರ ಉತ್ತರ ನೀಡಲು ಸಿದ್ದರಿದರೆ ಉತ್ತರ ನೀಡಬಹುದಾಗಿದೆ. ಇಷ್ಟೆಲ್ಲ ತಾಕೀತು ಮಾಡಿದ ನಂತರವೂ ಈ ಕಡೆ ಗಮನ ವಹಿಸಲಿಲ್ಲವಾದರೆ ಮತ್ತು ಪುನರ್ಜನ್ಮ ತತ್ವ ಸಮರ್ಥನೆಯಲ್ಲಿ ಪುರಾವೆಗಳನ್ನು ಒದಗಿಸಲಿಲ್ಲವಾದರೆ, ವೇದಗಳಿಂದ ಸಾಬೀತುಪಡಿಸಬೇಕೇ ಹೊರತು ತನ್ನ ಬುದ್ಧವಂತಿಕೆಯಿಂದಲ್ಲ, ಅದಾಗ್ಯೂ ಉತ್ತರ ನೀಡಲು ಅಸಮರ್ಥರಾದರೆ ಪುನರ್ಜನ್ಮದ ವಿಶ್ವಾಸದ ಅನರ್ಹತೆ ಮೇಲೆ ಸದಾಕಾಲಕ್ಕೂ ಡಿಕ್ರಿಯಾಗಿರುವುದು. ವೇದವೇ ಎಲ್ಲಾ ಜ್ಞಾನ ತಂತ್ರಗಳ ಮೂಲ ಎನ್ನುವುದು ಅಸಂಗತ ಹಾಗೂ ಸಾಕ್ಷ್ಯರಹಿತ ಎಂದಾಗುವುದು.

**(ಪುರಾನಿ ತಹರೀರೇಂ ರೂಹಾನಿ ಕಝಾಯಿನ್, ಸಂಪುಟ–2, ಪುಟ–5)**

ಪುನಃ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರು ಐದು ನೂರು ರೂಪಾಯಿಗಳ ಬಹುಮಾನದ ಘೋಷಣೆಯನ್ನು ಮಾಡುತ್ತಾ ಹೇಳಿದರು:

"ಅಂತಿಮವಾಗಿ ನಿಮ್ಮ ಗಮನ ಸೆಳೆದು ವಿನಂತಿಸಿ ಕೊಳ್ಳವುದೇನೆಂದರೆ ನಾನು 1878 ಪೆಬ್ರವರಿಗಿಂತ ಮುಂಚೆ ಒಂದು ಜಾಹಿರಾತು ಐದು ನೂರು ರೂಪಾಯಿ ಬಹುಮಾನದೊಂದಿಗೆ ನೀಡಿದ್ದೆ. ನಾನು ಬರೆದ ಪುನರ್ಜನ್ಮ ವಿಶ್ವಾಸ, ಮಿಥ್ಯತೆ ಕುರಿತು ಪ್ರಬಂಧದ ಉತ್ತರ ಪಂಡಿತ್ ಖಡಕ್‌ಸಿಂಗ್ ಸಾಹೇಬ್ ಅಥವಾ ಬೇರೆ ಯಾರಾದರೂ ಪಂಡಿತರು, ನಾನು ಒದಗಿಸಿದ ಪುರಾವೆಗಳನ್ನು ಆಧ್ಯತೆಯ ಮೇರೆಗೆ ವೇದದಿಂದ ಉತ್ತರ ಕೊಟ್ಟು, ತನ್ನ ಬುದ್ಧಿ ಚಾತುರ್ಯದಿಂದ ರದ್ದುಗೊಳಿಸಿ ತೋರಿಸಿದರೆ ನಿಸ್ಸಂಶಯವಾಗಿ ಜಾಹೀರಾತಿನಲ್ಲಿ ಪ್ರಕಟಿಸಿದ ಮೊತ್ತಕ್ಕೆ (ಹಣ ಪಡೆಯಲು) ಅರ್ಹರಾಗಿರುವರು. ವಿಶೇಷವಾಗಿ ಖಡಕ್‌ಸಿಂಗ್ ಅವರಲ್ಲಿ ನಿವೇದನೆ ಏನೆಂದರೆ, ಅವರ ವಾದಕ್ಕೆ ನಾವು ಐದು ನಿಮಿಷದಲ್ಲಿ ಉತ್ತರ ನೀಡಬಲ್ಲೆವು. ನಿವೇದನೆ ಏನೆಂದರೆ ಈಗ ತನ್ನ ಸಾಮರ್ಥ್ಯವನ್ನು ಉಪಯೋಗಿಸಿಕೊಂಡು ನಿಯೋಜಿಸಿಕೊಂಡ ಕ್ರೈಸ್ತರ ಹಾಗೂ ಬ್ರಹ್ಮ ಸಮಾಜದವರಿಗೆ ತೋರಿಸಬೇಕು. ನಿಮ್ಮಲ್ಲಿ ಅಡಗಿರುವ ಸುಪ್ತ ಪ್ರತಿಭೆಗಳನ್ನು ಬಹಿರಂಗಗೊಳಿಸಬೇಕು ಇಲ್ಲವಾದರೆ ಬರಿ ಜನಸಾಮನ್ಯರ ಮುಂದೆ ಜಂಭಕೊಚ್ಚಿಕೊಳ್ಳುವುದೇ ಆಗುವುದು ಹೊರತು ಬೇರೇನು ಅಲ್ಲ."

**(ಪುರಾನಿ ತಹರೀರೇಂ ರೂಹಾನಿ ಖಝಾಯಿನ್, ಸಂಪುಟ–2, ಪುಟ–5)**

ಓದುಗರೇ! ಈ ಚರ್ಚೆಯಲ್ಲಿ ಖಡಕ್‌ಸಿಂಗ್ ಅವರಿಗೆ ಎಂತಹ ಅವಮಾನ ಎದುರಿಸಬೇಕಾಯಿತೆಂದರೆ ವೇದದೊಂದಿಗೆ ಅವರಿಗಿದ್ದ ಪ್ರೇಮವು ಅಂತ್ಯವಾಯಿತು ಮತ್ತು ಅದನ್ನು ತ್ಯಜಿಸಿ ಕ್ರೈಸ್ತರಾದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸಂದರ್ಭದಲ್ಲಿ ಬರೆದರು.

"ಈ ಸಮಯ ನನಗೆ ಮತ್ತೊಬ್ಬ ಪಂಡಿತ್ ಸಾಹೇಬರ ನೆನಪಾಯಿತು. ಅವರ ಹೆಸರು ಖಡಕ್‌ಸಿಂಗ್ ಎಂದಿದೆ. ಇವರು ವೇದಗಳ ಪರ ಚರ್ಚೆ ಏರ್ಪಡಿಸಲು ಖಾದಿಯಾನಿಗೆ ಬಂದಿದ್ದರು. ಖಾದಿಯಾನಿನ ಆರ್ಯಯರು ಎಷ್ಟು ಬೀಗಿದರು ಎಂದರೆ ಅವರು ಹೇಳಿದರು ನಮ್ಮ ಈ ಪಂಡಿತರಿಗೆ ನಾಲ್ಕು ವೇದಗಳು ಕಂಠಸ್ತವಾಗಿದೆ. ಚರ್ಚೆ ಪ್ರಾರಂಭವಾದಾಗ ಅವರ ಸ್ಥಿತಿ ಹೇಗಾಯಿತೆಂದರೆ ಅವರು ವಿವರವಾಗಿ ವೇದಗಳ ಎಲ್ಲಾ ಹೊಗಳಿಕೆಗಳನ್ನು ಮರೆತು ಬಿಟ್ಟರು. ಲೌಕಿಕ ಸ್ವಾರ್ಥಗಳಿಂದಾಗಿ ಇಸ್ಲಾಮ್ ಸ್ವೀಕರಿಸಲಿಲ್ಲ ಆದರೆ ಖಾದಿಯಾನಿನಿಂದ ನಿರ್ಗಮಿಸುತ್ತಲೆ, ವೇದಗಳಿಗೆ ನಮಸ್ಕರಿಸಿ ಮುಕ್ತಿ ಪಡೆದರು. ಮತ್ತು ಅವರು ಪ್ರಕಟಿಸಿದ ಲೆಕ್ಚರ್ ಅದು ರಿಯಾಝುೆ ಹಿಂದ್ ಮತ್ತು ಚಶ್ಮೆ–ಇ–ನೂರ್ ಅಮೃತ್‌ಸರದಲ್ಲಿ ಪ್ರಕಟನೆ ನೀಡಿದರು ಅದರಲ್ಲಿ ಸ್ಪಷ್ಟವಾಗಿ ಹೀಗೆ ಬರೆದಿದ್ದರು. ವೇದಗಳು ದೈವಿಕ ಜ್ಞಾನಗಳಿಂದ ಮತ್ತು ಸತ್ಯದಿಂದ ವಂಚಿತವಾಗಿವೆ ಆದುದರಿಂದ ಅವು ದೈವಿಕ ಗ್ರಂಥವಾಗಲು ಸಾಧ್ಯವಿಲ್ಲ." **(ಶಹನಂಯೇ ಹಖ್, ರೂಹಾನಿ ಖಝಾಯೀನ್, ಸಂಪುಟ–2, ಪುಟ–360)**

ಈಗ ನಾವು ಪುನರ್ಜನ್ಮದ (ತನಾಸುಖ್) ಕುರಿತು ಒಂದಿಷ್ಟು ವಿವರ ನೀಡುತ್ತೇವೆ. ಪುನರ್ಜನ್ಮ (ತನಾಸುಖ್) ಹಿಂದುಗಳ ವಿಶ್ವಾಸವಾಗಿದೆ. ಲೋಕದಲ್ಲಿ

*(ಉಳಿದ ಭಾಗ ಪುಟ ಸಂಖೆ 11 ರಲ್ಲಿ ಓದಿರಿ)*

# ಖುತ್‌ಬ ಜುಮುಅ

**ಯಹೂದಿಯರಾದ ಹತ್ತು ಮಂದಿ ಪ್ರಭಾವಿ ವ್ಯಕ್ತಿಗಳಾದರೂ ನನ್ನನ್ನು ನಂಬಿದ್ದರೆ ಈ ಎಲ್ಲಾ ಜನರು ನನ್ನನ್ನು ನಂಬುತ್ತಿದ್ದರೆಂದು ನಾನು ಅಲ್ಲಾಹನ ಬಗ್ಗೆ ಭರವಸೆ ಹೊಂದಿದ್ದೇನೆ. ಹಾಗೆ ದೈವಿಕ ಶಿಕ್ಷೆಯಿಂದ ಅವರು ವಿಮೋಚಿತರಾಗುತ್ತಿದ್ದರು.**

**ನಿಷ್ಠೆ ಮತ್ತು ಆತ್ಮೀಯತೆಯ ಮೂರ್ತಿರೂಪರಾಗಿದ್ದ ಬದರಿ ಸಹಾಬಿಯಾದ ಹಝ್ರತ್ ಸಅದ್ ಬಿನ್ ಮುಆಝ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ.**

**ಇತ್ತೀಚೆಗೆ ನಿಧನ ಹೊಂದಿದ ಮುಕರ್‍ರಮ ಹಾಜಿಯ ರುಖಿಯ್ಯಾ ಖಾಲಿದ್ ಸಾಹಿಬ, ಮುಕರ್‍ರಮ ಸಫಿಯ ಬೇಗಮ್ ಸಾಹಿಬ, ಮುಕರ್‍ರಮ್ ಅಲಿ ಅಹ್ಮದ್ ಸಾಹಿಬ್ ಮತ್ತು ಮುಕರ್‍ರಮ ರಫೀಖಾ ಬೀಬಿ ಸಾಹಿಬರ ಸದ್ಗುಣಗಳ ಬಗ್ಗೆ ಪ್ರಸ್ತಾವನರ ಮತ್ತು ಸವರೆಲ್ಲರ ನಮಾಝೆ ಜನಾಝ ಗಾಯಿಬ್ ನಿರ್ವಹಣೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **10–07–2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಕಳೆದ ಖುತ್‌ಬದಲ್ಲಿ ನಾನು ಪ್ರಸ್ತಾಪಿಸಿದ್ದೆ: ಅಹ್‌ಝಾಬ್ ಯುದ್ಧದ ನಂತರ, ಬನೂ ಖುರೈಝರ ದ್ರೋಹಕ್ಕೆ ಶಿಕ್ಷೆ ನೀಡಲು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅಲ್ಲಾಹನಿಂದ ಆಜ್ಞೆ ಲಭಿಸಿತು. ಅನಂತರ ಅವರೊಂದಿಗೆ ಯುದ್ಧವಾಯಿತು. ಬನೂ ಖುರೈಝ ಯುದ್ಧ ನಿಲ್ಲಿಸಿ ಹಝ್ರತ್ ಸಅದ್ ಬಿನ್ ಮುಆದ್ ಈ ಬಗ್ಗೆ ತೀರ್ಪು ನೀಡಲು ಸಮ್ಮತಿಸಿದರು. ಆ ಮೇಲೆ ಸಅದ್ ತೀರ್ಪು ನೀಡಿದರು. ಈ ಯುದ್ಧದ ಬಗ್ಗೆ ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಬರೆದಿದ್ದಾರೆ:

"ಅಹ್‌ಝಾಬ್ ಯುದ್ಧದ ಇಪ್ಪತ್ತು ದಿನಗಳ ನಂತರ ಮುಸ್ಲಿಮರು ಸಮಾಧಾನದ ಉಸಿರು ಬಿಡತೊಡಗಿದರು. ಆದರೆ ಬನೂ ಖುರೈಝರ ವಿಷಯ ತೀರ್ಮಾನ ಮಾಡಲಿಕ್ಕಿತ್ತು. ಅವರ ದ್ರೋಹ ಕಡೆಗಣಿಸು ವಂತಹದಾಗಿರಲಿಲ್ಲ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮರಳಿ ಬಂದ ಕೂಡಲೆ ತನ್ನ ಸಹಾಬರೊಂದಿಗೆ ಹೇಳಿದರು: ನೀವು ಮನೆಯಲ್ಲಿ ವಿಶ್ರಾಂತಿ ಪಡೆಯಬೇಡಿರಿ. ಸಾಯಂಕಾಲದೊಳಗೆ ಬನೂ ಖುರೈಝರ ಕೋಟೆಯನ್ನು ತಲಪಿರಿ. ತದನಂತರ ರಸೂಲುಲ್ಲಾಹ್(ಸ) ರವರು ಹಝ್ರತ್ ಅಲಿ(ರ) ರವರನ್ನು ಬನೂ ಖುರೈಝರವರ ಬಳಿ ಅವರು ಒಪ್ಪಂಧವನ್ನು ವಿರೋಧಿಸಿದ ಕಾರಣ ವಿಚಾರಿಸಲು ಕಳುಹಿಸಿದರು. ಬನೂ ಖುರೈಝ ಸಂಕೋಚಕ್ಕೆ ಒಳಗಾಗದೆ ಅಥವಾ ಕ್ಷಮೆ ಯಾಚಿಸದೆ ಅವರು ಹಝ್ರತ್ ಅಲಿ(ರ) ಮತ್ತು ಅವರ ಸಂಗಡಿಗರೊಂದಿಗೆ ಬಹಳ ಕೆಟ್ಟದಾಗಿ ವರ್ತಿಸಿದರು ಮತ್ತು ರಸೂಲುಲ್ಲಾಹ್(ಸ) ರವರನ್ನು ಹಾಗೂ ಅವರ ಕುಟುಂಬದ ಮಹಿಳೆಯರನ್ನು ಅಶ್ಲೀಲ ಮಾತುಗಳನ್ನಾಡ ತೊಡಗಿದರು ತದನಂತರ ಅವರು ಹೇಳಿದರು ನಮಗೆ ಮುಹಮ್ಮದ್(ಸ) ಅವರು ಯಾರು ಎಂದು ಗೊತ್ತಿಲ್ಲ. ಅವರಿಂದ ನಮ್ಮ ಯಾವ ಸಂಬಂಧವೂ ಇಲ್ಲ. ಹಝ್ರತ್ ಅಲಿ(ರ) ಅವರ ಈ ಉತ್ತರವನ್ನು ಕಂಡು ಹಿಂದಿರುಗಿ ಬಂದರು. ಆಗ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಸಹಾಬರವರೊಂದಿಗೆ ಯಹೂದಿಯರ ಕೋಟೆ ಕಡೆಗೆ ಹೋಗುತ್ತಿದ್ದರು. ಯಹೂದಿಯರು ರಸೂಲುಲ್ಲಾಹ್(ಸ) ಹಾಗೂ ಅವರ ಕುಟುಂಬದ ಮಹಿಳೆಯರನ್ನು ನಿಂದಿಸುತ್ತಿದ್ದ ಕಾರಣ ಹಝ್ರತ್ ಅಲಿ(ರ)ರವರು ರಸೂಲುಲ್ಲಾಹ್(ಸ)ರವರು ಯಹೂದಿಯರ ಈ ನಿಂದನೆಯಿಂದ ಅವರ ಮನಸ್ಸಿಗೆ ತೊಂದರೆ ಉಂಟಾಗಬಹುದು ಎಂದು ಅವರು ಹೇಳಿದರು ಯಾ ರಸೂಲುಲ್ಲಾ!! ನಾವು ಯುದ್ಧದಲ್ಲಿ ಭಾಗವಹಿಸುತ್ತಿದ್ದೇವೆ ನೀವು ತೊಂದರೆ ಮಾಡಿಕೊಳ್ಳಬೇಡಿ. ನೀವು ಹಿಂದಿರುಗಿ ಹೋಗಿ ಎಂದರು. ಅದಕ್ಕೆ ರಸೂಲುಲ್ಲಾಹ್(ಸ) ಹೇಳಿದರು ಆ ಯಹೂದಿಯರು ನಿಂದಿಸುತ್ತಿದ್ದಾರೆ ಎಂದು ನನಗೆ ಅರಿವಿದೆ ಮತ್ತು ನೀವು ಅವರ ನಿಂದನೆ ನಾನು ಕೇಳದಿರಲಿ ಎಂದು ನೀವು ಬಯಸುತ್ತಿದ್ದೀರಿ. ಹಝ್ರತ್ ಅಲಿ(ರ) ಹೇಳಿದರು ಹೌದು ಯಾ ರಸೂಲಲ್ಲಾಹ್! ಇದು ಸತ್ಯಾಂಶವಾಗಿದೆ. ಅದಕ್ಕೆ ಮತ್ತೆ ರಸೂಲುಲ್ಲಾಹ್(ಸ) ಹೇಳಿದರು ಅವರು ನಿಂದಿಸಿದರೆ ಏನಾಯಿತು. ಮೂಸಾ ನಬೀ ಅವರ ಸ್ವಂತ ನಬಿ ಆಗಿದ್ದರು ಅವರನ್ನು ಇದಕ್ಕಿಂತ ಹೆಚ್ಚಾಗಿ ತೊಂದರೆಗಳನ್ನು ನೀಡಿದ್ದಾರೆ. ಇದನ್ನು ಹೇಳುತ್ತಾ ಅವರು(ಸ) ಯಹೂದಿಯರ ಕೋಟೆಗಳ ಕಡೆ ಹೋದರು ಆದರೆ ಯಹೂದಿಯರು ತಮ್ಮ ಕೋಟೆಯ ಬಾಗಿಲುಗಳನ್ನು ಮುಚ್ಚಿ ಮುಸ್ಲಿಮರೊಂದಿಗೆ ಯುದ್ಧವನ್ನು ಪ್ರಾರಂಭಿಸಿದರು. ಅವರ ಮಹಿಳೆಯರೂ ಅವರೊಂದಿಗೆ ಯುದ್ಧದಲ್ಲಿ ಭಾಗವಹಿಸಿದರು. ಕೋಟೆಯ ಗೋಡೆಯ ಸಮೀಪ ಕೆಲ ಮುಸ್ಲಿಮರು ಕುಳಿತಿದ್ದಾಗ ಓರ್ವ ಯಹೂದಿ ಮಹಿಳೆಯು ಮೇಲಿನಿಂದ ಕಲ್ಲು ಎಸೆದು ಓರ್ವ ಮುಸ್ಲಿಮನನ್ನು ಕೊಂದು ಹಾಕಿದಳು. ಆದರೆ ಕೆಲವು ದಿನಗಳ ಮುತ್ತಿಗೆಯ ನಂತರ ಯಹೂದಿಯರು ತಾವು ದೀರ್ಘಕಾಲ ಮುಸ್ಲಿಮರನ್ನು ಎದುರಿಸಲಾರೆವು ಎಂದು ಮನವರಿಕೆ ಮಾಡಿದರು. ಅವರ ಮುಖಂಡರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೀಗೆ ಅಪೇಕ್ಷಿಸಿದರು: ನಮ್ಮ ಬಳಿಗೆ ನಮ್ಮ ಸ್ನೇಹಿತನೂ ಔಸ್ ಗೋತ್ರದ ಮುಖಂಡನೂ ಆಗಿರುವ ಅಬೂ ಲುಬಾಬ ಅನ್‌ಸಾರಿಯನ್ನು ಸಮಾಲೋಚನೆ ನಡೆಸಲು ಕಳುಹಿಸಿರಿ ಎಂದು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಬೂ ಲುಬಾಬರನ್ನು ಅವರ ಬಳಿಗೆ ಸಮಾಲೋಚನೆಗಾಗಿ ಕಳುಹಿಸಿದರು. ಯಹೂದಿಯರು ಅಬೂ ಲುಬಾಬರೊಂದಿಗೆ ಕೇಳಿದರು: ಮುಹಮ್ಮದ್ ಹೇಳಿದ್ದಾರೆ, ತೀರ್ಪು ನೀಡುವ ಹಕ್ಕು ನನಗೆ ಬಿಟ್ಟುಕೊಟ್ಟು ಆಯುಧಗಳನ್ನು ಕೆಳಗಿಡಿರಿ ಎಂದು. ಈ ಮಾತನ್ನು ನಾವು ಅಂಗೀಕರಿಸಬಹುದೇ? ಅಬೂ ಲುಬಾಬ ಬಾಯಿಯಲ್ಲಿ 'ನೀವು ಅಂಗೀಕರಿಸಬಹುದು' ಎಂದು ಹೇಳಿದರಾದರೂ ತಮ್ಮ ಕುತ್ತಿಗೆ ಮೇಲೆ ಕೈ ಚಲಾಯಿಸಿ ಕೊಲೆಗೈಯಲ್ಪಡುವ ಸಂಕೇತ ನೀಡಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯಹೂದಿಯರ ಬಗ್ಗೆ ಯಾವುದೇ ತೀರ್ಮಾನ ಮಾಡಿರಲಿಲ್ಲ. ಆದರೆ ಅಬೂ ಲುಬಾಬ ಈ ಅಪರಾದಕ್ಕೆ ಮರಣದಂಡನೆ ಹೊರತು ಬೇರೆ ಯಾವ ಶಿಕ್ಷೆ ದೊರಕಲು ಸಾಧ್ಯ ಎಂದು ಯೋಚಿಸಿ ಅದರ ಬಗ್ಗೆ ಹೇಳಲಿಲ್ಲವಾದರೂ ಸಂಜ್ಞೆಯಿಂದ ಅದನ್ನು ಸೂಚಿಸಿದರು. ಅದು ಯಹೂದಿಯರ ವಿನಾಶಕ್ಕೆ ಕಾರಣವಾಯಿತು. ತದನಂತರ ಯಹೂದಿಯರು, ನಾವು ಮುಹಮ್ಮದರ ತೀರ್ಪನ್ನು ಒಪ್ಪಲು ಸಿದ್ಧರಿಲ್ಲ ಬದಲಿಗೆ ನಾವು ನಮ್ಮ ಪ್ರತಿಜ್ಞಾಬದ್ಧ ಓಸ್ ಗೋತ್ರದ ನಾಯಕರಾದ ಸಅದ್ ಬಿನ್ ಮುಆಝ್(ರ) ರವರ ತೀರ್ಪನ್ನು ಓಪ್ಪುತ್ತೇವೆ ಎಂದು ಹೇಳಿದರು. ಆದರೆ ಆ ಸಂದರ್ಭದಲ್ಲಿ ಯಹೂದಿಯರ ಮಧ್ಯೆ ಭಿನ್ನಭಿಪ್ರಾಯ ಹುಟ್ಟಿತು. ಯಹೂದಿಯರಲ್ಲಿ ಕೆಲವರು ಹೇಳಿದರು ನಮ್ಮ ಖೌಮಿನವರು ದ್ರೋಹ ನೀಡಿದ್ದಾರೆ." ಸ್ಪಷ್ಟವಾಗಿತ್ತು "ಅಂದರೆ ನಾವು ದ್ರೋಹ ಮಾಡಿದ್ದೇವೆ ಮತ್ತು ಮುಸ್ಲಿಮರ ವರ್ತನೆಯಿಂದಲೂ ಸಾಬೀತಾಗುವುದೇನೆಂದರೆ ಅವರ ಧರ್ಮವೂ ಸತ್ಯವಾಗಿದೆ ಮತ್ತು ಅವರೆಲ್ಲರು ತಮ್ಮ ಧರ್ಮವನ್ನು ತ್ಯಜಿಸಿ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ್ದಾರೆ." ಭಿನ್ನಭಿಪ್ರಾಯ ಮಾಡಿರುವವರು. "ಉಮ್ರೋ ಬಿನ್ ಸೌದಾ ಎಂಬವನು ಓರ್ವ ಗೋತ್ರದ ಮುಖಂಡನಾಗಿದ್ದನು ಆತನು ತನ್ನ ಖೌಮಿನವರನ್ನು ನಿಂದಿಸುತ್ತ ಹೇಳಿದನು ನಾವು ದ್ರೋಹ ಮಾಡಿದ್ದೇವೆ ಅಂದರೆ ನಾವು ಈ ಒಪ್ಪಂದವನ್ನು ಮುರಿದಿದ್ದೇವೆ ಈಗ ಮುಸ್ಲಿಮರಾಗಿರಿ ಅಥವಾ ಸುಂಕ (ಜಝಿಯ) ನೀಡಲು ಸಿದ್ಧವಿರಿ. ಯಹೂದಿಯರು ಹೇಳಿದರು ನಾವು ಮುಸ್ಲಿಮರು ಆಗುವುದಿಲ್ಲ ಮತ್ತು ಜಿಝ್‌ಯ ಸಹ ನೀಡುವುದಿಲ್ಲ ಅದರಿಂದ ಕೊಲೆಯಾಗುವುದು ಉತ್ತಮವಾಗಿರುವುದು.

ತದನಂತರ ಆತನು ಅವರಿಗೆ ಹೇಳಿದನು ನಾನು ನಿಮ್ಮ ಬಗ್ಗೆ ಜವಾಬ್ದಾರನಲ್ಲ." ಅವರಿಗೆ ಬಹಳ ತಿಳಿಮಾತು ಹೇಳಿದರು. ಆದರೆ ಅವರು ಅವರ ಮಾತುಗಳನ್ನು ತಿಳಿಯದಿದ್ದ ಆತನು ಹೇಳಿದನು ನಾನು ನಿಮ್ಮ ಬಗ್ಗೆ ಜವಾಬ್ದಾರನಲ್ಲ ನಾನು ನಿಮ್ಮೊಂದಿಗೆ ಇಲ್ಲ "ಇದನ್ನು ಹೇಳಿ ಆತನು ಕೋಟೆಯಿಂದ ಹೊರಹೋದನು. ಆತನು ಕೋಟೆಯಿಂದ ಹೊರಬಂದನು ಮುಸ್ಲಿಮರ ಒಂದು ಗುಂಪು ಆತನನ್ನು ನೋಡಿದರು. ಆ ಗುಂಪಿನ ನೇತೃತ್ವ ಮುಹಮ್ಮದ್ ಬಿನ್ ಮುಸ್ಲಿಮ(ರ) ರವರು ವಹಿಸಿಕೊಂಡಿದ್ದರು. ಆತನನ್ನು ನೀವು ಯಾರು ಎಂದು ಪ್ರಶ್ನಿಸಿದರು. ಅವರು ಹೇಳಿದರು ನಾವು ಇಂತವನಾಗಿದ್ದೇನೆ ಎಂದು ಹೇಳಿದ ಮುಹಮ್ಮದ್ ಬಿನ್ ಮುಸ್ಲಿಮ(ರ) ರವರು ಹೇಳಿದರು **ಅಲ್ಲಾಹುಮ್ಮ ಲಾ ತಹ್‌ರಿಮ್‌ನಿ ಇಖಾಲತ ಅಸರಾತಿಲ್‌ಕಿರಾಮಿ**. ಅಂದರೆ ನೀವು ಕ್ಷೇಮವಾಗಿ ಹೋಗಿರಿ ಎಂದು ಹಾರೈಸಿ ಹೀಗೆ ಅಲ್ಲಾಹನಲ್ಲಿ ದುಆ ಮಾಡಿದರು" ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ(ರ) ರವರು ದುಆ ಮಾಡಿದರು "ಎಲ್ಲೈ ದೇವರೇ ನನಗೆ ಗಣ್ಯವ್ಯಕ್ತಿಗಳ ತಪ್ಪುಗಳ ಮೇಲೆ ಪರದೆ ಹಾಕುವ ಒಳ್ಳೆಯ ಕಾರ್ಯಗಳಿಂದ ನನಗೆ ವಂಚಿತನಾಗಬೇಡ. ಅಂದರೆ ಈ ವ್ಯಕ್ತಿಯು ತನ್ನ ಕಾರ್ಯದಿಂದ ಹಾಗೂ ತನ್ನ ಖೌಮಿನ ಕಾರ್ಯಗಳಿಂದ ಪಶ್ಚಾತಾಪ ಪಡುತ್ತಾನೆ ಆದ್ದರಿಂದ ನಮ್ಮ ನೈತಿಕ ಕರ್ತವ್ಯವೇನೆಂದರೆ ನಾವು ಆತನನ್ನು ಕ್ಷಮಿಸಬೇಕು. ಆದ್ದರಿಂದ ನಾನು ಆತನನ್ನು ಸೆರೆಹಿಡಿಯಲಿಲ್ಲ. ಎಲ್ಲೈ ಅಲ್ಲಾಹನೇ ನನಗೆ ಇಂತಹ ಉತ್ತಮ ಕಾರ್ಯಗಳಲ್ಲಿ ಯಾವಾಗಲೂ ತೊಡಗಲು ಅವಕಾಶ ನೀಡು. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ಈ ಘಟನೆಯ ಬಗ್ಗೆ ತಿಳಿದಾಗ ಅವರು ಮುಹಮ್ಮದ್ ಬಿನ್ ಮುಸ್ಲಿಮ(ರ) ರವರನ್ನು ದೋಷಿಸಲಿಲ್ಲ. ಅವರನ್ನು ಪ್ರಶ್ನಿಸಲಿಲ್ಲ ಅವರು ಏಕೆ ಆ ಯಹೂದಿಯನ್ನು ಸೆರೆಹಿಡಿಯಲಿಲ್ಲ ಎಂದು? ಬದಲಿಗೆ ಅವರ ಈ ಕೃತ್ಯವನ್ನು ಇಷ್ಟಪಟ್ಟರು." ಅವರು ಈ ವಿಷಯ ಕುರಿತು ಪ್ರಶಂಸಿದರು.

"......ಈ ಘಟನೆಗಳು ವೈಯುಕ್ತಿಕ ಘಟನೆಗಳಾಗಿದ್ದವು. ಬನೂ ಖುರೈಝುರವರು ತಮ್ಮ ಹಟದಲ್ಲಿ ಸ್ಥಿರವಾಗಿದ್ದರು." ಆದರೂ ಒಂದೆರಡು ಘಟನೆಗಳು ಇಂತಹದ್ದು ದೊರೆಯುತ್ತವೆ, ಕೆಲವು ವ್ಯಕ್ತಿಗಳು ಇದ್ದರು ಅವರು ಬನೂ ಖುರೈಝುರವರ ನಿರ್ಣಯಗಳ ಮೇಲೆ ಭೀನ್ನಾಭಿಪ್ರಾಯ ಪಡುತ್ತಿದ್ದರು. ಅವರು ಮುಸ್ಲಿಮರೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕೆಂದು ಬಯಸುತ್ತಿದ್ದರು. ಆದರೆ ಇದು ವೈಯುಕ್ತಿಕ ಘಟನೆಗಳಾಗಿದ್ದವು. ಖೌಮಿನಲ್ಲಿ ಅವರು ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಆಜ್ಞೆಯನ್ನು ಒಪ್ಪಬಾರದು ಎಂದು ಹಟ ಹಿಡಿದಿದ್ದರು. "ಮತ್ತು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಆಜ್ಞೆಗಳನ್ನು ನಿರಾಕರಿಸುತ್ತ ಸಅದ್(ರ) ರವರ ತೀರ್ಮಾನಕ್ಕೆ ಒತ್ತಾಯಿಸಿದರು." ಅವರೆಲ್ಲರು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ತೀರ್ಮಾನವನ್ನು ಒಪ್ಪಲು ಇಷ್ಟಪಡಲಿಲ್ಲ ಬದಲಿಗೆ ಅವರು ಹೇಳಿದರು ಸಅದ್ ನಮ್ಮ ನಡುವೆ ತೀರ್ಪನ್ನು ನೀಡಬೇಕು ಎಂದು ಒತ್ತಾಯಿಸಿದರು. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಸಹ ಅವರ ಈ ಬೇಡಿಕೆಯನ್ನು ಒಪ್ಪಿಕೊಂಡರು. ಸಅದ್(ರ) ಅವರು ಯುದ್ಧದಲ್ಲಿ ಗಾಯ ಗೋಂಡಿದ್ದರು ಅವರಿಗೆ ನಿಮ್ಮ ತೀರ್ಮಾನಕ್ಕೆ ಬನೂ ಖುರೈಝುರವರು ಒಪ್ಪಿದ್ದಾರೆ ಎಂದು ತಿಳಿಸಿದರು." ಆದ್ದರಿಂದ ಒಂದು ತೀರ್ಮಾನಿಸಿರಿ. ಈ ಅಭಿಪ್ರಾಯವು ಪ್ರಕಟಗೊಂಡಾಗ ಬನೂ ಖುರೈಝುರೊಂದಿಗೆ ಪ್ರತಿಜ್ಞಾನಬದ್ಧರಾರ ಓಸ್ ಗೋತ್ರದ ಜನರು ಸಅದ್(ರ) ರವರ ಬಳಿ ಹೋಗಿ ಹೀಗೆ ಒತ್ತಾಯಿಸಿದರು ಖಝ್‌ರಜ್ ಗೋತ್ರದವರು ತಮ್ಮ ಪ್ರತಿಜ್ಞಾಬದ್ಧರಾದ ಯಹೂದಿಯರನ್ನು ಯಾವಾಗಲು ಶಿಕ್ಷೆಯಿಂದ ರಕ್ಷಿಸಿದ್ದಾರೆ. ಆದ್ದರಿಂದ ಇಂದು ನೀವು ಸಹ ತಮ್ಮ ಪ್ರತಿಜ್ಞಾಬದ್ಧ ಗೋತ್ರದವರ ಪಕ್ಷದಲ್ಲಿ ತೀರ್ಪನ್ನು ನೀಡಬೇಕು. ಎಂದು. ಸಅದ್(ರ) ಗಾಯಗಳ ಕಾರಣದಿಂದ ಸವಾರಿಯ ಮೇಲೆ ಸವಾರರಾಗಿ ಬನೂ ಖುರೈಝುರವರ ಬಳಿ ಹೋದರು. ಅವರ ಖೌಮಿನ ಜನರು ಅವರ ಅಕ್ಕಾಪಕ್ಕ ಓಡೊಡಿ ಹೋಗುತ್ತಿದ್ದರು. ಅದರೊಂದಿಗೆ ಸಅದ್(ರ) ರವರಲ್ಲಿ ಬನೂ ಖುರೈಝುರವರ ವಿರುದ್ಧ ತೀರ್ಪನ್ನು ನೀಡದಿರಿ ಎಂದು ಒತ್ತಾಯಿಸುತ್ತಿದ್ದರು. ಆದರೆ ಸಅದ್(ರ) ಕೇವಲ ಹೀಗೆ ಉತ್ತರಿಸುತ್ತಿದ್ದರು ಯಾರಿಗೆ ತೀರ್ಪನ್ನು ನೀಡಲು ಅವಕಾಶ ನೀಡಲಾಗುತ್ತದೆಯೋ ಆತನು ನ್ಯಾಯದಿಂದ ತೀರ್ಪು ನೀಡಬೇಕು. ಆದ್ದರಿಂದ ನಾನು ನ್ಯಾಯದಿಂದ ತೀರ್ಮಾನಿಸುವೆನು.

ಸಅದ್ ಬನೂ ಖುರೈಝುರ ಕೋಟೆಯನ್ನು ತಲಪಿದಾಗ ಬನೂ ಖುರೈಝು ಕೋಟೆಗೋಡೆಗೆ ಸಮೀಪ ಅವರನ್ನು ನಿರಿಕ್ಷಿಸುತ್ತಾ ನಿಂತಿದ್ದರು. ಇನ್ನೊಂದು ಬದಿಯಲ್ಲಿ ಮುಸ್ಲಿಮರು ಕುಳಿತಿದ್ದರು. ಹಝ್ರತ್ ಸಅದ್ ಮೊದಲು ತನ್ನ ಗೋತ್ರದ ಜನರೊಂದಿಗೆ ಕೇಳಿದರು: ನಾನು ಮಾಡುವ ತೀರ್ಪು ಅಂಗೀಕರಿಸುವುದಾಗಿ ನೀವು ನನಗೆ ವಾಗ್ದಾನ ಮಾಡುವಿರೋ? ಆ ಜನರು ಹೇಳಿದರು: ಅಂಗೀಕರಿಸುವೆವು. ಅನಂತರ ಹಝ್ರತ್ ಸಅದ್ ಬನೂ ಖುರೈಝುರೊಂದಿಗೆ ಕೇಳಿದರು: ನಾನು ಮಾಡುವ ತೀರ್ಪನ್ನು ನೀವು ಅಂಗೀಕರಿಸುವುದಾಗಿ ವಾಗ್ದಾನ ಮಾಡುವಿರೋ? ಅವರು ಹೇಳಿದರು: ನಾವು ಅಂಗೀಕರಿಸುವೆವು. ಅನಂತರ ಹಝ್ರತ್ ಸಅದ್ ನಾಚಿಕೆಯಿಂದ ಬೇರೆ ಕಡೆಗೆ ನೋಡುತ್ತ ತಗ್ಗಿದ ದೃಷ್ಟಿಯಿಂದ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನೋಡುತ್ತಾ ಕೇಳಿದರು: 'ತಾವು ಸಹ ವಾಗ್ದಾನ ಮಾಡುವಿರೋ?' ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹ ಹೇಳಿದರು ಅಂಗೀಕರಿಸುತ್ತೇನೆ ಎಂದು. ಹಝ್ರತ್ ಸಅದ್ ಈ ಮೂವರಿಂದ ವಾಗ್ದಾನವನ್ನು ಪಡೆದ ನಂತರ ಬೈಬಲಿನ ಆಜ್ಞೆಗಳ ಪ್ರಕಾರ ತೀರ್ಪು ನೀಡಿದರು. ಬೈಬಲಿನಲ್ಲಿ ಹೀಗೆ ಬರೆದಿದೆ:

"ನೀವು ಒಂದು ಪಟ್ಟಣವನ್ನು ಸ್ವಾಧೀನ ಮಾಡಿಕೊಳ್ಳುವುದಕ್ಕೆ ಅದರ ಹತ್ತಿರ ಬಂದಾಗ ಮೊದಲು ಅದು ಯುದ್ಧವಿಲ್ಲದೆ ಸಮಾಧಾನದಿಂದಲೇ ಅಧೀನವಾಗಬಹುದೆಂದು ಪ್ರಕಟಿಸಬೇಕು. ಅದರಲ್ಲಿರುವವರು ಒಪ್ಪಿ ನಿಮಗೆ ಬಾಗಿಲನ್ನು ತೆರೆದುಕೊಟ್ಟರೆ ಅವರೆಲ್ಲರೂ ನಿಮಗೆ ಬಿಟ್ಟೀ ಕೆಲಸ ಮಾಡುವ ದಾಸರಾಗಬೇಕು. ಅವರು ನಿಮ್ಮ ಮಾತಿಗೆ ಸಮ್ಮತಿಸದೆ ಎದುರಿಸಿದರೆ ನೀವು ಆ ಪಟ್ಟಣಕ್ಕೆ ಮುತ್ತಿಗೆ ಹಾಕಬೇಕು. ನಿಮ್ಮ ದೇವರಾದ ಯಹೋವನು ಆ ಪಟ್ಟಣವನ್ನು ತಮ್ಮ ವಶ ಮಾಡಿದಾಗ ಅದರಲ್ಲಿರುವ ಗಂಡಸರೆಲ್ಲರನ್ನೂ ಕನಿಕರಿಸದೆ ಸಂಹಾರ ಮಾಡಬೇಕು. ಹೆಂಗಸರನ್ನೂ ಮಕ್ಕಳನ್ನೂ ದನಗಳನ್ನೂ ಊರಲ್ಲಿರುವ ಆಸ್ತಿಯನ್ನೂ ನೀವು ಸ್ವಂತಕ್ಕೆ ತೆಗೆದುಕೊಳ್ಳಬಹುದು. ನಿಮ್ಮ ದೇವರಾದ ಯುಹೋವನು ನೀವು ವಶಪಡಿಸಿದ ಶತ್ರುಗಳ ಆಸ್ತಿಯನ್ನು ನೀವೇ ಅನುಭೋಗಿಸಬಹುದು. (ಇಸ್ತಿಸ್ನಾ ಬಾಬ್ 20, ಆಯತ್ 10–17 / ಕನ್ನಡ ಬೈಬಲ್, ಧರ್ಮೋಪದೇಶ ಕಾಂಡ 20:10–14).

ಬೈಬಲಿನ ಈ ಆಜ್ಞೆಗಳನ್ನು ಹಝ್ರತ್ ಸಅದ್ ಪಠಿಸಿ ಅದಕ್ಕನುಸಾರವಾಗಿ ತೀರ್ಪು ನೀಡಿದರು. "ಬೈಬಲ್‌ನ ಆ ಆಜ್ಞೆಯಿಂದ ವ್ಯಕ್ತವಾಗುವುದೇನೆಂದರೆ ಒಂದು ವೇಳೆ ಯಹೂದಿಯರು ವಿಜಯಶಾಲಿ ಆಗುತ್ತಿದ್ದರೆ ಮತ್ತು ಮುಹಮ್ಮದ್(ಸ) ರವರು ಸೋತು ಹೋಗುತ್ತಿದ್ದರೆ ಬೈಬಲ್‌ನ ಈ ತೀರ್ಪಿನ ಪ್ರಕಾರ ಮೊಟ್ಟ ಮೊದಲಿಗೆ ಎಲ್ಲಾ ಮುಸ್ಲಿಮರನ್ನು ಕೊಲ್ಲಲಾಗುತ್ತಿತ್ತು. ಪುರುಷರು, ಮಹಿಳೆಯರು, ಮಕ್ಕಳು ಎಲ್ಲರು ಇತಿಹಾಸದಲ್ಲಿ ಬರೆದ ಹಾಗೆ ಯಹೂದಿಯರು ಹೀಗೆ ಬಯಸುತ್ತಿದ್ದರು ಅಂದರೆ ಅವರು ಪುರುಷರನ್ನು, ಮಹಿಳೆಯರನ್ನು, ಮತ್ತು ಮಕ್ಕಳನ್ನು ಎಲ್ಲರನ್ನು ಒಮ್ಮೆಯೇ ಕೊಲ್ಲಲು ಬಯಸಿದ್ದರು. ಆದರೂ ಒಂದು ವೇಳೆ ಅವರು ಹೆಚ್ಚು ರಿಯಾಯಿತಿ ನೀಡುತ್ತಿದ್ದರು ಎಂದರೆ ಅವರು ಇಸ್ತಿಸ್ನಾನ ಮೇಲ್ಕಂಡ ತೀರ್ಪಿನ ಪ್ರಕಾರ ಅವರಿಂದ ದೂರದ ರಾಜ್ಯಗಳ ಖೌಮುಗಳನ್ನು ವರ್ತಿಸುವ ಹಾಗೆ ವರ್ತಿಸುತ್ತಿದ್ದರು. ಅವರು ಎಲ್ಲಾ ಪುರುಷರನ್ನು ಕೊಲ್ಲುತ್ತಿದ್ದರು ಮತ್ತು ಮಹಿಳೆಯರನು, ಹುಡುಗರನ್ನು ಮತ್ತು ಎಲ್ಲಾ ಸಂಪತ್ತನ್ನು ಲೂಟಿ ಮಾಡುತ್ತಿದ್ದರು. ಹಝ್ರತ್ ಸಅದ್ ಬನೂ ಖುರೈಝು ಗೋತ್ರದೊಂದಿಗೆ ಪ್ರತಿಜ್ಞಾ ಬದ್ಧರಾದ ಗೋತ್ರದವರೂ ಅವರ ಸ್ನೇಹಿತರೂ ಆಗಿದ್ದರು. ಇಸ್ಲಾಮಿನ ಧಾರ್ಮಿಕ ನಿಯಮಗಳ ಪ್ರಕಾರ ತೀರ್ಪು ನೀಡುವುದಾದರೆ ಖಂಡಿತವಾಗಿಯೂ ಯಹೂದಿಯರ ಜೀವಗಳು ಸುರಕ್ಷಿತವಾಗುತ್ತಿತ್ತು. ಆದರೆ ಅವರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತೀರ್ಪು ನೀಡುವುದನ್ನು ಸಮ್ಮತಿಸಲಿಲ್ಲ. ಆದುದರಿಂದ ಹಝ್ರತ್ ಮೂಸಾ ಅಲೈಹಿಸ್ಸಲಾಮರ ಬೈಬಲಿನ ಧರ್ಮೋಪದೇಶ ಕಾಂಡದಲ್ಲಿ ಇಂತಹ ಸಂದರ್ಭಗಳಿಗೋಸ್ಕರ ಮೊದಲೇ ಬರೆದಿಟ್ಟ ನಿಯಮಗಳಿಗೆ ಅನುಸಾರವಾಗಿ ಹಝ್ರತ್ ಸಅದ್ ತೀರ್ಪು ನೀಡಿದರು. ಈ ತೀರ್ಪಿನ ಹೊಣೆಗಾರಿಕೆಯನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲಾಗಲಿ ಮುಸ್ಲಿಮರ ಮೇಲಾಗಲಿ ಹೊರಿಸಲಾಗದು. ಈ ತೀರ್ಮಾನಕ್ಕೆ ಹೊಣೆಗಾರರು ಹಝ್ರತ್ ಮೂಸಾ(ಅ), ಹಝ್ರತ್ ಮೂಸಾರವರ ಗ್ರಂಥ ಮತ್ತು ಅನ್ಯ ಜನಾಂಗದವರೊಂದಿಗೆ ಈ ರೀತಿ ಸಾವಿರಾರು ವರ್ಷಗಳಿಂದ ವರ್ತಿಸಿದ ಯಹೂದಿಯರಾಗಿದ್ದಾರೆ. ಯಹೂದಿಯರನ್ನು ದಯಾಪೂರ್ಣವಾದ ತೀರ್ಮಾನಕ್ಕೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಹ್ವಾನಿಸಿದ್ದರೂ ಯಹೂದಿಯರು ಆ ಆಹ್ವಾನ ನಿರಾಕರಿಸಿದರು. ನಾವು ಮುಹಮ್ಮದರ ತೀರ್ಪನ್ನು ಒಪ್ಪಲು ಸಿದ್ಧರಿಲ್ಲ ಎಂದು ಅವರು ಹೇಳಿದ್ದರು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಬರೆಯುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ದೌರ್ಜನ್ಯ ಮಾಡಿದರೆಂದು ಕ್ರೈಸ್ತ ಲೋಕ ಬೊಬ್ಬೆ ಹಾಕುತ್ತಿದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬೇರೆ ಯಾವುದೇ ಸಂದರ್ಭದಲ್ಲಿ ಯಾವತ್ತೂ ಇಂತಹ ದೌರ್ಜನ್ಯ ಮಾಡಲಿಲ್ಲ ಎಂಬುದನ್ನು ಕ್ರೈಸ್ತರಾದ ಬರಹಗಾರರು ಏಕೆ ನೋಡುವುದಿಲ್ಲ. ಬೇರೆ ಎಲ್ಲಿಯೂ ದೌರ್ಜನ್ಯ ಕಾಣುವುದೇ ಇಲ್ಲ. ನೂರಾರು ಸಾರಿ ಶತ್ರುಗಳು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ದಯೆಗೆ ತಮ್ಮನ್ನು ಬದ್ಧಗೊಳಿಸಿದಾಗ ಪ್ರತಿ ಸಾರಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ಕ್ಷಮಿಸಿದರು. ಈ ಒಂದೇ ಒಂದು ಸಂಧರ್ಭದಲ್ಲಿ ಶತ್ರುಗಳು ಒತ್ತಾಯ ಪೂರ್ವಕವಾಗಿ ಹೇಳಿದರು: ನಾವು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ತೀರ್ಪನ್ನು ಅಂಗೀಕರಿಸಲಾರೆವು ಎಂದು. ಇಲ್ಲಿ ದೌರ್ಜನ್ಯ ನಡೆದಿದ್ದರೆ ಅದು ಯಹೂದಿಯರೇ ಹಝ್ರತ್ ರಸೂಲ್

ಸಲ್ಲಲ್ಲಾಹು ಅಲೈಹಿ ವಸಲ್ಲಮರ ತೀರ್ಪನ್ನು ಅಂಗೀಕರಿಸಲು ಒಪ್ಪದೆ ಅವರು ತಮ್ಮ ಮೇಲೆಯೇ ಮಾಡಿದ ದೌರ್ಜನ್ಯವಾಗಿದೆ.

ಅಹ್‌ಝಾಬ್ ಯುದ್ಧದ ಮುಕ್ತಾಯದ ನಂತರ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದರು: ಇಂದಿನಿಂದ ಯಾವ ಮುಶ್ರಿಕನೂ ನಮ್ಮ ಮೇಲೆ ದೌರ್ಜನ್ಯ ಎಸೆಗುವುದಿಲ್ಲ. ಈಗ ಇಸ್ಲಾಮ್ ಸ್ವತಃ ಉತ್ತರ ನೀಡುತ್ತದೆ ಮತ್ತು ಯಾರು ನಮ್ಮ ಮೇಳೆ ದೌರ್ಜನ್ಯ ಎಸಗುತ್ತಾರೊ ಅವರ ಮೇಲೆ ನಾವು ಅಕ್ರಮಿಸುವೆವು. ತದನಂತರ ಹಾಗೆಯೇ ಆಯಿತು. ಅಹ್‌ಝಾಬ್ ಯುದ್ಧದಲ್ಲಿ ಕುಫ್ಫಾರರ ನಷ್ಟ ಏನಾಗಿತ್ತು? ಕೆಲವು ಜನರು ಮರಣ ಹೊಂದಿದ್ದರು. ಅವರು ಮತ್ತೊಮ್ಮೆ ಮುಂದಿನ ವರ್ಷ ಎಲ್ಲಾ ಸಿದ್ಧತೆಯೊಂದಿಗೆ ಬರಬಹುದಾಗಿತ್ತು. ಇಪ್ಪತ್ತು ಸಾವಿರದ ಬದಲು ನಲವತ್ತು ಸಾವಿರ ಅಥವಾ ಐವತ್ತು ಸಾವಿರ ಜನರ ಸೈನ್ಯವನ್ನು ಸಿದ್ಧಗೊಳಿಸಿ ಬರಬಹುದಾಗಿತ್ತು ಬದಲಿಗೆ ಅವರು ವ್ಯವಸ್ಥೆ ಮಾಡಬಹುದಾದರೆ ಅವರು ಒಂದು ಒಂದುವರೆ ಲಕ್ಷದ ಜನರ ಸೈನ್ಯವನ್ನು ಸಿದ್ಧಗೊಳಿಸಬಹುದಾಗಿತ್ತು. ಆದರೆ ಇಪ್ಪತ್ತೊಂದು ವರ್ಷಗಳ ಸತತ ಪ್ರಯತ್ನದ ನಂತರ ಕುಫ್ಫಾರರ ಮನಸ್ಸಿಗೆ ಅಲ್ಲಾಹನು ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರೊಂದಿಗಿದ್ದಾನೆ ಎಂದು ಅರಿವಾಯಿತು. ಅವರಿಗೆ ಮೂರ್ತಿಗಳು ಸುಳ್ಳಾಗಿವೆ ಮತ್ತು ಲೋಕದ ಸೃಷ್ಠಿಕರ್ತನೂ ಒಬ್ಬನೇ ಆಗಿದ್ದಾನೆ ಎಂದು ಅರಿವಾಯಿತು. ಅವರು ದೇಹಗಳು ಉತ್ತಮವಾಗಿದ್ದವು ಆದರೆ ಅವರ ಮನಸ್ಸುಗಳು ಮುರಿದು ಹೋಗಿದ್ದವು. ಅಂದರೆ ಕಾಫಿರ್‌ಗಳು ಅವರು ಬಾಹ್ಯವಾಗಿ ತಮ್ಮ ಮೂರ್ತಿಗಳ ಮುಂದೆ ಬಾಗುತ್ತಿದ್ದರು ಆದರೆ ಅವರ ಮನಸ್ಸುಗಳಲ್ಲಿ **ಲಾಇಲಾಹ ಇಲ್ಲಲ್ಲಾಹ್**ನ ಧ್ವನಿ ಗುಟ್ಟುತ್ತಿತ್ತು." (ದೀಬಾಚ ತಫ್‌ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್ ಸಂಪುಟ–20, ಪುಟ–282–287)

ಹಝ್ರತ್ ಅಬೂ ಸಯೀದ್ ಖುದ್ರಿ[ರ] ಅವರಿಂದ ವರದಿ ಆಗಿದೆ ಅವರು ಹೇಳುತ್ತಾರೆ: ಕೆಲವು ಜನರು ಹಝ್ರತ್ ಸಅದ್ ಬಿನ್ ಮುಆಝ್[ರ] ರವರ ತೀರ್ಪನ್ನು ಸ್ವೀಕರಿಸು ಶರತ್ತಿಗೆ ಕೋಟೆಯಿಂದ ಹೋರಬಂದರು. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹಝ್ರತ್ ಸಅದ್[ರ] ರವರನ್ನು ಕರೆಸಿದಾಗ ಅವರು ಒಂದು ಕತ್ತೆಯ ಮೇಲೆ ಸವಾರರಾಗಿ ಬಂದರು. ಮಸೀದಿಯ ಸಮೀಪ ಬಂದಾಗ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದರು: ನೀವೆಲ್ಲರು ನಿಮ್ಮಲ್ಲಿ ಉತ್ತವಾಗಿರುವವನ ಸ್ವಾಗತಕ್ಕಾಗಿ ಎದ್ದು ನಿಲ್ಲಿರಿ ಅಥವಾ ತಮ್ಮ ಸರದಾರನ ಸ್ವಾಗತಕ್ಕಾಗಿ ಎದ್ದು ನಿಲ್ಲಿರಿ. ತದನಂತರ ಮತ್ತೆ ರಸೂಲುಲ್ಲಾಹ್[ಸ] ಹೇಳಿದರು ಸಅದ್[ರ] ಇವರೆಲ್ಲರು ನಿಮ್ಮ ತೀರ್ಪಿಗಾಗಿ ಇಳಿದು ಬಂದಿದ್ದಾರೆ. ಅದಕ್ಕೆ ಅವರು ಹೇಳುತ್ತಾರೆ ಹೀಗಿದ್ದಲ್ಲಿ ನಾನು ಅವರ ಬಗ್ಗೆ ಹೀಗೂ ತೀರ್ಪನ್ನು ನೀಡುತ್ತೇನೆ ಅಂದರೆ ಅವರಲ್ಲಿ ಯುದ್ಧವಾಡಳು ಸಿದ್ಧವಾಗಿರುವವರನ್ನು ವಧಿಸುವುದಾಗಿ ಮತ್ತು ಅವರ ಕುಟುಂಬದವರನ್ನು ಸೆರೆಯಾಳು ಮಾಡುವುದಾಗಿ ತೀರ್ಪನ್ನು ನೀಡುವೆನು. ಇದಕ್ಕೆ ರಸೂಲುಲ್ಲಾಹ್[ಸ] ಹೇಳಿದರು ನೀವು ಅಲ್ಲಾಹನ ಆಜ್ಞೆಯ ಮೆರೆಗೆ ತೀರ್ಪನ್ನು ನೀಡಿದ್ದೀರಿ. ಅಥವಾ ನೀವು ರಾಜನ ಹಾಗೆ ತೀರ್ಪು ನೀಡಿದ್ದೀರಿ. ಇದು ಬುಖಾರಿಯ ವರದಿ ಆಗಿದೆ.

(ಸಹೀಹ್ ಬುಖಾರಿ ಕಿತಾಬ್ ಮುನಾಖಿಬುಲ್ ಅನ್ಸಾರ್, ಹದೀಸ್–3804)

ಈ ಘಟನೆಗೆ ಸಂಬಂದಿಸಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಸ್ವಲ್ಪ ಹೆಚ್ಚಿಗೆ ವಿವರ ನೀಡಿದ್ದಾರೆ. ಕೆಲವು ವಿಷಯಗಳಿವೆ ಅದನ್ನು ನಾನು ಇಲ್ಲಿ ಪ್ರಸ್ತಾಪಿಸುತ್ತೇನೆ. ಅವರು ಬರೆಯುತ್ತಾರೆ: ಕೊನೆಗೆ ಕನಿಷ್ಠ 20 ದಿವಸಗಳ ಮುತ್ತಿಗೆಯ ನಂತರ ಯಹೂದಿಯರು ಎಂತಹ ವ್ಯಕ್ತಿಯಿಂದ ತಮ್ಮ ಬಗ್ಗೆ ತೀರ್ಪನ್ನು ಸ್ವೀಕರಿಸಲು ಸಿದ್ಧರಾದರು ಎಂದರೆ ಆತನು ಅವರೊಂದಿಗೆ ಪ್ರತಿಜ್ಞಾ ಬದ್ಧನಾಗಿದ್ದರೂ ಅವರ ಕೃತ್ಯಗಳ ಕಾರಣದಿಂದ ಆತನಿಗೆ ತನ್ನ ಮನಸ್ಸಿನಲ್ಲಿ ಅವರಿಗಾಗಿ ಕರುಣೆ ಇರಲಿಲ್ಲ. ಮತ್ತು ಆತನು ನ್ಯಾಯದಿಂದ ತೀರ್ಮಾನ ಮಾಡುವವನಾಗಿದ್ದರೂ ಆತನ ಮನಸ್ಸಿನಲ್ಲಿ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಹಾಗೆ ದಯೇ ಇರಲಿಲ್ಲ. ಅದರ ವಿವರವೂ ಹೀಗಿದೆ: ಓಸ್ ಗೋತ್ರವೂ ಬನೂ ಖುರೈಝರವರೊಂದಿಗೆ ಪ್ರಾಚೀನದಿಂದಲೂ ಪ್ರತಿಜ್ಞಬದ್ಧರಾಗಿದ್ದರು ಮತ್ತು ಆ ಕಾಲದಲ್ಲಿ ಆ ಗೋತ್ರದ ನಾಯಕತ್ವವೂ ಸಅದ್ ಬಿನ್ ಮುಆಝ್ ವಹಿಸಿಕೊಂಡಿದ್ದರು. ಅವರು ಖಂದಖ್ ಯುದ್ಧದಲ್ಲಿ ಗಾಯಗೊಂಡು ಮಸೀದಿಯ ಅಂಗಳದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಈ ಪ್ರಾಚೀನ ಸಂಬಂಧದ ಕಾರಣ ಬನೂ ಖುರೈಝರವರು ಹೇಳಿದರು ನಾವು ಸಅದ್ ಬಿನ್ ಮುಆಝ್[ರ] ರವರನ್ನು ನಮ್ಮ ನ್ಯಾಯ ತೀರ್ಮಾನ ನೀಡುವವನು ಎಂದು ಸ್ವೀಕರಿಸುತ್ತೇವೆ. ಅವರು ನಮ್ಮ ಬಗ್ಗೆ ಎಂತಹ ತೀರ್ಮಾನ ತೆಗೆದುಕೊಂಡರು ನಾವು ಅದನ್ನು ಸ್ವೀಕರಿಸುತ್ತೇವೆ ಎಂದು ಹೇಳಿದರು. ಆದರೆ ಯಹೂದಿಯರಲ್ಲಿ ಕೆಲವು ಜನರು ಎಂತಹವರಿದ್ದರು ಎಂದರೆ ಅವರು ತಮ್ಮ ಖೌಮಿನ ಜನರ ತೀರ್ಮಾನವು ಸರಿಯಾಗಿ ತೆಗೆದುಕೊಳ್ಳಲಿಲ್ಲ ಎಂದು ಭಾವಿಸುತ್ತಿದ್ದರು. ಮತ್ತು ತಮ್ಮನ್ನು ತಾವು ಅಪರಾಧಿ ಎಂದು ಭಾವಿಸುತ್ತಿದ್ದರು ಮತ್ತು ಮನಸ್ಸಿನಲ್ಲಿ ಇಸ್ಲಾಮ್ ಧರ್ಮದ ಸತ್ಯತೆಯನ್ನು ಅರಿತುಕೊಂಡಿದ್ದರು. ಇತಿಹಾಸದಲ್ಲಿ ಇಂತಹವರಲ್ಲಿ ಅನೇಕ ಜನರಿದ್ದರು ಎಂದು ಹೇಳಲಾಗುತ್ತದೆ. ಅವರು ತುಂಬು ಹೃದಯದಿಂದ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಅನುಯಾಯಿಗಳಲ್ಲಿ ಸೇರಿಕೊಂಡರು. ಇನ್ನೋರ್ವ ವ್ಯಕ್ತಿ ಇದ್ದನು ಆತನು ಮುಸ್ಲಿಮನಾಗಲಿಲ್ಲ ಆದರೆ ಆತನು ತನ್ನ ಖೌಮಿನ ದ್ರೋಹದ ಕಾರಣ ಎಷ್ಟರ ಮಟ್ಟಿಗೆ ಬೇಸರಗೊಂಡಿದ್ದನು ಎಂದರೆ ಬನೂ ಖುರೈಝರವರು ಪ್ರವಾದಿ[ಸ] ರವರೊಂದಿಗೆ ಯುದ್ಧವಾಡಲು ಸಿದ್ಧರಾದಾಗ ಆತನು ನನ್ನ ಖೌಮಿನವರು ಪ್ರವಾದಿ[ಸ] ಅವರೊಂದಿಗೆ ದ್ರೋಹವನ್ನೆಸಗಿದ್ದಾರೆ ಆದ್ದರಿಂದ ನಾನು ನಿಮ್ಮೊಂದಿಗೆ ಈ ಯುದ್ಧದಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳಿ ಮದೀನವನ್ನು ತ್ಯಜಿಸಿ ಹೋದನು. ಆದರೆ ಇನ್ನುಳಿದ ಖೌಮಿನವರು ಕೊನೆಯವರೆಗೂ ತಮ್ಮ ಹಟವನ್ನು ಹಿಡಿದು ಕುಳಿತಿದ್ದರು ಮತ್ತು ಸಅದ್[ರ] ರವರನ್ನು ತಮ್ಮಲ್ಲಿ ಮೂರನೇಯವರನ್ನಾಗಿ ಮಾಡಲು ಒತ್ತಾಯಿಸಿದರು. ಪ್ರವಾದಿ[ಸ] ಅಹ ಇದಲ್ಲಿ ಒಪ್ಪಿಕೊಂಡರು (ಮುಂಚೆಯೆ ಹೇಳಿದ ಹಾಗೆ) ತದನಂತರ ರಸೂಲುಲ್ಲಾಹ್[ಸ]ರವರು ಕೆಲವು ಸಹಾಬರವರನ್ನು ಸಅದ್[ರ] ಅವರನ್ನು ಕರೆಸಲು ಕಳುಹಿಸಿದರು. ಸಅದ್[ರ] ಆಗಮಿಸಿದರು. ಬರುವಾಗ ರಸ್ತೆಯಲ್ಲಿ ಅವರ ಖೌಮಿನವರು ಅವರಲ್ಲಿ ಬನೂ ಖುರೈಝರವರು ನಮ್ಮ ಪ್ರತಿಜ್ಞಬದ್ಧರಾಗಿದ್ದಾರೆ ಆದ್ದರಿಂದ ಅದರ ಬಗ್ಗೆ ಗಮನಹರಿಸಿರಿ ಎಂದು ವಿನಂತಿಸಿಕೊಂಡರು. ಹೇಗೆ ಖಝ್‌ರಜ್‌ರವರು ತಮ್ಮ ಪ್ರತಿಜ್ಞಾಬದ್ಧ ಖೈನಖ ಗೋತ್ರದವರೊಂದಿಗೆ ಮೃಧುವಾಗಿ ವರ್ತಿಸಿದರೋ ಅದೇ ರೀತಿ ನೀವು ಸಹ ಖುರೈಜರವರೊಂದಿಗೆ ವರ್ತಿಸಿರಿ ಅವರಿಗೆ ಶಿಕ್ಷೆ ನೀಡದಿರಿ ಎಂದು ಕೇಳಿಕೊಂಡರು. ಸಅದ್ ಬಿನ್ ಮುಆಝ್[ರ] ಮೊದಲಿಗೆ ನಿಶ್ಯಬ್ಧರಾಗಿ ಅವರ ಮಾತುಗಳನ್ನು ಆಲಿಸುತ್ತಿದ್ದರು. ಆದರೆ ಅವರಿಂದ ಇನ್ನೂ ಹೆಚ್ಚಾಗಿ ಒತ್ತಾಯವಾದಾಗ ಸಅದ್[ರ] ಹೇಳಿದರು ಈ ಸಂದರ್ಭವೂ ಇದಾಗಿದೆ ಅಂದರೆ ಸಅದ್[ರ] ಈ ಸಂದರ್ಭದಲ್ಲಿ ನ್ಯಾಯದೊಂದಿಗೆ ತೀರ್ಮಾನಿಸಲು ಯಾವ ನಿಂದಿಸುವವನ ನಿಂದನೆಯ ಬಗ್ಗೆ ಯೋಚಿಸಲಿಲ್ಲ. ಸಅದ್[ರ] ರವರ ಈ ಉತ್ತರವನ್ನು ಆಲಿಸಿದಾಗ ಜನರು ನಿಶ್ಯಬ್ಧರಾದರು.

ಸಅದ್[ರ] ಪ್ರವಾದಿ ಮುಹಮ್ಮದ್[ಸ]ರವರ ಬಳಿ ಬಂದಾಗ ಪ್ರವಾದಿ[ಸ] ತಮ್ಮ ಸಹಾಬರವರಿಗೆ ಹೇಳಿದರು ತಮ್ಮ ಸರದಾರನಗಾಗಿ ಎದ್ದು ನಿಲ್ಲಿ ಮತ್ತು ಅವರನ್ನು ಸವಾರಿಯಿಂದ ಕೆಳಗಿಳಿಯಲು ಸಹಾಯ ಮಾಡಿರಿ. ಸಅದ್[ರ] ತಮ್ಮ ಸವಾರಿಯಿಂದ ಕೆಳಗಿಳಿದು ಪ್ರವಾದಿ[ರ] ರವರ ಸಮೀಪ ಬಂದರು. ಹಝ್ರತ್ ಸಅದ್[ರ] ಪ್ರವಾದಿ[ಸ] ರವರ ಸಮೀಪ ಬಂದಾಗ ಪ್ರವಾದಿ[ಸ] ರವರು ಅವರನ್ನು ಉದ್ದೇಶಿಸಿ ಹೇಳಿದರು. ಸಅದ್!! ಬನೂ ಖುರೈಝರವರು ನಿಮಗೆ ನ್ಯಾಯಧೀಶನನ್ನಾಗಿ ಸವೀಕರಿಸಿದ್ದಾರೆ ಅವರ ಪ್ರಕಾರ ನೀವು ಅವರ ಬಗ್ಗೆ ಯಾವ ತೀರ್ಪು ನೀಡಿದರು ಅವರು ಅದನ್ನು ಸ್ವೀಕರಿಸಲು ಸಿದ್ಧರಾಗಿದ್ದಾರೆ. ಇದಕ್ಕೆ ಹಝ್ರತ್ ಸಅದ್ ಮೊದಲು ತನ್ನ ಗೋತ್ರದ ಜನರೊಂದಿಗೆ ಕೇಳಿದರು: ನಾನು ಮಾಡುವ ತೀರ್ಪು ಅಂಗೀಕರಿಸುವುದಾಗಿ ನೀವು ನನಗೆ ವಾಗ್ದಾನ ಮಾಡುವಿರೋ? ಆ ಜನರು ಹೇಳಿದರು: ಅಂಗೀಕರಿಸುವೆವು. ಅನಂತರ ಹಝ್ರತ್ ಸಅದ್ ಬನೂ ಖುರೈಝರೊಂದಿಗೆ ಕೇಳಿದರು: ನಾನು ಮಾಡುವ ತೀರ್ಪನ್ನು ನೀವು ಅಂಗೀಕರಿಸುವುದಾಗಿ ವಾಗ್ದಾನ ಮಾಡುವಿರೋ? ಅವರು ಹೇಳಿದರು: ನಾವು ಅಂಗೀಕರಿಸುವೆವು. ಅನಂತರ ಹಝ್ರತ್ ಸಅದ್ ನಾಚಿಕೆಯಿಂದ ಬೇರೆ ಕಡೆಗೆ ನೋಡುತ್ತ ತಗ್ಗಿದ ದೃಷ್ಟಿಯಿಂದ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನೋಡುತ್ತಾ ಕೇಳಿದರು: 'ತಾವು ಸಹ ವಾಗ್ದಾನ ಮಾಡುವಿರೋ?' ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹ ಹೇಳಿದರು ಅಂಗೀಕರಿಸುತ್ತೇನೆ ಎಂದು.

ಈ ಕರಾರಿನ ನಂತರ ಸಅದ್[ರ] ತಮ್ಮ ತೀರ್ಪನ್ನು ನೀಡಿದರು. ಆ ತೀರ್ಪು ಹೀಗಿತ್ತು: ಬನೂ ಖುರೈಝರವರ ಸೈನಿಕರು ಅಂದರೆ ಯೋಧರನ್ನು ವಧಿಸಬೇಕು ಮತ್ತು ಅವರ ಮಹಿಳೆಯರನ್ನು ಮತ್ತು ಮಕ್ಕಳನ್ನು ಖೈದಿಗಳನ್ನಾಗಿ ಮಾಡಬೇಕು ಮತ್ತು ಅವರ ಸಂಪತ್ತನ್ನು ಮುಸ್ಲಿಮರಲ್ಲಿ ಹಂಚಬೇಕು. ಪ್ರವಾದಿ[ಸ] ರವರು ಈ ತೀರ್ಮಾನವನ್ನು ಕೇಳಿದಾಗ ಅವರು ಹೇಳಿದರು ನಿಮ್ಮ ಈ ತೀರ್ಮಾನವು ಅಲ್ಲಾಹನ ವಿಧಿನಿರ್ಣಯವಾಗಿದೆ. (ತಖ್ದೀರ್ ಆಗಿದೆ) ಅದನ್ನು ಬದಲಾಯಿಸಲು ಯಾರಿಗೂ ಶಕ್ತಿ ಇಲ್ಲ. ಪ್ರವಾದಿ[ಸ]ರವರ ಈ ವಾಕ್ಯದ ಅರ್ಥವೇನೆಂದರೆ ಬನೂ ಖುರೈಝರವರ ಬಗ್ಗೆ ತೆಗೆದು ಕೊಂಡ ತೀರ್ಮಾನವು ಎಂತಹ ಸಂದರ್ಭದಲ್ಲಾಯಿತು ಎಂದರೆ ಇದರಲ್ಲಿ ದೈವಿಕ ನಿರ್ಣಯವೂ ಕಾಣುತ್ತಿತ್ತು ಆದ್ದರಿಂದ ಪ್ರವಾದಿ[ಸ] ರವರ ಕರುಣೆಯ ಭಾವನೆಯು ವ್ಯಕ್ತವಾಯಿತು. ಮತ್ತು ಇದು ಸತ್ಯವಾಗಿ ಸರಿಯಾಗಿತ್ತು ಏಕೆಂದರೆ ಬನೂ ಖುರೈಝರವರು ಅಬೂಲುಬಾಬರವರನ್ನು ಸಲಹೆಗಾಗಿ ಕರೆಸುವುದು ಮತ್ತು ಅಬೂಲುಬಾಬನ ಬಾಯಿಯಿಂದ ತಪ್ಪು ಮಾತು ಹೊರಬರುವುದು ಮತ್ತು ಅವರು ರಸೂಲುಲ್ಲಾಹ್[ಸ] ರವರನ್ನು ನ್ಯಾಯಧೀಶನನ್ನಾಗಿ ಸ್ವೀಕರಿಸಲು ನಿರಾಕರಿಸುವುದು ಅದೇ ರೀತಿ ಓಸ್ ಗೋತ್ರದವರು ನಮ್ಮೊಂದಿಗೆ ಪ್ರತಿಜ್ಞಬದ್ದರಾಗಿದ್ದರಿಂದ ಅವರು ನಮ್ಮೊಂದಿಗೆ ರಿಯಾಯಿತಿ ನೀಡುತ್ತಾರೆ ಎಂದು ಭಾವಿಸಿ ಓಸ್ ಗೋತ್ರದ ಮುಖಂಡರಾದ ಸಅದ್ ಬಿನ್ ಮುಆಝ್[ರ] ರವರನ್ನು ತಮ್ಮ ನ್ಯಾಯಧೀಶನನ್ನಾಗಿ ನೇಮಿಸುವುದು. ತದನಂತರ ಸಅದ್[ರ] ರವರು ನ್ಯಾಯ ತೀರ್ಮಾನಕ್ಕಾಗಿ

ಇಷ್ಟು ನಿಷ್ಠೂರರಾಗುವುದು ಅಂದರೆ ಅವರ ಮನಸ್ಸಿನಿಂದ ಖೌಮಿನವರು ಎಂದು ಯೋಚನೆಯು ದೂರವಾಗುವುದು ಮತ್ತು ಕೊನೇಗೆ ಸಅದ್(ರ)ರವರು ತಮ್ಮ ನಿರ್ಣಯ ಪ್ರಕಟಿಸುವುದಕ್ಕು ಮುನ್ನ ಪ್ರವಾದಿ(ಸ) ರವರೊಂದಿಗೆ ಮಾತನಾಡುವುದಕ್ಕು ಮುಂಚೆ ಈ ಮಾತಿಗೆ ಕರಾರು ಪಡೆಯುವುದು ಅಂದರೆ ಈ ನಿರ್ಣನಯಕ್ಕೆ ಒಪ್ಪುವುದಾಗಿ. ಈ ಎಲ್ಲಾ ವಿಷಯಗಳು ಆಕಸ್ಮಿಕವಾಗಿ ಆಗುವುದಲ್ಲ. ನಿಸ್ಸಂದೇಹವಾಗಿಯು ಇದರಲ್ಲಿ ದೈವಿಕನಿರ್ಣಯುವು ಕಾರ್ಯನಿರ್ವಹಿಸುತ್ತಿತ್ತು ಮತ್ತು ಈ ನಿರ್ಣಯವೂ ಅಲ್ಲಾಹನಿಂದ ಆಗಿತ್ತು ಸಅದ್‌ರವರಿಂದ ಅಲ್ಲ.

ಈ ಘಟನೆಗೆ ಸಂಬಂಧಿಸಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರು ಸ್ವಲ್ಪ ಹೆಚ್ಚಿಗೆ ವಿವರ ನೀಡಿದ್ದಾರೆ. ಅವರು ಬರೆಯುತ್ತಾರೆ: ಇದರಿಂದ ಅರ್ಥವಾಗುವುದೇನಂದರೆ ಬನೂ ಖುರೈಝುರವರ ಪ್ರತಿಜ್ಞ ಉಲ್ಲಂಘನೆ, ದ್ರೋಹ, ಪಿತೂರಿತನ, ಕೊಲೆ ಹಾಗೂ ರಕ್ತಪಾತದ ಕಾರಣ ಅಲ್ಲಾಹನ ನ್ಯಾಯಾಲಯದಿಂದ ಇದರ ಬಗ್ಗೆ ತೀರ್ಮಾನ ನೀಡಲಾಗಿತ್ತು ಅಂದರೆ ಎಲ್ಲಾ ಯೋಧಕರನ್ನು ಲೋಕದಿಂದ ಮುಗಿಸಬೇಕು ಎಂದು. ಆದ್ದರಿಂದ ಪ್ರಾರಂಭದಲ್ಲಿ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ಈ ಯುದ್ಧದ ಬಗ್ಗೆ ದೈವಿಕವಾಗಿ ಚಳುವಳಿಯು ಮೂಡುತ್ತಿದ್ದರಿಂದ ವ್ಯಕ್ತವಾಗುವುದೇನೆಂದರೆ ಇದು ಅಲ್ಲಾಹನ ನಿರ್ಣಯವು ಇತ್ತು. ಆದರೆ ಅಲ್ಲಾಹನು ಆತನ ಸಂದೇಶವಾಹಕನಂದ ನಿರ್ಣಯವನ್ನು ತೆಗೆದುಕೊಳ್ಳಲು ಇಷ್ಟಪಡಲಿಲ್ಲ ಆದ್ದರಿಂದ ಅಲ್ಲಾಹನು ಬಹಳ ತೀಕ್ಷಣತೆಯಿಂದ ದೈವಿಕ ನಿರ್ಣಯಗಳಿಂದ ಪ್ರವಾದಿ(ಸ) ರವರನ್ನು ಬೇರ್ಪಡಿಸಿದನು ಮತ್ತು ಸಅದ್ ಬಿನ್ ಮುಆಝ್(ರ) ರವರ ಮುಖಾಂತರ ಈ ನಿರ್ಣಯವನ್ನು ತಿಳಿಸಿದನು. ಅದೂ ಎಂತಹ ಸಂದರ್ಭದಲ್ಲಿ ಅಂದರೆ ಆಗ ಪ್ರವಾದಿ(ಸ) ರವರು ಇದರಲ್ಲಿ ಯಾವುದೇ ರೀತಿಯಲ್ಲಿ ಹಸ್ತಕ್ಷೇಪ ಮಾಡಲು ಸಾಧ್ಯವಿರಲಿಲ್ಲ. ಏಕೆಂದರೆ ಪ್ರವಾದಿ(ಸ) ರವರು ಈ ಸಮಸ್ಯೆಯಲ್ಲಿ ಯಾವುದೇ ತೀರ್ಮಾನ ತೆಗೆದುಕೊಂಡರು ಅದನ್ನು ಸ್ವೀಕರಿಸುತ್ತೇನೆ ಎಂದು ವಾಗ್ದಾನ ಮಾಡಿದ್ದರು. ಮತ್ತೆ ಈ ನಿರ್ಣಯಗಳ ಪ್ರಭಾವವು ಕೇವಲ ರಸೂಲುಲ್ಲಾಹ್(ಸ) ರವರ ಮೇಲೆ ಬೀರುತ್ತಿರಲಿಲ್ಲ ಬದಲಿಗೆ ಎಲ್ಲಾ ಮುಸ್ಲಿಮರ ಮೇಲೆ ಬೀರುತ್ತಿತ್ತು ಆದ್ದರಿಂದ ರಸೂಲುಲ್ಲಾಹ್(ಸ) ರವರು ಇದು ಅವರ ಹಕ್ಕು ಎಂದು ತಿಳಿಯುತ್ತಿರಲಿಲ್ಲ. ಅಂದರೆ ಅವರು ತಮ್ಮ ಕರುಣೆ ಹಾಗೂ ದಯೇವುಳ್ಳ ಅಬಿಪ್ರಾಯದ ಮೇರೆಗೆ ಈ ನಿರ್ಣಯವು ಬದಲಾಗುತ್ತಿತ್ತು. ಇದು ಅಲ್ಲಾಹನ ನಿರ್ಣಯವಾಗಿತ್ತು ಅದರಿಂದ ಪ್ರಭಾವಿತರಾಗಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಸಅದ್ ಬಿನ್ ಮುಆದರ ಈ ತೀರ್ಪನ್ನು ಆಲಿಸಿದಾಗ ಸ್ವಯಂ ಪ್ರೇರಿತವಾಗಿ ಹೇಳಿದರು: ನಿಮ್ಮ ಈ ತೀರ್ಪು ಅಲ್ಲಾಹನ ವಿಧಿ ನಿರ್ಣಯವಾಗಿದೆ, ಅದನ್ನು ತಪ್ಪಿಸಲಾಗದು. ಅವರು ಹಝ್ರತ್ ಸಅದ್‌ರೊಂದಿಗೆ ಹೇಳಿದರು: **ಖದ್ ಹಕಮ್‌ತ ಬಿ ಹುಕ್‌ಮಿಲ್ಲಾಹ್**. ನಿಮ್ಮ ತೀರ್ಪು ಅಲ್ಲಾಹನ ವಿದಿನಿರ್ಣಯ (ತಖ್‌ದೀರ್) ಆಗಿದೆ ಎಂದು ತೋರುತ್ತದೆ. ಅದನ್ನು ಬದಲಾಯಿಸಲು ಯಾರಿಗೂ ಶಕ್ತಿ ಇಲ್ಲ.

ಈ ಪದಗಳನ್ನು ಹೇಳಿದ ನಂತರ ರಸೂಲುಲ್ಲಾಹ್(ಸ) ರವರು ಸುಮ್ಮನಾಗಿ ಅಲ್ಲಿಂದ ಎದ್ದು ಪಟ್ಟಣದ ಕಡೆ ಹೋದರು. ಆ ಸಂದರ್ಭದಲ್ಲಿ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಮನಸ್ಸು ಈ ಯೋಚನೆಯಿಂದ ದುಃಖಿತವಾಗುತ್ತಿತ್ತು ಅಂದರೆ ನಿಮ್ಮ ಮನಸ್ಸಿನಲ್ಲಿ ಈ ಖೌಮಿನವರು ಈಮಾನ್ (ವಿಶ್ವಾಸ) ತರುತ್ತಾರೆ ಎಂಬ ಯೋಚನೆ ಹೊಂದಿತ್ತು. ಆದರೆ ಇವರು ತಮ್ಮ ಕೆಟ್ಟ ವರ್ತನೆಗಳಿಂದ ಈಮಾನಿನಿಂದ ವಂಚಿತರಾಗಿ ಅಲ್ಲಾಹನ ಕೋಪಕ್ಕೆ ಸಿಲುಕುತ್ತಿದ್ದಾರೆ. ಪ್ರಾಯಶಃ ಇದೇ ಸಂದರ್ಭದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಭಾವಾವೇಶಭರಿತರಾಗಿ ಹೇಳಿದರು: ಯಹೂದಿಯರಾದ ಹತ್ತು ಮಂದಿ ಪ್ರಭಾವಿ ವ್ಯಕ್ತಿಗಳಾದರೂ ನನ್ನನ್ನು ನಂಬಿದ್ದರೆ ಈ ಎಲ್ಲಾ ಜನರು ನನ್ನನ್ನು ನಂಬುತ್ತಿದ್ದರೆಂದು ನಾನು ಅಲ್ಲಾಹನ ಬಗ್ಗೆ ಭರವಸೆ ಹೊಂದಿದ್ದೇನೆ. ಹಾಗೆ ದೈವಿಕ ಶಿಕ್ಷೆಯಿಂದ ಅವರು ವಿಮೋಚಿತರಾಗುತ್ತಿದ್ದರು. ಏನೇ ಇರಲಿ ಅಲ್ಲಿಂದ ಪ್ರವಾದಿ(ಸ) ರವರು ಎದ್ದು ಹೊರಡುವಾಗ ಬನೂ ಖುರೈಝುರ ಪುರುಷರನ್ನು, ಮಹಿಳೆಯರನ್ನು ಹಾಗೂ ಮಕ್ಕಳನ್ನು ಪ್ರತ್ಯೇಕವಾಗಿರಿರಸಲು ಆದೇಶಿಸಿದರು. ಆಗ ಎರಡೂ ಗೋತ್ರಗಳನ್ನು ಬೇರ್ಪಡಿಸಿ ಮದೀನಕ್ಕೆ ಕರೆದುಕೊಂಡು ಬಂದರು ಮತ್ತು ಅವರನ್ನು ಪಟ್ಟಣದಲ್ಲಿ ಪ್ರತ್ಯೇಕ ಕಟ್ಟಡಗಳಲ್ಲಿ ಇರಿಸಲಾಗಿತ್ತು ಮತ್ತು ಪ್ರವಾದಿ ಮುಹಮ್ಮದ್(ಸ) ರವರ ಆದೇಶದ ಪ್ರಕಾರ ಸಹಾಬರವರನ್ನು ಅವರಲ್ಲಿ ಅನೇಕರು ಸ್ವತಃ ಉಪವಾಸವಿದ್ದು ಬನೂ ಖುರೈಝುರವರಿಗೆ ಬಹಳಷ್ಟು ಹಣ್ಣು ಹಂಪಲುಗಳನ್ನು ಸಂಗ್ರಹಿಸಿದರು. ಯಹೂದಿಯರು ಇಡೀ ರಾತ್ರಿ ಹಣ್ಣುಗಳನ್ನು ಸೇವಿಸುವುದರಲ್ಲಿ ಮಗ್ನರಾಗಿದ್ದರು. ಮಾರನೆ ದಿವಸ ಬೆಳಿಗ್ಗೆ ಸಅದ್ ಬಿನ್ ಮುಆಝ್(ರ) ರವರು ತೀರ್ಪನ್ನು ಜಾರಿಗೊಳಿಸ ಬೇಕಾಗಿತ್ತು. ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರು ಕೆಲವು ಶಕ್ತಿಶಾಲಿ ಜನರಿಗೆ ಈ ಕಾರ್ಯವನ್ನು ನಿರ್ವಹಿಸಲು ನೇಮಿಸಿದ್ದರು ಮತ್ತು ತಾವು ಸ್ವತಃ ಅಲ್ಲಿ ಹತ್ತಿರದ ಜಾಗದಲ್ಲಿ ತಂಗಿದರು ಅದಕ್ಕೆ ಕಾರಣ ಆ ನಿರ್ಣಯವನ್ನು ಜಾರಿಗೊಳಿಸುವ ಸಂದರ್ಭದಲ್ಲಿ ರಸೂಲುಲ್ಲಾಹ್(ಸ) ರವರ ಮಾರ್ಗದರ್ಶನದ ಅನಿವಾರ್ಯತೆ ಬೀರಿದಾಗ ತಕ್ಷಣವೇ ಅಲ್ಲಿಗೆ ತಲುಪಬಹುದು ಅದೇ ರೀತಿ ಯಾವುದಾದರು ಅಪಾರದಿಯ ಬಗ್ಗೆ ಕರುಣೆದೋರಲು ಕೋರಿಕೊಂಡಾಗ ತಕ್ಷಣವೇ ಅದರ ಬಗ್ಗೆ ನಿರ್ಣಯ ಕೈಗೊಳ್ಳಬಹುದು ಎಂದು ಸಮೀಪದ ಜಾಗದಲ್ಲಿಯೇ ತಂಗಿದರು. ಏಕೆಂದರೆ ಸಅದ್(ರ) ತೀರ್ಪಿನ ಮೇಳೆ ಯಾರಾದರು ಅಪೀಲು ಮಾಡಿದರೆ ಆ ಅಪೀಲು ನ್ಯಾಯಾಲಯದಲ್ಲಿ ನೇರವಾಗಿ ಪ್ರವಾದಿ(ಸ) ರವರ ಬಳಿ ನೀಡಲು ಸಾಧ್ಯವಿರಲಿಲ್ಲ ಆದರೆ ಒರ್ವ ರಾಜ ಅಥವಾ ಪ್ರಧಾನಿಯ ಸ್ಥಾನ ಮಾನದಿಂದ ಪ್ರವಾದಿ(ರ) ರವರು ಯಾವುದೇ ವ್ಯಕ್ತಿಯ ಬಗ್ಗೆ ವಿಷೇಶ ಕಾರದಿಂದ ಕರುಣಿಸಲು ಅಪೀಲನ್ನು ಕೇಳಬಹುದಾಗಿತ್ತು. ಹೀಗೆ ರಸೂಲುಲ್ಲಾಹ್(ಸ) ರವರು ಕರುಣಿಸಲು ಅಪರಾಧಿಗಳನ್ನು ಒಬ್ಬೊಬ್ಬರನ್ನಾಗಿ ವಧಿಸಲು ಆಜ್ಞಾಪಿಸಿದರು. ಅಂದರೆ ಒಬ್ಬನನ್ನು ವಧಿಸುವಾಗ ಇನ್ನೊಬ್ಬ ಅಪರಾಧಿಯು ಉಪಸ್ಥಿತ ಇರಬಾರದು ಎಂದು. ಹೀಗೆ ಒಬ್ಬೊಬ್ಬರನ್ನು ಪ್ರತ್ಯೇಕವಾಗಿ ಸಅದ್ ಬಿನ್ ಮುಆಝ್(ರ) ರವರ ತೀರ್ಪಿನ ಪ್ರಕಾರ ವಧಿಸಲಾಯಿತು.

ಬನೂ ಖುರೈಝುರಿಗೆ ಸಂಬಂಧಿಸಿದ ಈ ಘಟನೆಯ ಬಗ್ಗೆ ಕೆಲವು ಮುಸ್ಲಿಮೇತರ ಚರಿತ್ರೆಗಾರರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ವಿರುದ್ಧ ಅತ್ಯಂತ ಅನುಚಿತ ರೀತಿಗಳಲ್ಲಿ ಆಕ್ರಮಣ ಮಾಡುತ್ತಾರೆ. ಮತ್ತು ಕನಿಷ್ಠ 400 ಯಹೂದಿಯರನ್ನು ವಧಿಸಿದ ಕಾರಣ ಪ್ರವಾದಿ(ಸ) ರವರನ್ನು (ನಊಧುಬಿಲ್ಲಾಹ್) ಅವರು ದೌರ್ಜನ್ಯಗಾರನೂ ನಿಷ್ಕರುಣಿಯೂ ಆಗಿರುವ ಆಡಳಿತಗಾರನೆಂದು ಚಿತ್ರಿಸಿದ್ದಾರೆ. ಆದರೆ ನಮ್ಮ ಒರ್ವ ಸಂಶೋಧಕರ ಸಂಶೋಧನೆಯ ಪ್ರಕಾರ ಅವರ ಸಂಖ್ಯೆ 16–17 ಆಗಿತ್ತು ಎಂದಾಗಿದೆ ಆದರೂ ಇದು ಸಂಶೋಧನೆ ಆಗಬೇಕಾದ ವಿಷಯವಾಗಿದೆ. ಈಗಲೂ ಅದರ ಮೇಲೆ ಸಂಶೋಧನೆ ನಡೆಯಬಹುದು. ಒರ್ವರು ಅವರ ಸಂಖ್ಯೆ 100 ಎಂದು ಬರೆದಿದ್ದಾರೆ ಇನ್ನೊಬ್ಬರು 400 ಎಂದು ಹೇಳಿದ್ದಾರೆ ಮತ್ತೊಬ್ಬರು ಅದಕ್ಕಿಂತ ಹೆಚ್ಚಾಗಿ ಬರೆದಿದ್ದಾರೆ. ಏನೇ ಇರಲಿ ಅದರ ಸಂಖ್ಯೆಯ ಬಗ್ಗೆ ಖಚಿತತೆ ಇಲ್ಲ. ಇದು 400 ಎಂದು ಇದ್ದರೂ ಸಹ ಧಾರ್ಮಿಕ ಪಕ್ಷಪಾತವಾಗಿದೆ. ಅದರಿಂದ ಇಸ್ಲಮ್ ಹಾಗೂ ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಬಗ್ಗೆ ಅನೇಕ ಪಾಶ್ಚಾತ್ಯ ಐತಿಹಾಸಿಕಗಾರರು ಆಕ್ಷೇಪಗಳನ್ನು ಎಸಗುತ್ತಾರೆ. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಈ ಆಕ್ಷೇಪಕ್ಕೆ ಉತ್ತರವಾಗಿ ಹೀಗೆ ಬರೆಯುತ್ತಾರೆ: ಬನೂ ಖುರೈಝುರಿಗೆ ಸಂಬಂಧಿಸಿದ ಈ ತೀರ್ಪನ್ನು ದೌರ್ಜನ್ಯ ಭರಿತವಾದುದೆಂದು ಹೇಳಲಾಗುತ್ತಿದೆ. ಮೊದಲನೆಯದಾಗಿ ನೆನಪಿಡಬೇಕಾದುದೇನೆಂದರೆ, ಆ ತೀರ್ಪನ್ನು ನೀಡಿದವರು ಸಅದ್ ಬಿನ್ ಮುಆದ್ ಆಗಿದ್ದಾರೆ. ಅದು ಖಂಡಿತವಾಗಿಯೂ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನೀಡಿದ ತೀರ್ಪಲ್ಲ. ಎರಡನೆಯದಾಗಿ, ಅಂದಿನ ಕಾಲದ ಸ್ಥಿತಿಗತಿಗಳಿಗೆ ಅನುಸಾರವಾಗಿ ಖಂಡಿತವಾಗಿಯೂ ಅದು ತಪ್ಪಾದ ಮತ್ತು ದೌರ್ಜನ್ಯಕರವಾದ ತೀರ್ಪು ಆಗಿರಲಿಲ್ಲ. ಮೂರನೆಯದಾಗಿ, ತೀರ್ಪು ನೀಡುವ ಮೊದಲು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಅದನ್ನು ಅಂಗೀಕರಿಸುವುದಾಗಿ ಸಅದ್ ವಾಗ್ದಾನವನ್ನು ಪಡೆದುದರಿಂದ ಆ ತೀರ್ಪಿನ ಪ್ರಕಾರ ವರ್ತಿಸಲು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬದ್ಧರಾಗಿದ್ದರು. ನಾಲ್ಕನೆಯದಾಗಿ, ಅಪರಾಧಿಗಳು ಆ ತೀರ್ಪನ್ನು ಅಂಗೀಕರಿಸಿದರು. ಅದರ ವಿರುದ್ಧ ಅವರು ಆಕ್ಷೇಪವೆತ್ತಲಿಲ್ಲ. ಅವರು ಅದನ್ನು ತಮಗೋಸ್ಕರ ದೇವ ವಿಧಿ ಎಂದು ಗಣಿಸಿದರು. ಇಂತಹ ಪರಿಸ್ಥಿತಿಯಲ್ಲಿ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಅದರಲ್ಲಿ ಹಸ್ತಕ್ಷೇಪ ಮಾಡುವುಕ್ಕೆ ನಿಲ್ಲುವುದು ಉಚಿತವಿರಲಿಲ್ಲ. ಸಅದ(ರ) ರವರ ನಿರ್ಣಯದ ನಂತರ ಪ್ರವಾದಿ(ಸ) ರವರು ಕೇವಲ ಸರಕಾರದ ವ್ಯವಸ್ಥೆಯು ಪ್ರಕಾರ ಈ ತೀರ್ಪನ್ನು ಜಾರಿಗೊಳಿಸುವುದಾಗಿತ್ತು ಮತ್ತು ಇದರ ಬಗ್ಗೆ ಹೀಗೆ ತಿಳಿಸಲಾಗಿದೆ, ಪ್ರವಾದಿ(ಸ) ಈ ತೀರ್ಪನ್ನು ಬಹಳ ಕರುಣೆ ಹಾಗೂ ದಯೇಯ ನಿಟ್ಟಿನಲ್ಲಿ ಜಾರಿಗೊಳಿಸಿದರು. ಅಂದರೆ ಈ ತೀರ್ಪು ಜಾರಿಗೊಳಿಸುವ ತನಕ ಅಪರಾಧಿಗಳು ಬಂಧನದಲ್ಲಿದ್ದಾಗ ಅವರಿಗೆ ವಾಸ್ತವ್ಯ ಮತ್ತು ಆಹಾರದ ಉತ್ತಮ ವ್ಯವಸ್ಥೆ ಮಾಡಲಾಗಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೀಗೆ ಆಜ್ಞಾಪಿಸಿದ್ದರು: ಒಬ್ಬ ಅಪರಾಧಿಯನ್ನು ಹತ್ಯೆ ಮಾಡುವಾಗ ಬೇರೆ ಯಾವ ಅಪರಾಧಿಯೂ ಅಲ್ಲಿರಬಾರದು ಎಂದು. ಇದಲ್ಲದೆ ಯಾವುದಾದರೂ ಅಪರಾಧಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂದೆ ದಯಾಬಿಕ್ಷೆಯ ಬೇಡಿಕೆ ಸಲ್ಲಿಸಿದಾಗ ಅವರಿಗೆ ಜೀವದಾನ ನೀಡಲಾಯಿತಲ್ಲದೆ ಅಂತಹ ವ್ಯಕ್ತಿಯ ಪತ್ನಿ, ಮಕ್ಕಳು ಮತ್ತು ಸ್ವತ್ತನ್ನು ಆತನಗೆ ಮರಳಿಸಬೇಕೆಂದು ಆಜ್ಞಾಪಿಸಿದ್ದರು. ಒಬ್ಬ ಅಪರಾಧಿಯೊಂದಿಗೆ ಇದಕ್ಕಿಂತ ಮಿಗಿಲಾಗಿ ದಯೆ ಮತ್ತು ವಾತ್ಸಲ್ಯದಿಂದ ವರ್ತಿಸಲು ಹೇಗೆ ತಾನೆ ಸಾಧ್ಯ? ಈ ಘಟನೆಯ ಕಾರಣದಿಂದ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿರುದ್ಧ ಯಾವುದೇ ಆಕ್ಷೇಪ ಮಾಡಲು ಖಂಡಿತವಾಗಿಯೂ ಸಾಧ್ಯವಿಲ್ಲ. ವಾಸ್ತವಿಕವಾಗಿ ಈ ಘಟನೆಯಿಂದ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸುಸ್ವಭಾವ, ಉತ್ತಮ

ಆಡಳಿತೆ ವ್ಯವಸ್ಥೆ, ಅವರಿಗೆ ಸಹಜವಾಗಿದ್ದ ದಯಾಗುಣ ಮತ್ತು ವಾತ್ಸಲ್ಯದ ಅತ್ಯಂತ ಸ್ಪಷ್ಟವಾದ ಸಾಕ್ಷ್ಯ ಲಭಿಸುತ್ತದೆ.

ನಿಸ್ಸಂದೇಹವಾಗಿ ಸಅದ್(ರ) ರವರ ಈ ನಿರ್ಣಯವೂ ಬಹಳ ಕಠಿಣವಾದ ತೀರ್ಮಾನವಾಗಿತ್ತು ಮತ್ತು ಮಾನವನ ಸ್ವಭಾವದಲ್ಲಿ ಸಾಮಾನ್ಯವಾಗಿ ಮನಸ್ಸಿಗೆ ದುಃಖ ಉಂಟುಮಾಡುತ್ತದೆ. ಆದರೆ ಪ್ರಶ್ನೆ ಏನೆಂದರೆ ಈ ತೀರ್ಮಾರ್ನನ ಕೈಗೊಳ್ಳದೆ ಬೇರೆ ಯಾವುದಾದರು ಮಾರ್ಗವಿತ್ತೆ? ಎಂಬುದಾಗಿದೆ. ಬನೂ ಖುರೈಝುರವರ ಬಗ್ಗೆ ಸಅದ್(ರ) ರವರ ತೀರ್ಮಾನವು ನಾವು ಹೇಳಿದ ಹಾಗೆ ತನ್ನಲ್ಲಿ ಬಹಳ ಕಠಿಣವಾದ ತೀರ್ಮಾನವಾಗಿತ್ತು ಆದರೆ ಅದು ಪರಿಸ್ಥಿತಿಗೆ ಅನುಸಾರವಾಗಿತ್ತು. ಅದನ್ನು ಅನುಸರಿಸದೆ ಯಾವ ದಾರಿಯು ಇರಲಿಲ್ಲ. ಈ ಕಾರಣದಿಂದ ಈ ಘಟನೆಗೆ ಸಂಬಂಧಿಸಿ ಚರಿತ್ರೆಗಾರನಾದ ಮೊರ್ಗೋಲಿಸ್ ಹೀಗೆ ಹೇಳಲು ನಿರ್ಬಂಧಿತರಾದರು. ಸಅದ್ ನೀಡಿದ ತೀರ್ಪು ಆ ಕಾಲದ ಪರಿಸ್ಥಿತಿಗೆ ಅನುಸಾರವಾಗಿ ಅನಿವಾರ್ಯವಾಗಿತ್ತು. ಆತನು ಹೀಗೆ ಬರೆಯುತ್ತಾನೆ: ಅಹ್‌ಝಾಬ್ ಯುದ್ಧದ ಆಕ್ರಮಣದ ಬಗ್ಗೆ ಪ್ರವಾದಿ(ಸ) ರವರ ದಾವೆಯು ಹೀಗಿತ್ತು: ಅದು ಅಲ್ಲಾಹನ ವಿಧಿನಿರ್ಣಯದ ಪ್ರಕಾರ ಹಿಂದಕ್ಕೆ ಸರಿದರು. ಅದು ಬನೂ ನಝೀರಿನ ಪ್ರಚೋದನಕರವಾದ ಪ್ರಯತ್ನಗಳ ಪ್ರತಿಫಲ ಅಥವಾ ಕನಿಷ್ಠ ಅವರ ಪ್ರಯತ್ನಗಳ ಪ್ರತಿಫಲವಾಗಿತ್ತು. ಮತ್ತು ಬನೂ ನಝೀರ್ ಯಾರಾಗಿದ್ದರು? ಅವರನ್ನು ಪ್ರವಾದಿ ಮುಹಮ್ಮದ್(ಸ) ರವರು ಕೇವಲ ಗಡಿಪಾರು ಮಾಡಿದರೆ ಸಾಕಾಗಿತ್ತೆ?. ಈ ಪ್ರಶ್ನೆ ಏಕೆಂದರೆ ಏನು ಮಹಮ್ಮದ್(ಸ) ರವರು ಬನೂ ಖುರೈಝುರವರನ್ನು ಸಹ ಗಡಿಪಾರು ಮಾಡಿ ತಮ್ಮ ವಿರುದ್ಧ ಪ್ರಚೋದನಕ್ಕೆ ಪ್ರಯತ್ನಿಸುವವರ ಶಕ್ತಿಯನ್ನು ಬಲಗೊಳಿಸುವುದ್ದಾಗಿತ್ತೆ? ಇನ್ನೊಂದೆಡೆ ಆ ಖೌಮಿನವರು ಬಹಿರಂಗವಾಗಿ ಆಕ್ರಮಣ ಮಾಡುವವರಿಗೆ ಬೆಂಬಲ ನೀಡಿದ್ದರು. ಆದ ಕಾರಣ ಅವರನ್ನು ಮದೀನದಲ್ಲಿಯು ವಾಸಿಸಲು ಅನುಮತಿ ನೀಡಲು ಸಾಧ್ಯವಿರಲಿಲ್ಲ. ಅವರನ್ನು ಗಡಿಪಾರು ಮಾಡುವುದು ರಕ್ಷಣೆಯ ವಿರುದ್ಧವಾಗಿತ್ತು. ಮತ್ತು ಅವರು ಮದೀನದಲ್ಲಿರುವುದು ಸಹ ಅಪಾಯಕಾರಿಯಾಗಿತ್ತು. ಆದ್ದರಿಂದ ಈ ನಿರ್ಣಯ ಕೈಗೊಳ್ಳದೆ ಬೇರೆ ಯಾವ ದಾರಿಯು ಇರಲಿಲ್ಲ."

ಮರ್ಗಲಸ್ ಹೀಗೆ ಬರೆಯುತ್ತಾನೆ "ಸಅದ್(ರ) ರವರ ಈ ತೀರ್ಮಾನವೂ ನ್ಯಾಯಯುತವಾದ ತೀರ್ನಾನವಾಗಿತ್ತು ಮತ್ತು ಪ್ರವಾದಿ ಸಲ್ಲಲ್ಲಹು ಅಲೈಹಿವಸಲ್ಲಮರು ಈ ತೀರ್ಮಾನದ ಬಗ್ಗೆ ಕರುಣೆ ತೋರಲು ಸಾಧ್ಯವಿರಲಿಲ್ಲ. ಕೆಲವು ಜನರ ಹೊರತುಪಡಿಸಿ. ಅದಕ್ಕೆ ಅವರು(ಸ) ರವರು ಅಪೀಲ್ ಮಾಡುವವರ ಬಗ್ಗೆ ಕರುಣಿಸಲು ಬಹಳ ಪ್ರಯತ್ನಿಸಿದರು ಸಾಮಾನ್ಯವಾಗಿ ತೀರ್ಪು ನೀಡಲು ಸಾಧ್ಯವಿರಲಿಲ್ಲ. ಆದರೆ ತಿಳಿದುಬರುವುದೇನೆಂದರೆ ಯಹೂದಿಯರು ಪ್ರವಾದಿ(ಸ) ರವರನ್ನು ನ್ಯಾಯಧೀಶನನ್ನಾಗಿ ಸ್ವೀಕರಿಸದ ಕಾರಣ ಕೆಲವು ಜನರನ್ನು ಹೊರತುಪಡಿಸಿ ಅವರ ಬಳಿ ಅಪೀಲ್ ಕೇಳಲು ಸಹ ಸಿದ್ಧವಾಗಲಿಲ್ಲ.

ಇನ್ನೊಂದು ವಿಷಯ ನೇನಪಿಡಬೇಕಾಗಿದೆ. ಯಹೂದಿಯರು ಮತ್ತು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಧ್ಯೆ ಆರಂಭದಲ್ಲಿ ಮಾಡಲಾದ ಒಪ್ಪಂದದ ಶರತ್ತುಗಳಲ್ಲಿ ಒಂದು ಶರತ್ತು ಹೀಗೆ ಇತ್ತು: ಯಹೂದಿಯರಿಗೆ ಸಂಬಂಧಿಸಿ ಯಾವುದೇ ವಿಷಯ ಪರಿಹರಿಸಲಿಕ್ಕಿದ್ದರೆ ಅದರ ಬಗ್ಗೆ ತೀರ್ಪು ಅವರ ನ್ಯಾಯ ಸಂಹಿತೆ ಪ್ರಕಾರ ಮಾಡಲಾಗುವುದು ಎಂದು. ಈ ಶರತ್ತಿಗೆ ಅಧೀನವಾಗಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯಾವಾಗಲೂ ಯಹೂದಿಯರಿಗೆ ಸಂಬಂಧಿಸಿ ಮೂಸಾರ ಶರೀಅತ್ ಪ್ರಕಾರ ತೀರ್ಪು ನೀಡುತ್ತಿದ್ದರೆಂದು ಚರಿತ್ರೆಯಿಂದ ತಿಳಿಯುತ್ತದೆ. (ಸೀರತ್ ಖಾತುಮುನ್ನಬೀಯೀನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ಎಂ.ಎ, ಪುಟ–599–611)

ಬನೂ ಖುರೈಝುರಿಗೆ ಸಂಬಂಧಿಸಿ ಹಝ್ರತ್ ಸಅದ್ ಬಿನ್ ಮುಆದರ ಪಾತ್ರದ ಬಗ್ಗೆ ವಿವರಣೆ ಇಲ್ಲಿಗೆ ಮುಗಿಯುತ್ತದೆ. ಆದರೆ ಸಅದ್ ಬಿನ್ ಮುಆದರ ಬಗ್ಗೆ ಇನ್ನಷ್ಟು ವಿವರಿಸಲು ಬಾಕಿಯಾಗಿ ಉಳಿದಿದೆ. ಇನ್‌ಶಾಅಲ್ಲಾಹ್ ಮುಂದೆ ಅವುಗಳನ್ನು ವಿವರಿಸುವೆನು.

ಇಂದು ನಾನು ಇತ್ತೀಚೆಗೆ ನಿಧನ ಹೊಂದಿದವರ ಬಗ್ಗೆ ಪ್ರಸ್ತಾಪಿಸುವೆನು. ಜುಮ್‌ಆ ನಮಾಝ್‌ನ ನಂತರ ನಾನು ಅವರ ನಮಾಝು ಜನಾಝು ಗಾಯಿಬ್ ನಿರ್ವಹಿಸುವೆನು. **ಇನ್‌ಶಾಅಲ್ಲಾಹ್**.

ಮೊದಲನೆಯದಾಗಿ ಮುಕರ್‍ರಮ ಹಾಜಿಯ ರುಖಿಯ್ಯಾ ಖಾಲಿದ್ ಸಾಹಿಬರವರದ್ದಾಗಿದೆ. ಅವರು ಘಾನಾದ ಸದರ್ ಲಜ್ನ ಆಗಿದ್ದರು. 30 ಜೂನ್‌ಗೆ 65 ಪ್ರಾಯದಲ್ಲಿ ನಿಧನ ಹೊಂದಿದರು **ಇನ್ನಾಲಿಲ್ಲಹಿ ವ ಇನ್ನಾ ಇಲೈಹಿ ರಾಜಿಊನ್**. ಅವರಿಗೆ ಯೂಟ್ರೀಸ್ ಕ್ಯಾನ್ಸರ್ ಆಗಿತ್ತು. ತದನಂತರ ಅವರು ಗುಣಹೊಂದಿದರು, ಅಲ್ಲಾಹನು ಅವರಿಗೆ ಆರೋಗ್ಯ ನೀಡಿದನು. ಆದರೆ ಈ ವರ್ಷ ಮೇ ತಿಂಗಳಿನಲ್ಲಿ ಪುನಃ ಅವರ ಆರೋಗ್ಯವು ಕೆಡಲು ಪ್ರಾರಂಭವಾಯಿತು. ಅಕಸ್ಮಿಕವಾಗಿ ಮತ್ತೆ ಬಾಧಿತರಾದಾಗ ಕೆಲವು ದಿನಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ತದನಂತರ ಜೂನ್ 30ರಂದು ಅವರು ನಿಧನ ಹೊಂದಿದರು. ಅವರು ಘಾನದ ಉತ್ತರಭಾಗದಲ್ಲಿ **ವಾ** (wa) ಎಂಬಲ್ಲಿ ಏಪ್ರಿಲ್ 1955ರಲ್ಲಿ ಒಂದು ಅಹ್ಮದಿ ಮನೆತನದಲ್ಲಿ ಜನಿಸಿದರು. ಅವರ ತಂದೆ ಅಲ್‌ಹಾಜ್ ಖಾಲಿದ್ ಸಾಲೆಹ್ ಸಾಹೆಬ್ **ವಾ** (wa) ಸಮೀಪದ ಒಂದು ಊರಿನಲ್ಲಿ ಇಮಾಂ ಆಗಿದ್ದರು. ಅಲ್ಲಿ ಸಾಮಾನ್ಯವಾಗಿ ಜನರು ಬಹುದೇವಾರಾಧಕಾರಾಗಿದ್ದರು. ಅವರು ಈ ಬಹುದೇವಾರಾಧಕರಿಗೆ ತಬ್‌ಲೀಗ್‌ನ ಕಾರಣದಿಂದ ಅಹ್ಮದಿಯ್ಯತ್ ಖಾಯೆಮ್ ಆಯಿತು. ದಿವಂಗತರ ಬಾಲ್ಯವು ವಾ (wa) ನಲ್ಲಿ ಕಳೆಯಿತು. ಓರ್ವ ಗಂಭೀರ ಸ್ವಭಾವವುಳ್ಳ, ಕೌಶಲ್ಯವುಳ್ಳ ಮತ್ತು ತತ್ವಗಳನ್ನು ಇಷ್ಟಪಡುವ ಮಹಿಳೆ ಆಗಿದ್ದರು. ವೃತ್ತಿಯಲ್ಲಿ ಅವರು ಶಿಕ್ಷಕಿ ಆಗಿದ್ದರು. ತಮ್ಮ ಸಹುದ್ಯೋಗಿಗಳಿಗೆ, ಜಮಾಅತ್ತಿನವರಿಗೆ ಹಾಗೂ ಮತ್ತಿತರರಿಗೆ ಮಾರ್ಗದರ್ಶಕರಾಗಿದ್ದರು. ನಿವೃತ್ತಿಯ ನಂತರ ಬುಸ್ತಾನೆ ಅಹ್ಮದ್‌ನಲ್ಲಿ ಅಹ್ಮದಿಯಾ ಇಂಟರ್‌ನ್ಯಾಶನಲ್ ಸ್ಕೂಲ್‌ನ ಮುಖ್ಯ ಅಧ್ಯಾಪಿಕೆ ಆಗಿ ಸೇವೆ ಸಲ್ಲಿಸಿದರು. ಮಕ್ಕಳ ಶಿಕ್ಷಣ ಹಾಗೂ ತರಬೇತಿಗಾಗಿ ಅವರು ವಿಷೇಶವಾಗಿ ಆಸಕ್ತಿ ಹೊಂದಿದರು. ಅನೇಕ ಮಕ್ಕಳ ಶೈಕ್ಷಣಿಕ ವ್ಯೆಚ್ಚ ಸ್ವತಃ ವಹಿಸುತ್ತಿದ್ದರು. ಮತ್ತು ಅನೇಕ ಮಕ್ಕಳಿಗೆ ತಮ್ಮ ಮನೆಯಲ್ಲಿರಿಸಿ ವಿದ್ಯಾಭ್ಯಾಸ ನೀಡುತ್ತಿದ್ದರು. 2017ರಲ್ಲಿ ಅವರಿಗೆ ಸದರ್ ಲಜ್ನ ಇಮಾಅಲ್ಲಾಹ್ ಹುದ್ದೆಗೆ ನೇಮಿಸಲಾಗಿತ್ತು. ಬಹಳ ವಿಶಿಷ್ಠವಾಗಿ ಅವರು ತಮ್ಮ ಹೊಣೆಗಾರಿಕೆಯನ್ನು ನಿಭಾಯಿಸಿದರು. ಅವರು ನಿಧನ ಹೊಂದುವ ತನಕ ಸದರ್ ಲಜನಾ ಇಮಾಅಲ್ಲಾಹ್ ಹುದ್ದೆಯಲ್ಲಿ ಸೇವೆಸಲ್ಲಿಸಿದರು. ಪ್ರಸ್ತುತ ಕಾಲದಲ್ಲಿ COVID ಕಾರಣದಿಂದ ಅನೇಕ ನಿರ್ಬಂಧಗಳಿದ್ದರೂ ಸಹ ಇಂಟರ್‌ನೆಟ್‌ನ ಮುಖಾಂತರ ತರಬೇತಿಯ ಕಾರ್ಯಕ್ರಮಗಳನ್ನು ಜಾರಿ ಗೊಳಿಸಿದರು ಮತ್ತು ಲಜ್ನದ ಕೆಲಸ ನಿರ್ವಹಿಸಿದರು. ನಮಾಝುಗಳನ್ನು ಕಡ್ಡಾಯವಾಗಿ ನಿರ್ವಹಿಸುತ್ತಿದ್ದರು. ಮೂಸಿ ಆಗಿದ್ದರು. ಖಿಲಾಫತ್‌ನೊಂದಿಗೆ ಬಹಳ ನಿಷ್ಠೆಯ ಸಂಬಂಧ ಹೊಂದಿದ್ದರು. ಅವರ ಇಬ್ಬರು ಪುತ್ರರು ಮತ್ತು ಓರ್ವ ಪುತ್ರಿ ಮತ್ತು ನಾಲ್ಕು ಮೊಮ್ಮಕ್ಕಳನ್ನು ಅಗಲಿ ಹೋಗಿದ್ದಾರೆ. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಹಾಗೂ ರಹಮ್ ಅನುಗ್ರಹಿಸಲಿ. ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳು ಅವರ ಹೆಜ್ಜೆ ಗುರುತಲ್ಲಿ ಚಲಿಸುವ ಭಾಗ್ಯ ಗಳಿಸಲಿ. ಸಾತ್ವಿಕರೂ ಧರ್ಮಕ್ಕೆ ಸೇವೆ ಮಾಡುವವರೂ ಖಿಲಾಫತ್‌ನೊಂದಿಗೆ ಯಾವಾಗಲೂ ನಷ್ಠೆಯ ಸಂಬಂಧ ಸ್ಥಾಪಿಸುವವರೂ ಆಗಲಿ – **ಆಮೀನ್**.

ಎರಡನೆಯ ಜನಾಝು ಮುಕರ್‍ರಮ ಸಫಿಯ ಬೇಗಮ್ ಸಾಹಿಬ ರವರದ್ದಾಗಿದೆ. ಅವರು ಜೂನ್ 27ರಂದು ತಮ್ಮ 93 ಪ್ರಾಯದಲ್ಲಿ ನಿಧನ ಹೊಂದಿದರು **ಇನ್ನಾಲಿಲ್ಲಾಹಿ ವಿನ್ನಾ ಇಲೂಹಿ ರಾಜಿಊನ್**. ಅವರು ಖಾಝಿ ಅಬ್ದುಸ್ಸಲಾಮ್ ಭಟ್ಟಿ ಸಾಹಿಬ್ ಮತ್ತು ಮುಬಾರಕ ಬೇಗಮ್ ಸಾಹಿಬರವರಿಗೆ 1926ರಲ್ಲಿ ಜನಿಸಿದರು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಸಹಾಬಿ ಹಝ್ರತ್ ಖಾಝಿ ಅಬ್ದುರ್ರಹ್ಮಾನ್ ಸಾಹಿಬೆ(ರ) ರವರ ಮೊಮ್ಮಗಳಾಗಿದ್ದರು. ಮತ್ತು ಹಝ್ರತ್ ಖಾಝಿ ಝಿಯಾಉದ್ದೀನ್ ಸಾಹಿಬ್(ರ) ರವರ ಪುತ್ರನ ಮೊಮ್ಮಗಳು ಅಗಿದ್ದರು. ಅನೇಕ ವಿಶೇಶತೆಗಳನ್ನು ಹೊಂದಿದ್ದರು, ಖಿಲಾಫತ್‌ನೊಂದಿಗೆ ನಿಷ್ಠೆಯ ಸಂಬಂಧ ಹೊಂದಿದ್ದರು. ಅವರು ಕೇವಲ ತಮ್ಮ ಮಕ್ಕಳಲ್ಲದೆ ಮೊಮ್ಮಕ್ಕಳಲ್ಲಿಯು ಖಿಲಾಫತ್‌ನೊಂದಿಗೆ ನಿಷ್ಠೆಯ ಸಂಬಂಧವನ್ನು ಕಲ್ಪಿಸಿದ್ದಾರೆ. ಅವರು ಮೂಸಿ ಆಗಿದ್ದರು. ಶೇಖ್ ಮುಬಾರಕ್ ಅಹ್ಮದ್ ಸಾಹೆಬ್ ಅವರೊಂದಿಗೆ ಅವರ ಇದು ಎರಡನೇಯ ವಿವಾಹವಾಗಿದೆ. ಅವರಿಂದ ಓರ್ವ ಪುತ್ರಿ ಜನಿಸಿದೆ ಮತ್ತು ಮೊದಲನೆಯ ಪತಿಯಿಂದಲೂ ಸಂತಾನವಿದೆ. ಮೊದಲನೆಯ ಪತಿಯ ಹೆಸರು ನಸೀರ್ ಅಹ್ಮದ್ ಭಟ್ಟಿ ಎಂದಾಗಿತ್ತು. ಏನೇ ಇರಲಿ ಶೇಖ್ ಸಾಹೆಬ್‌ರವರು ಅನೇಕ ರಾಷ್ಟ್ರಗಳಲ್ಲಿ ಸೇವೆಸಲ್ಲಿಸಿದರು. ಅವರೊಂದಿಗೆ ಇವರು ಬಹಳ ನಿಷ್ಠೆಯಿಂದ ತಮ್ಮ ಜೀವನ ಕಳೆದಿದ್ದಾರೆ. ಅವರು ಶೇಖ್ ಸಾಹೆಬ್‌ರವರ ಮೊದಲನೆಯ ಪತ್ನಿಯ ಓರ್ವ ಪುತ್ರಿಯಲ್ಲದೆ ತಮ್ಮ ಇಬ್ಬರು ಪುತ್ರಿಯರು ಮತ್ತು ಮೂರು ಪುತ್ರರನ್ನು ಅಗಲಿ ಹೋಗಿದ್ದಾರೆ. ಓರ್ವ ಪುತ್ರ ಫಹೀಮ್ ಅಹ್ಮದ್ ಭಟ್ಟಿ ಸಾಹಿಬ್ ಇಲ್ಲಿ ಪ್ರೈವೇಟ್ ಸೆಕ್ರೇಟರಿಯ ಕಚ್ಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಓರ್ವ ಮೊಮ್ಮಗ ಸಬೂರ್ ಭಟ್ಟಿ ಸಾಹೆಬ್‌ರವರು ಮುರಬ್ಬಿ ಸಿಲ್‌ಸಿಲಾ ಆಗಿದ್ದಾರೆ. ವಕಾಲತ್ ತಬ್‌ಶೀರ್ ಯು.ಕೆ ನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇನ್ನೋರ್ವ ಮೊಮ್ಮಗ ಅಹ್ಮದ್ ಫವಾದ್ ಭಟ್ಟಿ ಸಾಹಿಬ್ ವಖ್ಫೆ ಝಿಂದಗಿ ಆಗಿದ್ದಾರೆ. ಅವರು ಶಿಕ್ಷಕನಾಗಿ ಕಾನೋ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಇನ್ನೋರ್ವ ಮೊಮ್ಮಗ ಖಲೀಖ್ ಅಹ್ಮದ್ ಭಟ್ಟಿ ಸಹ ತಮ್ಮ ವಿದ್ಯಾಭ್ಯಾಸ ಮುಗಿಸಿ ವಖ್ಫ್ ಮಾಡಿ ಈಗ ರಿವ್ಯೂ ಆಫ್ ರಿಲೀಜಿಯನ್ಸ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಇನ್ನೋರ್ವ ಮೊಮ್ಮಗ ನಬೀಲ್ ಅಹ್ಮದ್ ಸಾಹಿಬ್ ಎರಡು ವರ್ಷ ಮುಂಚೆ ಅನಾರೋಗ್ಯರಾಗಿದ್ದರು. ಆಗ ಅವರಿಗಾಗಿ ದುಆ ಮಾಡಿದರು. ಆಗ ಅಲ್ಲಾಹನು ಅವರಿಗೆ ಅವರ ಆರೋಗ್ಯದ ಬಗ್ಗೆ ತಿಳಿಸಿದನು. ತದನಂತರ ಅವರು ಆರೋಗ್ಯವಂತರಾದರು. ಅಲ್ಲಾಹನು ಅವರಿಗೆ ಸಂಪೂರ್ಣ ಆರೋಗ್ಯ ನೀಡಲಿ. ಅಲ್ಲಾಹನು ಅವರಿಗೂ

ಉತ್ತಮ ಸೇವಕನನ್ನಾಗಿರಿಸಲಿ ಮತ್ತು ಅವರ ಮಕ್ಕಳಿಗೂ ಧರ್ಮ ಸೇನಕನನ್ನಾಗಿರಿಸಲಿ. ಆಮೀನ್

ಅವರ ಓರ್ವ ಪುತ್ರಿ ಫರೀದ ಶೇಖ್ ಸಾಹಿಬ ಹೇಳುತ್ತಾರೆ: ನನ್ನ ತಾಯಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರೊಂದಿಗೆ ಬಹಳ ಪ್ರೀತಿಯನ್ನಿರಿಸಿದರು. ಪ್ರತಿಕ್ಷಣ ಅವರ ಭಾವಚಿತ್ರದ ಕಡೆ ಕೈಸಂಜ್ಞೆಯಿಂದ ಹೇಳುತ್ತಿದ್ದರು: ಇವರ ಕಾರದಿಂದಲೇ ನಮಗೆ ಎಲ್ಲಾ ವಸ್ತುಗಳು ದೊರಕಿವೆ. ಎಲ್ಲಾ ಅನುಗ್ರಹಗಳು ಸಹ ಇವರಿಂದಲೇ ಸಾಧ್ಯ. ಅದೇ ರೀತಿ ಆಫ್ರೀಕ ಹಾಗೂ ಅಮೇರಿಕದ ಮಹಿಳೆಯರೊಂದಿಗೆ ಬಹಳ ವಿಷೇಶ ಆತ್ಮೀಯತೆಯಿಂದ ಭೇಟಿಯಾಗುತ್ತಿದ್ದರು. ಅವರಲ್ಲಿ ಸಾಮಾನ್ಯವಾಗಿ ಅನೇಕ ಜನರು ದಿನಾಗಲು ಮನೆಗೆ ಬರುತ್ತಿದ್ದರು. ಮನೆಯಲ್ಲಿ ಯಾವ ಸಂಕೋಚವಿಲ್ಲದೆ ಸ್ವತಂತ್ರವಾಗಿ ಇರುತ್ತಿದ್ದರು ಮನೆಯ ಅಡುಗೆ ಮನೆಯಲ್ಲಿ ನನ್ನ ತಾಯಿಯೊಂದಿಗೆ ಮಾತನಾತ್ತಿದ್ದರು. ಅಂದರೆ ಅವರು ನಮ್ಮ ಕುಟುಂಬಸ್ತರ ಹಾಗೆಯೇ ಇರುತ್ತಿದ್ದರು.

ಅದೇ ರೀತಿ ಅವರ ಹಿರಿಯ ಪುತ್ರಿ ನಯೀಮ ಶಬೀರ್ ಸಾಹಿಬ ಹೇಳುತ್ತಾರೆ: ಅವರು ಬಹಳ ಮೃಧು ಸ್ವಭಾವವುಳ್ಳ ಎಲ್ಲರೊಂದಿಗೆ ಪ್ರೀತಿಯಿಂದಿರುತ್ತಿದ್ದರು. ಬಹಳ ಸಹನಶೀಲತೆವುಳ್ಳವರಾಗಿದ್ದರು, ನಮ್ಮ ಮನಸ್ಸಿನಲ್ಲಿ ಖಿಲಾಫತ್‌ನೊಂದಿಗೆ ಪ್ರೀತಿ ಹುಟ್ಟಿಸಿದರು. ಕಡ್ಡಾಯವಾಗಿ ಪತ್ರವನ್ನು ಬರೆಯಲು ಹೇಳಿಕೊಟ್ಟರು. ತನ್ನ ಮಕ್ಕಳ ಹಕ್ಕಿನಲ್ಲಿ ಯಾವಾಗಲೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ದುಆಗಳನ್ನು ಪಠಿಸುತ್ತಿದ್ದರು. ಬಡವರನ್ನು ಮತ್ತು ಅನಾಥರನ್ನು ವಿಚಾರಿಸುತ್ತಿದ್ದರು. ಚಂದ ಹಾಗೂ ಸದಖಾಗಳನ್ನು ಕಡ್ಡಯವಾಗಿ ನೀಡುತ್ತಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರ) ರವರು ವಿಶೇಷವಾಗಿ ಅವರನ್ನು ಶೇಖ್ ಮುಬಾರಕ್ ಅಹ್ಮದ್ ಸಾಹೆಬ್ ಅವರೊಂದಿಗೆ ನಿಕಾಹ್ ಮಾಡಿಸಿದರು. ಅವರು ಮುಬಲ್ಲಿಗ್ ಆಗಿದ್ದರು. ಅವರ ಮೊದಲನೆಯ ಪತ್ನಿಯು ನಿಧನ ಹೊಂದಿದ್ದರು ಮತ್ತು ಇವರ ಮೊದಲನೇಯ ಪತಿ ನಿಧನ ಹೊಂದಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರ) ಸಂಬಂಧದ ಸಂದರ್ಭದಲ್ಲಿ ಶೇಖ್ ಸಾಹಿಬ್‌ರವರನ್ನು ಒಂದು ಜಮಾಅತ್ತಿನ ಕೆಲಸದಿಂದ ಸಂತೋಷಗೊಂಡು ಹೇಳಿದರು ನಾನು ನಿಮಗೆ ಒಂದು ಉಡುಗೋರೆ ನೀಡುತ್ತಿರುವೆನು. ಶೇಖ್ ಸಾಹಿಬರು ಸಹ ಈ ಉಡುಗೋರೆಯನ್ನು ಗೌರವದಿಂದ ಕಾಂಡರು ಮತ್ತು ಆ ಉಡುಗೋರೆ ಸಫಿಯಾ ಬೇಗಮ್ ಸಾಹಿಬರ ರೂಪದಲ್ಲಾಗಿತ್ತು. ಶೇಖ್ ಸಾಹೆಬರು ಆ ಉಡುಗೊರೆಯನ್ನು ಗೌರವಿಸಿ ಅವರೊಂದಿಗೆ ಮದಲನೆಯ ಪತಿಯಿಂದ ಇದ್ದ ಮಕ್ಕಳನ್ನು ಸಹ ಉತ್ತಮವಾಗಿ ನೋಡಿಕೊಂಡರು. ಅವರ ಹಿರಿಯ ಪುತ್ರ ಶಮೀಮ್ ಭಟ್ಟಿ ಸಾಹಿಬ್ ಸ್ಕೂಲ್ ಹಾಗೂ ಕಾಲೇಜಿನಲ್ಲಿ ನನ್ನೊಂದಿಗೆ ಅಭ್ಯಾಸ ಮಾಡಿದ್ದಾರೆ ಮತ್ತು ನಾನು ನೋಡಿದ್ದೇನೆ ಶೇಖ್ ಸಾಹಿಬ್ ಅವರೊಂದಿಗೆ ಕಾರ್ಯನಿರ್ವಹಿಸುವ ಮೈದಾನದಲ್ಲಿ ಓರ್ವ ವಾಖಿಫೆ ಝಿಂದಗಿಯ ಪತ್ನಿ ಬೆಂಬಲ ನೀಡಬೇಕಾದ ರೀತಿಯಲ್ಲಿ ಬೆಂಬಲ ನೀಡಿದ್ದಾರೆ. ಬಹಳ ಕಡಿಮೆ ಪ್ರಮಾಣದಲ್ಲಿ ಮುಬಲ್ಲಿಗೀನರ ಪತ್ನಿಯರು ಬೆಂಬಲ ನೀಡುತ್ತಾರೆ. ಅತಿಥಿ ಸತ್ಕಾರವು ಸಹ ಶ್ರಮವಿಲ್ಲದೆ ಮಾಡುತ್ತಿದ್ದರು. ಅದೇ ರೀತಿ ಜಮಾಅತ್ತಿನ ಸದ್ಯರಿಗೂ ಸಹ ದುಆ ಮಾಡುತ್ತಿದ್ದರು. ಶೇಖ್ ಸಾಹಿಬ್ ಅವರ ಅಧೀನದಲ್ಲಿದ್ದ ಮುಬಲ್ಲಿಗಿಗ್ ನವರೊಂದಿಗೆ ಮತ್ತು ಅವರ ಕುಟುಂಬಸ್ತರೊಂದಿಗೆ ಬಹಳ ಪ್ರೀತಿಯಿಂದ ಇರುತ್ತಿದ್ದರು. ಖಿಲಾಫತ್ ನಂತರ ಅವರೊಂದಿಗೆ ನನ್ನ ಸಂಬಂಧವೂ ಇನ್ನು ದೃಢವಾಯಿತು. ಪರಿಚಯವಾದ ನಂತರ ನಾನು ನೋಡಿದ್ದೇನೆ. ಅವರು ಖಿಲಾಫತ್ತಿನ ಶೂರರಲ್ಲಿ ಒಬ್ಬರಾಗಿದ್ದರು. ಇಂತಹವರು ಬಹಳ ಕಡಿಮೆ ಪ್ರಮಾಣದಲ್ಲಿದ್ದಾರೆ. ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ ಮತ್ತು ಅವರ ಸಂತಾನವನ್ನು ಸಹ ಯಾವಾಗಲೂ ಜಮಾಅತ್ತಿನೊಂದಿಗೆ ಹಾಗೂ ಖಿಲಾಫತ್‌ನೊಂದಿಗೆ ನಿಷ್ಠೆಯ ಸಂಬಂಧ ಹೊಂದುವವರಾಗಲಿ.

ಮೂರನೆಯ ಜನಾಝಾ ಮುಕರ್ರಮ್ ಅಲಿ ಅಹ್ಮದ್ ಸಾಹಿಬ್‌ರವರದ್ದಾಗಿದೆ ಅವರು ವಖ್ಫೆ ಜದೀದಿನ ನಿವೃತ್ತಿ ಹೊಂದಿದ ಮುಅಲ್ಲಿಮ್ ಆಗಿದ್ದರು. ಇವರು ಜೂನ್ 18ರಂದು 86 ವಯಸ್ಸಿನಲ್ಲಿ ನಿಧನ ಹೊಂದಿದರು **ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಅವರ ತಂದೆಯ ಹೆಸರು ಮಿಯಾ ಅಲ್ಲಾಹ್ ದತ್ತ ಸಾಹಿಬ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಸಹಾಬಿ ಆಗಿದ್ದರು. ಅವರು 1903ರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರ ಜೆಹ್‌ಲಮ್ ಪ್ರವಾಸದ ಸಂದರ್ಭದಲ್ಲಿ ತಮ್ಮ ಊರಿನಿಂದ ಹತ್ತು ಹನ್ನೆರಡು ಕಿಲೋ ಮೀಟರ್ ನಡೆದುಕೊಂಡು ಪ್ರಯಾಣಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕೈ ಮೇಲೆ ಬೈಅತ್ ಮಾಡಿದ್ದರು. ಏನೇ ಇರಲಿ 1965ರಲ್ಲಿ ಅವರು ವಖ್ಫ್ ಮಾಡಿದರು. 1967ರಿಂದ 2008ರ ವರೆಗೆ ಸುಮಾರು 41 ವರ್ಷ ಕಾಲ ಸಿಂಧ್ ಹಾಗೂ ಪಂಜಾಬಿನ ಹಲವಾರು ಜಮಾಅತುಗಳಲ್ಲಿ ಸೇವೆ ಸಲ್ಲಿಸಿದರು. ಅನೇಕ ಮಕ್ಕಳು, ಪುರುಷರು, ಮಹಿಳೆಯರಿಗೆ ಪವಿತ್ರ ಖುರ್‌ಆನ್ ಓದಿಸಿದರು. ಅವರ ತಬ್‌ಲೀಗಿನ ಪ್ರಯತ್ನಗಳಿಂದ ಹಾಗೂ ದುಆವಿನ ಕಾರಣದಿಂದ ಅನೇಕ ಜನರು ಜಮಾಅತ್ತಿನಲ್ಲಿ ಸೇರ್ಪಡೆಯಾದರು. ಅವರು ಮೂಸಿ ಆಗಿದ್ದರು. ಅವರು ಪತ್ನಿ ಹಾಗೂ ಇಬ್ಬರು ಪುತ್ರಿಯರು ಮತ್ತು ಮೂರು ಪತ್ರರನ್ನು ಅಗಲಿ ಹೋಗಿದ್ದಾರೆ. ಅವರ ಓರ್ವ ಪುತ್ರ ಅಬ್ದುಲ್ ಹಾದಿ ತಾರಿಖ್ ಸಾಹೆಬರು ಘಾನದಲ್ಲಿ ಮುಬಲ್ಲಿಗ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಮತ್ತು ಅಲ್ಲಿನ ಇಂಟರ್ ನ್ಯಾಶ್ನಲ್ ಜಾಮಿಯಾ ಅಹ್ಮದಿಯಾದಲ್ಲಿ 7 ವರ್ಷದಿಂದ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಪರಿಸ್ಥಿತಿಯ ಕಾರಣ ಅವರು ತಮ್ಮ ತಂದೆಯವರ ಜನಾಝುದಲ್ಲಿ ಭಾಗವಹಿಸಲಿಲ್ಲ. ಅವರ ಇಬ್ಬರು ಸಹೋದರರ ಮಕ್ಕಳು ಸಹ ಮುಬಲ್ಲಿಗ್ ಆಗಿದ್ದಾರೆ ಮತ್ತು ಮೂರು ಮೊಮ್ಮಕ್ಕಳು ಪವಿತ್ರ ಖುರ್‌ಆನಿನ ಹಾಫಿಝ್ ಆಗಿದ್ದಾರೆ.

ಮಗ್‌ಫೂರ್ ಅಹ್ಮದ್ ಮುನೀರ್ ಸಾಹಿಬ್, ಅವರು ಮುರಬ್ಬಿ ಆಗಿದ್ದಾರೆ ಅವರು ಹೇಳುತ್ತಾರೆ. ಮೌಲವಿ ಸಾಹೆಬರು ನಿಸ್ಸಂದೇಹವಾಗಿ ಎಲ್ಲಾ ಮುಬಲ್ಲಿಗರಿಗೆ ಮತ್ತು ಮುಅಲ್ಲಿಮರಿಗೆ ಓರ್ವ ಮಾರ್ಗದರ್ಶಕರಾಗಿದ್ದರು. ಕಡಿಮೆ ಮಾತನಾಡುವವರು, ತಮ್ಮ ಕೆಲಸದಲ್ಲಿ ನಿರತರಾಗಿರುವರು, ದುಆ ಮಾಡುವರು, ಎಲ್ಲರೊಂದಿಗೆ ಬೆರೆಯುವ ಸ್ವಭಾವದವರು, ಎಲ್ಲರೊಂದಿಗೆ ಮುಗುಳುನಗುನಗುತ್ತ ಭೇಟಿಯಾಗುವರು, ಖಿಲಾಫತೆ ಅಹ್ಮದಿಯಗಾಗಿ ಜೀವ ಅರ್ಪಿಸುವವರು, ಕೋಪಗೊಂಡಿರುವಾಗ ಅದು ಸಹ ಬಹಳ ಭಾವನಾತ್ಮಕವಾಗುತ್ತಿತ್ತು. ಮೌಲವಿ ಸಾಹೆಬರು ಓದಿಸಿದ ಮಕ್ಕಳು ದೊಡ್ಡವರಾದರು ಸಹ ಅವರ ಮನಸ್ಸಿನಿಂದ ಮೌಲವಿ ಸಾಹೆಬರ ಪ್ರೀತಿ ಕಡಿಮೆ ಆಗಲಿಲ್ಲ. ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ. **ಆಮೀನ್**

ನಾಲ್ಕನೆಯ ಜನಾಝಾ ಮುಕರ್ರಮ ರಫೀಖಾ ಬೀಬಿ ಸಾಹಿಬರದ್ದಾಗಿದೆ ಅವರು ಬಶೀರ್ ಅಹ್ಮದ್ ಡೋಗರ್ ಸಾಹೆಬ್‌ರವರ ಪತ್ನಿ ಆಗಿದ್ದರು. ಅವರು ಮೇ 22ರಂದು ನಿಧನ ಹೊಂದಿದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ಪತಿಗೆ ಅಹ್ಮದಿಯ್ಯತ್ ಅವರ ಪಿತಾಮಹ ಹಝ್ರತ್ ಮಲಕ್ ಸರ್‌ದಾರ್ ಖಾನ್ ಡೋಗರ್ ಸಾಹಿಬ್ ನಾಮ್‌ದಾರ್ ಅವರೊಂದಿಗೆ ಬಂದಿತ್ತು. ಅವರು ಸಹಾಬಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆಗಿದ್ದರು. ಅವರ ಪುತ್ರ ರಿಯಾಝ್ ಅಹ್ಮದ್ ಡೋಗರ್ ಸಾಹಿಬ್ ಹೇಳುತ್ತಾರೆ: ನಾನು ಚೇತರಿಸಿಗೊಂಡಾಗಿನಿಂದಲೂ ನಿಮಗೆ ನಮಾಝ್ ಪಠಿಸುವವರು ಧರ್ಮನಿಷ್ಠರನ್ನಾಗಿ ಕಂಡಿದ್ದೇನೆ. ಉಪವಾಸ ಹಾಗೂ ನಮಾಝುನ್ನು ಕಡ್ಡಾಯವಾಗಿ ನಿರ್ವಹಿಸುವವರಾಗಿದ್ದರು. ಪವಿತ್ರ ಖುರ್‌ಆನಿನ ಅನೇಕ ಭಾಗಗಳನ್ನು ಪಠಿಸಿದ್ದರು. ಐದು ಹೊತ್ತಿನ ನಮಾಝುನ್ನು ಕಡ್ಡಾಯವಾಗಿ ನಿರ್ವಹಿಸುವವರಾಗಿದ್ದರು. ನಮಾಝ್ ನಿರ್ವಹಿಸುವಾಗ ತಮ್ಮ ಮೊಮ್ಮಕ್ಕಳನ್ನು ತಮ್ಮೊಂದಿಗೆ ನಿಲ್ಲಿಸಿ ಕೊಳ್ಳುತ್ತಿದ್ದರು. ನಮಾಝಿನ ನಂತರ ಸುದೀರ್ಘ ಕಾಲ ತಸ್‌ಬೀಹ್ ಪಠಿಸುತ್ತಿದ್ದರು. ಅದೇ ರೀತಿ ಪವಿತ್ರ ಖುರ್‌ಅನನ್ನು ಉಚ್ಚ ಸ್ವರದಲ್ಲಿ ಪಠಿಸುತ್ತಿದ್ದರು. ಅವರ ಧ್ವನಿ ಇಡೀ ಮನೆಯಲ್ಲಿ ಪ್ರತಿಧ್ವನಿಸುತ್ತಿತ್ತು. ಖಿಲಾಫತ್‌ನೊಂದಿಗೆ ಬಹಳ ನಿಷ್ಠೆ ಹಾಗೂ ವಾತ್ಸಲ್ಯದ ಸಂಬಂಧ ಹೊಂದಿದ್ದರು. ನನ್ನ ಪುತ್ರ ಮುರಬ್ಬಿ ಆಗುತ್ತಿದ್ದಾನೆ ಎಂದು ಬಹಳ ಗರ್ವದಿಂದ ಹೇಳುತ್ತಿದ್ದರು. ಅದೇ ರೀತಿ ನನ್ನ ಮೊಮ್ಮಗ ಸಹ ಮುರಬ್ಬಿ ಆಗುತ್ತಿದ್ದಾನೆ ಎಂದು ಸಹ ಗರ್ವದಿಂದ ಹೇಳುತ್ತಿದ್ದರು. ಅವರು ಆರು ಪುತ್ರರನ್ನು, ಒಂದು ಪುತ್ರಿಯನ್ನು ಹಾಗೂ ಮೊಮ್ಮಕ್ಕಳನ್ನು ಅಗಲಿ ಹೋದರು. ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಮಕ್ಕಳು ಅವರ ಹೆಜ್ಜೆ ಗುರುತಲ್ಲಿ ಚಲಿಸುವ ಭಾಗ್ಯ ಗಳಿಸಲಿ. ಸಾತ್ವಿಕರೂ ಧರ್ಮಕ್ಕೆ ಸೇವೆ ಮಾಡುವವರೂ ಖಿಲಾಫತ್‌ನೊಂದಿಗೆ ಯಾವಾಗಲೂ ನಿಷ್ಠಾವಂತ ಸಂಬಂಧ ಸ್ಥಾಪಿಸುವವರೂ ಆಗಲಿ – **ಆಮೀನ್.**

ಅದೇ ರೀತಿ ಇವರೊಂದಿಗೆ ಕೆಲವು ಜನರನ್ನು ಸಹ ಜನಾಝಾದಲ್ಲಿ ಸೇರಿಸುತ್ತೇನೆ ಅವರ ಬಗ್ಗೆ ಕಳೆದ ಖುತ್‌ಬಗಳಲ್ಲಿ ಪ್ರಸ್ತಾವನೆ ಆಗಿದೆ. ಪರಿಸ್ಥಿತಿಯು ಉತ್ತಮವಾಗದ ಕಾರಣ ಅವರ ಜನಾಝಾ ಪಠಿಸಿರಲಿಲ್ಲ ಅವರಲ್ಲಿ ನಾಸಿರ್ ಸಯೀದ್ ಸಾಹಿಬ್, ಗುಲಾಮ್ ಮುಸ್ತಫಾ ಸಾಹಿಬ್, ಇಸ್ಲಾಮಬಾದ್‌ನ ಡಾ॥ ನಖೀ ಅಹ್ಮದ್ ಸಾಹಿಬ್, ಇಂಡೋನೇಶಿಯಾದ ಮುರಬ್ಬಿ ಝುಲ್‌ಫಿಖಾರ್ ಸಾಹಿಬ್‌ರವರ ಜನಾಝು ಸಹ ಸೇರಿರುತ್ತದೆ. ಅಲ್ಲಾಹನು ಅವರೆಲ್ಲರಿಗೂ ಮಗ್‌ಫಿರತ್ ದಯಪಾಲಿಸಲಿ. **ಆಮೀನ್**

***************************

## ಸೂಚನೆ

ಓದುಗರಲ್ಲಿ ವಿನಂತಿಸಿಕೊಳ್ಳುವುದೇನಂದರೆ ಈ ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯಗಳು ಹಾಗೂ ಸಲಹೆ ಸೂಚನೆಗಳಿದ್ದಲ್ಲಿ ನಮ್ಮನ್ನು ನೇರವಾಗಿ ಸಂಪರ್ಕಿಸಿ.

**email: www.kannadabadar@gmail.com**

**Mob or whatsapp: 8050330779**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಕಟ್ಟಡದಲ್ಲಿ 6 Apartments (ವಸತಿಗೃಹ) ವೂ ಇದೆ. ನೆಲಮಾಳಿಗೆ (Groundfloor) ಯ ವಿಸ್ತೀಣರ್ಕ 2215 ಚ.ಮಿ ಇದೆ. ನೆಲಮಹಡಿ (Groundfloor)ಯ ಮೇಲೆ 18 ಕೋಣೆಯಿದೆ. ಅತಿಥಿಗೃಹ ಇದೆ. ಒಂದು ಅಡುಗೆಕೋಣೆ ಮತ್ತು 8 ಸ್ನಾನಗೃಹ ಗಳಿವೆ. ಒಂದು ದೊಡ್ಡ ಸಭಾಂಗಣವಿದೆ. ಅದರ ವಿಸ್ತೀಣರ್ಖ 1318 ಚಮೀ ವಿದೆ.

ಪ್ರಥಮ ಅಂತಸ್ತಿನಲ್ಲಿ 13 ಕೋಣೆಗಳಿವೆ. ಒಂದು ಅಡುಗೆ ಕೋಣೆ ಮತ್ತು 5 ಬಾತ್ ರೂಂ ಅದಲ್ಲದೆ ಒಂದು ದೊಡ್ಡ ಸಭಾಂಗಣವಿದೆ. ಅದರ ವಿಸ್ತೀರ್ಣ 1223 ಚ.ಮೀ.

(ನೆಲಮಹಡಿ ಮತ್ತು ಪ್ರಥಮ ಅಂತಸ್ತುಗಳನ್ನು ಮಜ್ಲಿಸ್ ಅನ್ಸಾರುಲ್ಲಾಹ್ ಬಳಸಿಕೊಳ್ಳುವುದು)

ಎರಡನೆಯ ಅಂತಸ್ತಿನ ಕೋಣೆಗಳ ಸಂಖ್ಯೆ 21. ಒಂದು ಅಡುಗೆ ಕೋಣೆ ಮತ್ತು 8 ಬಾತ್ ರೂಮ್ಸ್, ಅಲ್ಲದೇ 917 ಚ.ಮೀ ಒಳಗೊಂಡ ಇದರಲ್ಲಿ ಐದು ಸಂಗ್ರಹಣಾ ಕೋಣೆಗಳಿವೆ.

ಮೂರನೇ ಅಂತಸ್ತಿನ ಕೋಣೆಗಳ ಸಂಖ್ಯೆ 8. ಒಂದು ಅಡುಗೆ ಕೋಣೆ ಮತ್ತು 3 ಬಾತ್‌ರೂಮ್ಸ್, ಈ ಅಂತಸ್ತಿನಲ್ಲಿದೆ. ಒಂದು ಸಭಾಂಗಣವೂ ಇದೆ. ಅದರ ವಿಸ್ತೀರ್ಣ 902 ಚ.ಮೀ.

(ಎರಡನೆ ಅಂತಸ್ತು ಮತ್ತು ಮೂರನೆ ಅಂತಸ್ತು ಲಜ್ನ ಇಮಾವುಲ್ಲಾಹ್, ಜರ್ಮನಿ ಇವರ ಬಳಕೆಯಲ್ಲಿರುವುದು) ನೆಲಮಾಳಿಗೆಯಲ್ಲಿ ವಾಹನ ನಿಲುಗಡೆಗಾಗಿ ಜಾಗವಿದೆ.

ಹುಝೂರ್ ಮೊದಲು ಲಜ್ನರವರ ಕಚೇರಿಗಳು ಮತ್ತು ಅದರ ಸುತ್ತಮುತ್ತ ಎಲ್ಲವನ್ನು ವೀಕ್ಷಿಸಿ ಅನಂತರ ಮಜ್ಲಿಸ್ ಅನ್ಸಾರುಲ್ಲಾಹ್‌ಗಳ ಕಚೇರಿಗಳನ್ನು, ಸಭಾಂಗಣಗಳನ್ನು ಮತ್ತು ಇತರ ಸ್ಥಳಗಳನ್ನು ವೀಕ್ಷಿಸಿದರು.

ಅನಂತರ ಹುಝೂರ್ ಒಂದು ವಿಶಾಲವಾದ ಸಭಾಂಗಣಕ್ಕೆ ಆಗಮಿಸಿದರು. ಅಲ್ಲಿ ಈ ಕಟ್ಟಡದ "ಉದ್ಘಾಟನಾ ಸಮಾರಂಭ" ಏರ್ಪಡಿಸಲಾಗಿತ್ತು.

ಈ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲು ಲಜ್ನ ಇಮಾವುಲ್ಲಾಹ್ ಮತ್ತು ಮಜ್ಲಿಸ್ ಅನ್ಸಾರುಲ್ಲಾಹ್‌ಗಳ ಪದಾಧಿಕಾರಿಗಳು ದೇಶಾದಾದ್ಯಂತದಿಂದ ಆಗಮಿಸಿದ್ದರು.

ಕಾರ್ಯಕ್ರಮು ಖುರ್‌ಆನ್ ಪಠಣದಿಂದ ಆರಂಭವಾಯಿತು. ಅದನ್ನು ಮುಕರ್ರಮ್ ಸಾಹಿಬ್ ಅಹ್ಮದ್ ಸಾಹಿಬ್ ನೆರವೇರಿಸಿಕೊಟ್ಟರು. ಅದರ ಜರ್ಮನ್ ಅನುವಾದ ಮುಕರ್ರಮ್ ಖಾಜ ರಫೀಖ್ ಅಹ್ಮದ್ ಸಾಹಿಬ್ ಪ್ರಸ್ತುತಪಡಿಸಿದರು.

ಅನಂತರ ಸದರ್ ಮಜ್ಲಿಸ್ ಅನ್ಸಾರುಲ್ಲಾಹ್ ಜರ್ಮನಿ ಮುಕರ್ರಮ್ ಚೌಧರಿ ಇಫ್ತಿಖಾರ್ ಅಹ್ಮದ್ ಸಾಹಿಬ್ ತನ್ನ ಪರಿಚಯ ಭಾಷಣ ಪ್ರಸ್ತುತಪಡಿಸುತ್ತ ಹೇಳಿದರು. ಈ ಕಟ್ಟಡವನ್ನು 2 ಫೆಬ್ರವರಿ 2015 ರಂದು ಖರೀದಿಸಲಾಯಿತು ಈ ಸಂದರ್ಭದಲ್ಲಿ ಒಂದು ವಿಷಯವನ್ನು ವಿವರಿಸ ಬಯಸುವೆನು. ಅದೇನೆಂದರೆ ವರ್ಷ 1987 ರಿಂದ 1991 ರ ವರೆಗೆ ಈ ಕಟ್ಟಡದ ಒಂದು ಭಾಗ ಜರ್ಮನಿ ಜಮಾಅತಿನ ರಾಷ್ಟ್ರೀಯ ಕೇಂದ್ರವಾಗಿತ್ತು. ಆ ಸಮಯದಲ್ಲಿ ಒಂದು ಅಂತಸ್ತನ್ನು ಬಾಡಿಗೆಯ ಮೇಲೆ ಪಡೆಯಲಾಗಿತ್ತು. ಜಮಾಅತ್ ಕೇಂದ್ರವಲ್ಲದೆ ಮೂರು ಉಪ ಸಂಘಟನೆಗಳ ಕೇಂದ್ರಗಳು ಕೂಡಾ ಇದೇ ಅಂತಸ್ತಿನ ಮೇಲೆ ಇದ್ದವು. ಆ ವರ್ಷಗಳಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ಈ ಕೇಂದ್ರಕ್ಕೆ ಆಗಮಿಸಿದ್ದರು. ಇಲ್ಲಿ ನಮ್ಮ ಜಮಾಅತ್ತಿನ ತುಂಬಾ ಕಾರ್ಯಕ್ರಮಗಳೂ ನಡೆದಿವೆ. 1989 ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾಹೆಬರ ಪತ್ನಿ, ದಿವಂಗತ ಮರ್‌ಯಮ್ ಸಿದ್ದೀಖಾ ಸಾಹಿಬ ಅವರೂ ಸದರ್ ಲಜ್ನ ಇಮಾಉಲ್ಲಾಹ್ ನೆಲೆಯಲ್ಲಿ ಇಲ್ಲಿ ಆಗಮಿಸಿದ್ದರು. ಲಜ್ನರವರ ಕಾರ್ಯಕ್ರಮಗಳೂ ಇಲ್ಲಿ ಜರುಗಿವೆ.

ಈಗ ಅಲ್ಲಾಹನ ಅನುಗ್ರಹದಿಂದ 24 ವರ್ಷಗಳ ನಂತರ ಈ ಇಡೀ ಕಟ್ಟಡವು ಕೇವಲ ಎರಡೇ ಉಪ ಸಂಘಟನೆಗಳು ಸೇರಿ ಖರೀದಿಸಿವೆ.

ಅನಂತರ 8 ಗಂಟೆ 50 ನಿಮಿಷಕ್ಕೆ ಹುಝೂರ್ ಸಭಿಕರನ್ನುದ್ದೇಶಿಸಿ ಮಾತನಾಡಿದರು.

**"ಬೈತುಲ್ ಆಫಿಅತ್" ಮಜ್ಲಿಸ್ ಅನ್ಸಾರುಲ್ಲಾಹ್ ಮತ್ತು ಲಜ್ನ ಇಮಾಯುಲ್ಲಾಹ್ ಜರ್ಮನಿಯ ಕೇಂದ್ರ ಕಚೇರಿಗಳ ಉದ್ಘಾಟನಾ ಸಂದರ್ಭದಲ್ಲಿ ಹುಝೂರರ ಸಂಬೋಧನೆ.**

ತಶ್‌ಹುದ್ ತವ್ವೂದ್ ಮತ್ತು ತಸ್ಮಿಯಾ ನಂತರ ಹುಝೂರ್ ಹೇಳಿದರು. ಅಲ್‌ಹಮ್ದುಲಿಲಾಹ್ ಮಜ್ಲಿಸ್ ಅನ್ಸಾರುಲ್ಲಾಹ್ ಜರ್ಮನಿ ಮತ್ತು ಲಜ್ನ ಇಮಾಯುಲ್ಲಾಹ್ ಜರ್ಮನಿಯವರಿಗೆ ಒಂದು ವಿಶಾಲವಾದ ಕಟ್ಟಡವನ್ನು ಬರುವ ಆಕ್ಷೇಪವೇನೆಂದರೆ ಮುಸಲ್ಮಾನರು ಉಗ್ರವಾದದ ಶಿಕ್ಷಣ ನೀಡುತ್ತಾರೆ ಮತ್ತು ಅದರಂತೆ ನಡೆದುಕೊಳ್ಳುತ್ತಾರೆ ಎಂಬುದು. ಅದರೂ ಅಹ್ಮದಿಯಾ ಜಮಾಅತ್‌ನ Image(ರೂಪ) ಬೇರೆ ದೇಶಗಳ ಹಾಗೆ ಜರ್ಮನಿಯಲ್ಲಿಯೂ ತುಂಬ ಒಳ್ಳೆಯದಾಗಿದೆ. ಜನರಲ್ಲಿಯೂ ನಮ್ಮ ಬಗ್ಗೆ ಒಳ್ಳೆಯ ಭಾವನೆ ಇದೆ. ಸರಕಾರಿ ನೆಲೆಯಲ್ಲೂ, ಇದು ಶಾಂತಿಪ್ರಿಯ ಜಮಾಅತ್ ಆಗಿದೆ ಎಂಬ ವಿಶ್ವಾಸವಿದೆ. ಆದರೂ ನಾವು ಸ್ಪಷ್ಟಪಡಿಸಬೇಕಾಗಿದೆ ಮತ್ತು ನಿರಂತರವಾಗಿ ಈ ಸ್ಪಷ್ಟನೆಯನ್ನು ಕೊಡುವ ಅವಶ್ಯಕತೆಯಿದೆ. ಏಕೆಂದರೆ ಲೋಕಕ್ಕೆ ಮನವರಿಕೆಯಾಗಬೇಕು. ಇಲ್ಲಿಯ ಈ ಕಟ್ಟಡವನ್ನು ಅಹ್ಮದಿಯಾ ಜಮಾಅತಿನ ಉಪ ಸಂಘಟನೆಗಳು ಬಳಸಬೇಕಾಗಿದೆ. ಅದು ಯಾವುದೇ ಉಗ್ರವಾದದ ಉದ್ದೇಶಗಳನ್ನು ಸಾಧಿಸಲು ಅಲ್ಲ ಬದಲಾಗಿ ಒಂದು "ರಕ್ಷಣಾ ಕವಚ"ವಾಗಿ ಇಲ್ಲಿ ನಾವು ಹೆಜ್ಜೆಯನ್ನಿಟ್ಟಿದ್ದೇವೆ. ಹಝ್ರತ್ ಮಸೀಹ್ ಮೌಊದ್(ಅ) ಅದನ್ನೇ ಉಪದೇಶ ಮಾಡಿದ್ದರು. ನೀವು ಈ ಕಾಲದಲ್ಲಿ "ರಕ್ಷಣಾ ಗೃಹ" ಆಗಲು ಬಂದಿದ್ದೀರಿ. ಅವರು(ಅ) ತಮ್ಮ ಒಂದು ಕವನ ಪಂಕ್ತಿಯಲ್ಲಿ ಹೀಗೆ ನುಡಿದಿದ್ದರು:

"ಹ್ಯಂ ದರಿಂದೆ ಹರ್ ತರಫ್ ಮ್ಯೆ ಆಫಿಅತ್ ಕಾ ಹವಾಂ ಹಿಸಾರ್"
(ಸುತ್ತಲೂ ಕ್ರೂರ ಪ್ರಾಣಿಗಳಿವೆ ನಾನು ಶಾಂತಿಯ ಕೋಟೆಯಾಗಿದ್ದೇನೆ."

ಅಂತೂ ಇದು ಶಾಂತಿಯ ಕೋಟೆಯಾಗಿದೆ ಎಂಬುದನ್ನು ಜನರಿಗೆ ಮನವರಿಕೆ ಮಾಡಿಕೊಡುವ ಜವಾಬ್ದಾರಿ ಪ್ರತಿಯೊಬ್ಬ ಅಹ್ಮದಿಯ ಮೇಲಿದೆ. ಅನ್ಸಾರುಲ್ಲಾಹ್ ಅವರದ್ದು ಪರಿಪಕ್ವತೆ ಹೊಂದಿದ ವಯಸ್ಸಾಗಿರುತ್ತದೆ. ತಮ್ಮ ಪರಿಪಕ್ವತೆಯ ವಿಚಾರಗಳನ್ನು ಜಗತ್ತಿಗೆ ಅವರು ಮನವರಿಕೆ ಮಾಡಿಕೊಡಬೇಕಾಗಿದೆ. ಅಹ್ಮದಿಯಾ ಜಮಾಅತ್ ಇಸ್ಲಾಮಿನ ನಿಜವಾದ ರೂಪವನ್ನು ತೋರಿಸುವ ಒಂದು ಸಂಘಟನೆಯಾಗಿದೆ. ಅದು ಕೇವಲ ಶಾಂತಿ, ಪ್ರೀತಿ ಮತ್ತು ಸುರಕ್ಷತೆಯ ಶಿಕ್ಷಣ ಮಾತ್ರ ನೀಡುವುದಿಲ್ಲ. ಬದಲಾಗಿ ಈ ಜಮಾಅತ್ ಲೋಕವನ್ನು ತನ್ನ ನುಡಿಯಿಂದಲೂ ನಡೆಯಿಂದಲೂ ಒಂದು ಸುರಕ್ಷಿತ ತಾಣವಾಗಿಸಲು ಕರೆ ನೀಡುತ್ತದೆ.

ಅನ್ಸಾರುಲ್ಲಾಹ್ ಸದಸ್ಯರು ತಮ್ಮ ಮಕ್ಕಳಿಗೆ, ಪತ್ನಿಯರಿಗೆ, ತಮ್ಮ ಕುಟುಂಬದವರಿಗೆ ಮತ್ತು ಇತರರಿಗೆ ಈ ವಿಷಯವನ್ನು ಸ್ಪಷ್ಟವಾಗಿ, ವಿಶ್ವಾಸ ಹೊಂದುವಂತೆ ವಿವರಿಸಬೇಕಾಗಿದೆ. ನಮ್ಮ ಮನೆಯ ಹಿರಿಯರು ಅಲ್ಲಾಹನು ಅವರಿಗೆ ನಮ್ಮ "ಖವ್ವಮ್" ಅನ್ನಾಗಿ ಮಾಡಿದ್ದಾನೆ. ಅವನು ಕೇವಲ ನಮ್ಮ ಲೌಕಿಕ ಅಗತ್ಯಗಳನ್ನು ಮಾತ್ರವೇ ಪೂರೈಸುವುದಲ್ಲ. ಬದಲಾಗಿ ಎಲ್ಲ ರೀತಿಯ ಆಫಿಅತ್ (ಸುರಕ್ಷತೆ) ಅವನಿಂದ ಲಭಿಸುತ್ತದೆ. ಅವನು ನಮ್ಮ ಭಾವನೆಗಳನ್ನು ಅರಿಯುವವನಾಗಿದ್ದಾನೆ. ನಮ್ಮ ಮನೆಯ ನೆಮ್ಮದಿ, ಸಂತೋಷವನ್ನು ಕಾಪಾಡುವವನಾಗಿದ್ದಾನೆ. ನಮ್ಮ ಮಕ್ಕಳ ಶಿಕ್ಷಣ, ತರಬೇತಿಯನ್ನು ಬಯಸುವವನಾಗಿದ್ದಾನೆ.

ಅದೇ ರೀತಿ ಲಜ್ನ ಇಮಾಯುಲ್ಲಾಹ್ ಸದಸ್ಯರೂ ನೆನಪಿಡಬೇಕು. ಅವರು ಈ ಲೌಕಿಕ ಸ್ವಾತಂತ್ರ್ಯವನ್ನೇ ಪ್ರಗತಿ ಎಂದು ಭಾವಿಸುತ್ತಾರೆ. ಇದು ದಾರಿ ತಪ್ಪಿಸುವ ಸ್ವಾತಂತ್ರ್ಯವಾಗಿದೆ. ಇಸ್ಲಾಮ್ ಸ್ವಾತಂತ್ರ್ಯವನ್ನು ನೀಡುತ್ತದೆ. ಆದರೆ ಅದು ಅಲ್ಲಾಹನು ನೀಡಿದ ನಿರ್ದೇಶನಗಳಿಗೆ ಒಳಪಟ್ಟಿರಬೇಕು. ಪ್ರತಿ ಲಜ್ನ ಸದಸ್ಯೆಯೂ ಮತ್ತು 15 ವರ್ಷ ದಾಟಿದ ಬಾಲಕಿಯೂ (ಆಗ ಅವಳು ಲಜ್ನದಲ್ಲಿ ಸೇರುತ್ತಾಳೆ) ಇದನ್ನು ತಿಳಿದಿರಬೇಕು ಏನೆಂದರೆ ನಿಜವಾದ ಆಫಿಅತ್ (ಸುರಕ್ಷತೆ) ಅಲ್ಲಾಹನ ಆದೇಶಗಳನ್ನು ಪಾಲಿಸುವುದರಿಂದಲೇ ದೊರಕುತ್ತದೆ, ಹೊರತು ಜನರ ಕಣ್ಣು ಕುಕ್ಕಿಸುವಂತಹ ಆಡಂಬರಗಳಿಂದ ಮತ್ತು ಮುಕ್ತ ಸ್ವಾತಂತ್ರ್ಯದಿಂದಲ್ಲ ಎಂದು.

ಇದೀಗ ಈ ಕಟ್ಟಡದಲ್ಲಿ ನಿಮ್ಮ ಕಚೇರಿಗಳು ಖಾಯಂ ಆಗಿವೆ. ಇಲ್ಲಿ ನೀವು ಸಭೆ ಸೇರುವಿರಿ. ಯೋಜನೆಗಳನ್ನು ಹಾಕಿಕೊಳ್ಳುವಿರಿ. ಆದರೆ ಸದಾ ನೆನಪಿಡಿರಿ. ಇಲ್ಲಿಗೆ ಬರುವ ಪ್ರತಿಯೊಬ್ಬ ಸದಸ್ಯರೂ ತಮ್ಮ ನಡೆ ನುಡಿಗಳಿಂದ ಅಹ್ಮದಿಯಾ ಜಮಾಅತಿನ ಮನೆಗಳಲ್ಲಿ ಶಾಂತಿ, ನೆಮ್ಮದಿ ಹಾಗೂ ಜಮಾಅತಿನ ಪರಿಸರದಲ್ಲೂ, ಹೊರಗೂ ಶಾಂತಿ ಮತ್ತು ನೆಮ್ಮದಿಯನ್ನು ಸ್ಥಾಪಿಸುವಂತಾಗಬೇಕು ಮತ್ತು ತಾವು ನಿಜವಾದ ಇಸ್ಲಾಮಿ ಶಿಕ್ಷಣಗಳಂತೆ ನಡೆಯುವವರಾಗಿದ್ದೇವೆ ಎಂದು ಮನದಟ್ಟು ಮಾಡಿಕೊಳ್ಳಬೇಕು.

ಹೊಸ ಕಟ್ಟಡಗಳನ್ನು ಪಡೆಯುವಾಗಲೆಲ್ಲಾ ನಾವು ಅಲ್ಲಾಹನಿಗೆ ಕೃತಜ್ಞರಾಗಿರುತ್ತೇವೆ. ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ) ರವರಿಗೆ ನೀಡಿದ ಭವಿಷ್ಯವಾಣಿಗೆ ಸಾಕ್ಷಿಯಾಗಿರುತ್ತೇವೆ. ಅವರೊಡನೆ ಅಲ್ಲಾಹನು ಹೇಳಿರುವನು: "ವಸಿಅ ಮಕಾನಕ" ನಿಮ್ಮ ಮನೆಗಳನ್ನು ವಿಸ್ತೃತಗೊಳಿಸಿರಿ ಎಂದು. ಅಲ್ಲಾಹನ ಅನುಗ್ರಹದಿಂದ ಜಮಾಅತಿನ ಅಗತ್ಯಗಳು ಬೆಳವಣಿಗೆ ಹೊಂದುತ್ತಿವೆ. ಎಲ್ಲಿಯ ಖಾದಿಯಾನ್ ಮತ್ತು ಎಲ್ಲಿಯ ಜರ್ಮನಿ ಮತ್ತು ಇತರ ದೇಶಗಳು! ಎಲ್ಲೆಲ್ಲೂ ದಿನನಿತ್ಯ ಒಂದು ಹೊಸ ರೂಪ ಹಾಗೂ ಪ್ರಗತಿಯನ್ನು ಕಾಣುತ್ತೇವೆ.

ನೆನಪಿಡಿರಿ. ಹಝ್ರತ್ ಮಸೀಹ್ ಮೌಊದ್(ಅ) ರವರಿಗೆ ಅಲ್ಲಾಹನು

"ವಸಿಅ ಮಕಾನಕ" ಎಂಬ ದೇವವಾಣಿಯನ್ನು ನೀಡಿದಾಗ ಯಾವ ಸಾಧನೆಗಳೂ ಇರಲಿಲ್ಲ. ಆದರೆ ಕೇವಲ ಆ ಭವಿಷ್ಯ ನುಡಿದಿತ್ತು. ಅದು ಕೇವಲ ಆದೇಶವಾಗಿರಲಿಲ್ಲ. ಬದಲು ಒಂದು ಭವಿಷ್ಯವಾಣಿ ಆಗಿದ್ದಿತು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ನನಗೆ 'ವಸಿಅ ಮಕಾನಕ' ಎಂಬ ಭವಿಷ್ಯವಾಣಿಯಾಯಿತು. ಆದರೆ ನನ್ನ ಬಳಿ ಯಾವ ಆಸ್ತಿಯೂ ಇರಲಿಲ್ಲ. ವಿಸ್ತರಿಸಲು ಯಾವ ಹಣವೂ ಇರಲಿಲ್ಲ. ಐದು ರೂಪಾಯಿ ಕೊಟ್ಟು ಒಬ್ಬ ವ್ಯಕ್ತಿಯನ್ನು ಬಟೌಲಾಗೆ ಹೇಳಿ ಕಳುಹಿಸಿದೆ. ಹೋಗಿ ಸ್ವಲ್ಪ ಕಟ್ಟಿಗೆಗಳನ್ನೂ, ಚಪ್ಪರ ಮತ್ತು ರೀಪರ್ಸ್‌ಗಳನ್ನೂ ತೆಗೆದುಕೊಂಡು ಬನ್ನಿ. ಆ ಭವಿಷ್ಯವಾಣಿಯನ್ನು ನೆರವೇರಿಸಲು ಒಂದು ಸಣ್ಣ ಚಪ್ಪರವನ್ನಾದರೂ ಹಾಕಿಕೊಳ್ಳೋಣ.

ಇಂದು ಈ ಚಪ್ಪರ, ಲೋಕದ 206 ದೇಶಗಳವರೆಗೆ ವಿಸ್ತೃತಗೊಂಡಿದೆ. ಆ ಚಪ್ಪರ, ಚಪ್ಪರವಾಗಿ ಉಳಿಯಲಿಲ್ಲ. ಬದಲು ಕಾಂಕ್ರಿಟಿನ ಬಲಿಷ್ಠ ಕಟ್ಟಡವಾಗಿ ನಿರ್ಮಿಸಲ್ಪಟ್ಟಿವೆ. ಆದುದರಿಂದ ಅದು ಕೇವಲ ಅಲ್ಲಾಹನ ಆದೇಶವಾಗಿರಲಿಲ್ಲ. ಬದಲು ಒಂದು ಭವಿಷ್ಯವಾಣಿ ಆಗಿದ್ದಿತ್ತು. ಅದನ್ನು ನಾವು ಈಗ ಪ್ರತಿ ಹೊಸ ಕಟ್ಟಡದ ರೂಪದಲ್ಲಿ ಕಾಣುತ್ತಿದ್ದೇವೆ.

ಆ ನೆಲೆಯಲ್ಲಿಯೂ ನಾವು ಕೃತಜ್ಞರಾಗಿರಬೇಕಾಗಿದೆ. ಅಲ್ಲಾಹನು ಯಾವ ರೀತಿ ಜಮಾಅತಿನಲ್ಲಿ ಜನರ ಆಧಿಕ್ಯದಿಂದ ಮಾತ್ರವಲ್ಲ. ತನ್ನ ವಾಗ್ದಾನದಂತೆ ವಸತಿ ನಿರ್ಮಾಣದ ವಿಸ್ತಾರವನ್ನೂ ದಯಪಾಲಿಸುತ್ತಿದ್ದಾನೆ. ಆದರೆ ಈ ಮಾತನ್ನು ನೆನಪಿಡಿ – ಹಝ್ರತ್ ಮಸೀಹ್ ಮೌಊದ್(ಅ) ರವರ ಆಗಮನದ ಒಂದು ಉದ್ದೇಶ ಆಧ್ಯಾತ್ಮಿಕ ಪ್ರಗತಿಗಾಗಿತ್ತು. ಹಾಗಾಗಿ ಪ್ರತಿ ಲಜ್ನ ಸದಸ್ಯೆ, ಪ್ರತಿ ನಾಸಿರ್, ಪ್ರತಿ ಖಾದಿಮ್, ಹಾಗೂ ಪ್ರತಿಯೊಬ್ಬ ಜಮಾಅತಿನ ಸದಸ್ಯನು ಪ್ರಗತಿ ಹೊಂದುವ ಅವಶ್ಯಕತೆ ಇದೆ. ಮೊದಲಿಗಿಂತ ಹೆಚ್ಚು ಸಂಬಂಧ ಬೆಳೆಸುವ ಅವಶ್ಯಕತೆ ಇದೆ. ಅಲ್ಲಾಹನೊಡನೆ ಮಾತ್ರ ನಾವು ನಿಜವಾದ ರೂಪದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ರವರ ಆಗಮನದ ಉದ್ದೇಶವನ್ನು ಪೂರ್ತಿಗೊಳಿಸುವವರಾಗುವೆವು. ಅನ್ಸಾರುಲ್ಲಾಹ್ ಅವರು ತಮ್ಮ ಹಕ್ಕುಗಳನ್ನೂ ಕರ್ತವ್ಯಗಳನ್ನೂ ಪೂರೈಸಿದಾಗ ಮಾತ್ರ ನಿಜವಾದ "ಅನ್ಸಾರುಲ್ಲಾಹ್" (ಅಲ್ಲಾಹನ ಸಹಾಯಕರು) ಎನ್ನಲು ಅರ್ಹರಾಗುವರು. ಹಾಗೆಯೇ ಲಜ್ನ ಸದಸ್ಯರು ತಾವು ನಿಜವಾದ "ಲಜ್ನ ಇಮಾಯಿಲ್ಲಾಹ್" ಆಗಿದ್ದೇವೆ ಎನ್ನಬಹುದು. ನೀವೆಲ್ಲಾ ಅಲ್ಲಾಹನ ನಿರ್ದೇಶನಗಳನ್ನು ಪಾಲಿಸುವವರಾಗಬೇಕು ಮತ್ತು ಈ ಸಂದೇಶವನ್ನು ಲೋಕದಲ್ಲೆಲ್ಲ ತಲುಪಿಸುವವರಾಗಬೇಕು.

ಅಲ್ಲಾಹನು ನಿಮಗೆಲ್ಲರಿಗೆ ಈ ಭಾಗ್ಯವನ್ನು ದಯಪಾಲಿಸಲಿ. ನಮ್ಮ ಮುಂದಿರುವ ಜಮಾಅತಿನ ಉನ್ನತ ಧ್ಯೇಯೋದ್ದೇಶಗಳನ್ನು ಎಲ್ಲ ರೀತಿಯಿಂದಲೂ ಪೂರೈಸುವವರನ್ನಾಗಿ ಮಾಡಲಿ. ಅಲ್ಲಾಹನು ನಮಗೆ ನೀಡಿದ ಅನುಗ್ರಹಗಳ ಹಕ್ಕುಗಳನ್ನು ಸರಿಯಾದ ರೀತಿಯಲ್ಲಿ ಪಾಲಿಸುವ ಭಾಗ್ಯವನ್ನು ದಯಪಾಲಿಸಲಿ.

ಸಂಬೋಧನೆಯ ನಂತರ ಹುಝೂರ್ ದುಆ ಮಾಡಿಸಿದರು. ಅನಂತರ ಹುಝೂರ್ ಔತಣ ಕೂಟದಲ್ಲಿ ಭಾಗವಹಿಸಿದರು. ಅದರಲ್ಲಿ ಭಾಗವಹಿಸಿದ ಎಲ್ಲರೂ ಹುಝೂರರ ಜೊತೆಯಲ್ಲಿ ಊಟ ಮಾಡುವ ಭಾಗ್ಯ ಪಡೆದರು.

**(ಮುಂದುವರಿಯುವುದು)**

### ಮಹೋನ್ನತನಾದ ದೇವ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ನಮ್ಮ ದೇವನೇ ನಮ್ಮ ಸ್ವರ್ಗ. ನಮ್ಮ ಅತ್ಯುನ್ನತ ಸಂತೋಷಗಳು ನಮ್ಮ ದೇವನಲ್ಲಿವೆ. ಏಕೆಂದರೆ ನಾವು ಅವನನ್ನು ನೋಡಿರುವೆವು ಮತ್ತು ಪ್ರತಿಯೊಂದು ಸೌಂದರ್ಯವನ್ನು ನಾವು ಅವನಲ್ಲಿ ಕಂಡಿರುವೆವು. ಜೀವವನ್ನು ಬಲಿಯರ್ಪಿಸುವುದರಿಂದ (ದೇವನೆಂಬ) ಈ ಸಂಪತ್ತು ಸಿಗಬಹುದಾದರೆ ಹಾಗೆ ಪಡೆಯಲು ಅದು (ಆ ಸಂಪತ್ತು) ಅರ್ಹವಾಗಿದೆ. ಒಬ್ಬನು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವುದರಿಂದ ಪಡೆಯಬಹುದಾಗಿದ್ದರೆ ಹಾಗೆ ಖರೀದಿಸಲು ಯೋಗ್ಯವಾದ ಮಾಣಿಕ್ಯ ಇದಾಗಿದೆ. ಎಲೈ ಭಾಗ್ಯಹೀನರೇ, ನೀವು ಈ ಕಾರಂಜಿಯ ಕಡೆಗೆ ಓಡಿ ಬನ್ನಿರಿ. ಇದು ನಿಮ್ಮ ಬಾಯಾರಿಕೆಯನ್ನು ನೀಗಿಸುವುದು. ಇದು ನಿಮ್ಮನ್ನು ರಕ್ಷಿಸುವಂತಹ ಜೀವಜಲವನ್ನೀಯುವ ಕಾರಂಜಿಯಾಗಿದೆ. ನಾನೇನು ಮಾಡಲಿ? ಈ ಶುಭವಾರ್ತೆಯನ್ನು ಜನಹೃದಯಗಳಲ್ಲಿ ಹೇಗೆ ನೆಲೆವೂರುವಂತೆ ಮಾಡಲಿ? ಇವನೇ ನಿಮ್ಮ ದೇವನು ಎಂದು ಜನರು ಆಲಿಸುವಂತೆ ಮಾಡಲು ಯಾವ ಡೋಲು ಬಾರಿಸಿ ಪೇಟೆಗಳಲ್ಲಿ ಡಂಗುರ ಸಾರಲಿ? ಜನರು ಕಿವಿಗೊಟ್ಟು ಕೇಳುವಂತೆ ಮಾಡಲು ನಾನು ಯಾವ ಮದ್ದಿನಿಂದ ಚಿಕಿತ್ಸೆ ನಡೆಸಲಿ? ನೀವು ದೇವನಿಗೆ ಸೇರಿದವರಾಗುವಿರಾದರೆ, ದೇವನು ನಿಮ್ಮವನೇ ಆಗುವನು ಎಂದು ದೃಢವಾಗಿ ಅರಿತುಕೊಳ್ಳಿರಿ."

***(ಕಿಶ್ತೀ ನೂಹ್; ರೂಹಾನೀ ಖ಼ಝ಼ಾಇನ್ ಸಂಪುಟ 19, ಪುಟ 21 – 22)***

## ಇನ್ಸಾನಿಯತ್ ಝಿಂದಾಬಾದ್
## ಮಾನವೀಯತೆ ಚಿರಕಾಲ ಬಾಳಲಿ

### ಉಖ್ದೆ ನಿಕಾಹ್
### ಮಂಗ್‌ನಿ (ವಿವಾಹ ನಿಶ್ಚಯ)

ಒಂದು ಹದೀಸಿನಲ್ಲಿ ಹೀಗೆ ವರದಿ ಆಗಿದೆ: ಹಝ್ರತ್ ಮುಗೈರ(ರ) ಹೇಳುತ್ತಾರೆ: ಅವರು ಒಂದು ಕಡೆ ವಿವಾಹ ನಿಶ್ಚಯಕ್ಕಾಗಿ ಸಂದೇಶ ಕಳುಹಿಸುತ್ತಾರೆ. ಆಗ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೇಳಿದರು: ಆ ಕನ್ಯೆಯನ್ನು ನೋಡಿರಿ ಏಕೆಂದರೆ ಆಕೆಯನ್ನು ನೋಡಿದರೆ ನಿಮ್ಮ ಮತ್ತು ಅವರ ನಡುವೆ ಹೊಂದಾಣಿಕೆ ಹಾಗೂ ಸ್ನೇಹ ಸಂಭವ ಹೆಚ್ಚಾಗಿರುತ್ತದೆ. **(ತಿರ್ಮಿಝಿ, ಕಿತಾಬುನ್ನಿಕಾಹ್)**

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಅ) ಹೇಳುತ್ತಾರೆ:

ಈ ಅನುಮತಿಯನ್ನು ಇಂದಿನ ಸಮಯದಲ್ಲಿ ಜನರು ತಪ್ಪು ಎಂದು ಭಾವಿಸಿಕೊಂಡಿದ್ದಾರೆ. ಅದರ ತಾತ್ಪರ್ಯ ವೇನೆಂದರೆ ಪರಸ್ಪರ ತಿಳುವಳಿಕೆ ಮಾಡುವ ಸಲುವಾಗಿ ಪ್ರತಿ ಸಮಯ ಪ್ರತ್ಯೇಕವಾಗಿ ಕುಳಿತುಕೊಳ್ಳಬಹುದು ಪ್ರರ್ಯಾಟನೆ ಮಾಡಬಹುದು ಎನಿಸಿಕೊಂಡಿದ್ದಾರೆ. ಮನೆಗಳಲ್ಲಿಯೂ ಗಂಟೆಗಟ್ಟಲೆ ಪ್ರತ್ಯೇಕವಾಗಿ ಕುಳಿತುಕೊಳ್ಳುವುದು ಸಹ ತಪ್ಪಾಗಿದೆ. ಅದರ ತಾತ್ಪಯವೂ ಕೇವಲ ಪರಸ್ಪರ ಮುಂದಿದ್ದು ಒಬ್ಬರಿನ್ನೊಬ್ಬರ ರೂಪ ನೋಡಿಕೊಂಡರೆ ಅರ್ಥ ಮಡಿಕೊಳ್ಳಲು ಸುಲಭವಾಗುತ್ತದೆ, ಮಾತನಾಡುವುದರಿಂದ ಒಂದಿಷ್ಟು ಸ್ವಭಾವ ತಿಳಿದುಬರುತ್ತದೆ. ಇಂದಿನ ಪರಿಸ್ಥಿತಿಗಳಲ್ಲಿ ಕುಟುಂಬದವರು ಜೊತೆಯಲ್ಲಿ ಕುಳಿತುಕೊಂಡು ಊಟ ಮಾಡಿದರೂ ತಪ್ಪೇನು ಇಲ್ಲ. ಊಟ ಮಾಡುವಾಗಲೂ ಒಬ್ಬರು ಮತ್ತೊಬ್ಬರ ಸ್ವಭಾವ ಅರಿತುಕೊಳ್ಳಬಹುದು. ಇಷ್ಟವಿಲ್ಲದ ಮಾತೇನಾದರೂ ಕಂಡರೆ ನಂತರದ ಜಗಳಗಳಿಂದ ತಪ್ಪಿಸಿಕೊಳ್ಳಬಹುದಾಗಿದೆ ಮತ್ತು ಎಲ್ಲ ವಿಷಯಗಳು ಸರಿಕಂಡರೆ ಹೊಂದಾಣಿಕೆ ಹಾಗೂ ಪ್ರೀತಿಯೂ ಈ ಸಂಬಂಧದಲ್ಲಿ ಇನ್ನು ಹೆಚ್ಚಾಗುತ್ತದೆ...... ಕೆಲವು ಜನರು ಕೆಲವೊಮ್ಮೆ ಅವರ ಸ್ವಭಾವ ಹೇಗಿರುತ್ತೆಂದರೆ ಯಾರದಾದರು ಸಂಬಂಧ ನಿಶ್ಚಯವಾದರೆ ಅವರು ಆ ಸಂಬಂಧದಲ್ಲಿ ಬಿರುಕು ಉಂಟು ಮಾಡಲು ಪ್ರಯತ್ನಿಸುತ್ತಾರೆ. ಅವರು ಹೀಗೆ ಪರಸ್ಪರ ನೋಡಿಕೊಂಡರೆ ಇಂತಹ ಅವಕಾಶ ದೊರೆಯಲಿಕ್ಕಿಲ್ಲ. ಜನರು ಒಬ್ಬರಿನ್ನೊಬ್ಬರನ್ನು ನೋಡಿದ ಪರಿಣಾಮದಿಂದಾಗಿ ತಿಳುವಳಿಕೆ ಉಂಟಾಗಿರುತ್ತದೆ ಆದರೆ ಕೆಲ ಜನರು ವಿವಾಹಕ್ಕಿಂತ ಮುಂಚೆ ಹುಡುಗ ಹುಡುಗಿಯರಿಗೆ ಅಥವಾ ನಿಶ್ಚಯದ ಸಮಯ ಪರಸ್ಪರ ಮುಂದೆ ಕುಳಿತುಕೊಳ್ಳಲು ಇಷ್ಟಪಡುವುದಿಲ್ಲ. ಅದಕ್ಕೆ ಗೌರವದ ಪ್ರಶ್ನೆಯನ್ನಾಗಿ ಮಾಡಿಕೊಳ್ಳುತ್ತಾರೆ. ಇಸ್ಲಾಮ್ ಧರ್ಮದ ಶಿಕ್ಷಣವು ಒಂದು ಸಮತೋಲನದ ಶಿಕ್ಷಣವಾಗಿದೆ. ಯಾವುದಕ್ಕೂ ಅತಿಯಾಗಿ ವರ್ತಿಸಲು ಇಷ್ಟ ಪಡುವುದಿಲ್ಲ. ಹೀಗೆ ಅದರೆಯೇ ಸಮಾದಲ್ಲಿ ಶಾಂತಿ ಉಂಟಾಗಬಹುದು ಮತ್ತು ನಮಾಜದಿಂದ ಗೊಂದಲಗಳನ್ನು ದೂರಮಾಡಬಹುದು. (ಖುತ್‌ಬಾತೆ ಮಸ್‌ರೂರ್, ಸಂಪುಟ–2, ಪುಟ–934–935, ಮುದ್ರಣ ಖಾದಿಯಾನ್)

**(ನಾಝಿರ್ ಇಸ್ಲಾಹ್ ವ ಇರ್‌ಶಾದ್ ಮರ್‌ಕಝೀಯ ಖಾದಿಯಾನ್)**

### ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್ ತೋಟಗಾರಿಕೆ ವಿಭಾಗದಲ್ಲಿ (ಶೋಬ ತಝೂಯೀನ್) ಸೇವೆಸಲ್ಲಿಸ ಬಯಸುವವರು ಗಮನಿಸಿರಿ

ತೋಟಗಾರಿಕೆ ವಿಭಾಗ (ಶೋಬ ತಝುಯೀನ್) ಖಾದಿಯಾನಿನಲ್ಲಿ ಹೊಸ ಮಂಜೂರಾದ Based Grass Cutter machine ಚಾಲಕನ ಹುದ್ದೆಗಾಗಿ ಅಭ್ಯರ್ಥಿ ಬೇಕಾಗಿರುತ್ತದೆ. ಈ ಚಾಲಕ ಹುದ್ದೆ ಬಯಸುವವರು ತಮ್ಮ ಅರ್ಜಿಯನ್ನು ಎರಡು ತಿಂಗಳು ಒಳಗಾಗಿ 'ನಝೂರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್'ನ ಹೆಸರಿನಲ್ಲಿ ಕಳುಹಿಸಬಹುದಾಗಿದೆ.

**ಶರತ್ತುಗಳು ಕೆಳಗಿನಂತಿವೆ:**

1. ಅಭ್ಯರ್ಥಿಯ ಬಳಿ Driving Licence ಮತ್ತು Drivingನ ಅನುಭವ ಅನಿವಾರ್ಯವಾಗಿರುತ್ತದೆ.
2. ಅಭ್ಯರ್ಥಿ ಅಲ್ಪ ಸ್ವಲ್ಪವಾದರೂ Technical ಕೆಲಸ ತಿಳಿದಿರಬೇಕು. ಏಕೆಂದರೆ ಅಗತ್ಯಗನುಗುಣವಾಗಿ ಆ ಕಟ್ಟರ್ ಮಿಶಿನನ್ನು ಸರಿಪಡಿಸಿಕೊಳ್ಳಬಹುದಾಗಿದೆ.
3. ಅಭ್ಯರ್ಥಿ Tractor Trolly ಓಡಿಸಲು ತಿಳಿದಿರಬೇಕು.
4. ಅಭ್ಯರ್ಥಿ ವಿಧೇಯ, ಪ್ರಾಮಾಣಿಕನಾಗಿರಬೇಕು, ಸಮಯ ಬೀರಿದಾಗ ಹೆಚ್ಚಾಗಿ ಕೆಲಸಕ್ಕೂ ಸಿದ್ಧನಾಗಿರಬೇಕು.
5. ಅಭ್ಯರ್ಥಿಗೆ ಯಾವ ಶಿಕ್ಷಣ ಅರ್ಹತೆ ಬೇಕಾಗಿರುವುದಿಲ್ಲ.
6. ಅಭ್ಯರ್ಥಿಗೆ ಜನನ ಪ್ರಮಾಣ ಪತ್ರಿಕೆಯನ್ನು ಪ್ರಸ್ತುತಪಡಿಸುವುದು ಅನಿವಾರ್ಯವಾಗಿರುತ್ತದೆ.
7. ಸಂದರ್ಶನದಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಮಾತ್ರ ಚಾಲಕ ಸೇವೆಗೆ ಆಯ್ಕೆ ಮಾಡಿಕೊಳ್ಳಲಾಗುವುದು.
8. ನೂರ್ ಆಸ್ಪತ್ರೆ ಖಾದಿಯಾನಿನಿಂದ Medical Fitness Certificate ಪಡೆದುಕೊಂಡವರನ್ನು ಮಾತ್ರ ಚಾಲಕ ಸೇವೆಗೆ ಅರ್ಹರೆಂದು ಪರಿಗಣಿಸಲಾಗುವುದು.
9. ಚಾಲಕ ಅಭ್ಯರ್ಥಿಗೆ 2ನೇ ದರ್ಜೆ ಸಮಾನ ಭತ್ಯೆ ಹಾಗೂ ಇತರ ಸವಲತ್ತುಗಳನ್ನು ನೀಡಲಾಗುವುದು.
10. ಖಾದಿಯಾನ್‌ಗೆ ಆಮದ್ ರಫತ್‌ನ ವ್ಯಚ್ಛ ಅಭ್ಯರ್ಥಿ ಸ್ವತಃ ನೋಡಿಕೊಳ್ಳ ಬೇಕಾಗುತ್ತದೆ.
11. ಅಭ್ಯರ್ಥಿಯು ಆಯ್ಕೆಗೊಂಡಿದ್ದಲ್ಲಿ ಖಾದಿಯಾನಿನಲ್ಲಿ ವಸತಿ ವ್ಯವಸ್ಥೆಯು ಖುದ್ದಾಗಿ ಮಾಡಿಕೊಳ್ಳುವುದಾಗಿದೆ.

**ಟಿಪ್ಪಣಿ: ನಮೂದಿತ ಅರ್ಜಿಯೂ ನಝೂರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್‌ನಿಂದ ಪಡೆಯಬಹುದು.**

**(ನಾಝಿರ್ ದೀವಾನ್ ಖಾದಿಯಾನ್)**

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ನಝೂರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್.**

**Phone: 01872-501130, (Mob): 9877138347, 9646351280**
**Email: diwan@qadian.in**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಪರಿಸ್ಥಿತಿ ಪವಿತ್ರ ಖುರ್‌ಆನನ ಮಹತ್ವತೆಯನ್ನು ನಿರಾಕರಿಸುವುದ್ದಾಗಿದೆ. ಅವರು ಪವಿತ್ರ ಖುರ್‌ಆನನ ವಿರುದ್ಧ ಆರೋಪವಂತೂ ಮಾಡುತಿದ್ದರು. ಆದರೆ ಅದರ ಮುಂದೆ ಅದಕ್ಕಿಂತ ಮಿಗಲಾದ ಶಿಕ್ಷಣ ಅಥವಾ ಮಿಗಿಲಾದದು ಒಂದೆಡೆ ಇರಲಿ ಅದಕ್ಕೆ ಸಮಾನ ವಾದಂತಹದ್ದಾದರೂ ಪ್ರಸ್ತುತ ಪಡಿಸಲು ಆಗುತ್ತಿರಲಿಲ್ಲ. ಇಂದಿನವರೆಗೂ ಪವಿತ್ರ ಖುರ್‌ಆನನ ವಿರೋಧಿಗಳ ನಿಲುವು ಅದೇ ಆಗಿದೆ. ಕ್ರೈಸ್ತ ಬರಹಗಾರರು ಪವಿತ್ರ ಖುರ್‌ಆನನ ಮೇಲೆ ಆರೋಪಗಳನ್ನು ಮಾಡುತ್ತಿರುತ್ತಾರೆ ಆದರೆ ಇಂದಿನವರೆಗೂ ಅವರ ವಾದಗಳನ್ನು ಪೂರೈಸುವ ಧೈರ್ಯ ಮಾಡಲಿಲ್ಲ. ಅದರ ಒಂದು ಉದಾಹರಣೆಯಾದರು ತರಬಹುದಾಗಿತ್ತು. ಅವರು ಹೇಳುತ್ತಾರೆ: ಪವಿತ್ರ ಖುರ್‌ಆನ್ ಇಂಜೀಲಿನ ಆ ಒಂದು ಸಮಸ್ಯೆಯನ್ನು ಕದ್ದಿದೆ, ತೌರಾತಿನಂದ ಆ ವಿಷಯವನ್ನು ಕದ್ದಿದೆ, ಝುರ್‌ತುಶ್ತಿ ಗ್ರಂಥದಿಂದ ಆ ಬೋಧನೆಯನ್ನು ಪಡೆದಿದೆ ಎಂದು. ಆದರೆ ಅವರು ಸ್ವತಃ ತೌರಾತ್, ಇಂಜೀಲ್ ಹಾಗೂ ಝುತಶ್ತಿ ಗ್ರಂಥಗಳಿಂದ ವಿಷಯಗಳನ್ನು ಸಂಗ್ರಹಿಸಿ ಪವಿತ್ರ ಖುರ್‌ಆನನಂತಹ ಒಂದು ಪರಿಪೂರ್ಣ ಗ್ರಂಥ ರಚಿಸುವ ಧೈರ್ಯ ತೋರಲಿಲ್ಲ, ಜೇನಿನ ಮೇಲೆ ಮನುಷ್ಯನು ಸುಲಭವಾಗಿ ಆಕ್ಷೇಪ ಎತ್ತಬಹುದು ಅಂದರೆ ಜೇನು ಹುಳಗಳು ಹೂವುಗಳಿಂದ ಪರಿಮಳ ಕದ್ದಿದೆ, ಹಣ್ಣುಗಳಿಂದ ಸಿಯನ್ನು ಕದ್ದಿದೆ. ಆದರೆ ಅವರು ಸ್ವತಃ ಅಂತಹ ಜೇನನ್ನು ತಯಾರಿಸುತ್ತಿದ್ದರೆ ಒಪ್ಪಬಹುದಾದ ವಿಷಯವಾಗಿತ್ತು. ಒಳ್ಳೆಯ ವಸ್ತುಗಳನ್ನು ವಿವಿಧ ಕಡೆಯಿಂದ ಸಂಗ್ರಹಿಸಿಕೊಂಡು ಯಾವುದಾದರೂ ಒಂದು ಹೊಸ ವಸ್ತು ತಯಾರಿಸುವುದು ಒಂದು ಉತ್ತಮ ಕಲೆಯಾಗಿದೆ. ಇದು ಸುಲಭವಾದ ಕೆಲಸವಾಗಿದ್ದರೆ ಆಕ್ಷೇಪ ಎತ್ತುವವರು ಇಂತಹ ಕಾರ್ಯ ಮಾಡಿ ಏಕೆ ತೋರಿಸುವುದಿಲ್ಲ. ಆದರೆ ಅವರ ಈ ಉತ್ತರ ನಕಾರಾತ್ಮಕವಾಗಿದೆ. ಅದರ ಬದಲು ಪವಿತ್ರ ಖುರ್‌ಆನ್ ವಾದಿಸುವುದೇನೆಂದರೆ ಅದು ಎಲ್ಲ ಗ್ರಂಥಗಳ ಸತ್ಯಸಾಕ್ಷ್ಯಗಳನ್ನು ಒಳಗೊಂಡಿದೆ. **"ಫೀಹಾ ಕುತುಬುನ್ ಖಯ್ಯಿಮ"** (ಅಲ್ ಬಯ್ಯನ:4) ಅದರಲ್ಲಿ ಶಾಶ್ವತವಾದ ಆಜ್ಞೆಗಳಿವೆ. ಅದಲ್ಲದೆ ಪವಿತ್ರ ಖುರ್‌ಆನ್ ಹೇಳುತ್ತದೆ: **ವ ಯುಅಲ್ಲಿಮುಕುಮ್ ಮಾಲಮ್ ತಕೂನೂ ತಅ್‌ಲಮೂನ್** (ಅಲ್ ಬಖ್‌ರಅ: 188) ನಮಗೆ ತಿಳಿಯದುದನ್ನು ನಮಗೆ ಕಲಿಸಿಕೊಡುವ ಒಬ್ಬ ಪ್ರವಾದಿಯನ್ನು ನಿಯೋಜಿಸಿದ್ದೇವೆ. ಅಂದರೆ ಈ ಶಿಕ್ಷದಲ್ಲಿ ಕೇವಲ ಗತ ಗ್ರಂಥಗಳಲ್ಲಿ ಇದ್ದ ಒಳ್ಳೆಯ ಉಪದೇಶಗಳು ಮಾತ್ರ ಒಳಗೊಂಡಿಲ್ಲ ಅದಕ್ಕಿಂತ ಉತ್ತಮವಾದುದು ಸಹ ಒಳಗೊಂಡಿದೆ. ಅದೇ ರೀತಿ ಹೇಳುತ್ತದೆ: **ಫಇಝ್ಝಾ ಅಮಿನ್‌ತುಮ್ ಫಝ್ಝುಕುರುಲ್ಲಹ್ ಕಮಾ ಅಲ್ಲಮಕುಮ್ ಮಾಲಮ್ ತಕೂನೂ ತಅ್‌ಅಮೂನ್"** (ಅಲ್ ಬಖ್‌ರ: 318) ಅನಂತರ ನೀವು ನಿರ್ಭಯರಾದರೆ (ಮುಂಚೆ) ನಮಗೆ ತಿಳಿಯದಿದ್ದುದನ್ನು ಅಲ್ಲಾಹನು ನಮಗೆ ಕಲಿಸಿದ ಪ್ರಕಾರ ನೀವು ಅವನನ್ನು ಸ್ಮರಿಸಿರಿ. ಅಂದರೆ ಅದರಲ್ಲಿ ಈ ದಾವೆ ಮಾಡಲಾಗಿದೆ. ಪವಿತ್ರ ಖುರ್‌ಆನನಲ್ಲಿ ಮುಂಚೆ ತಿಳಿಯದಿದ್ದಂತಹ ಧೈವಿಕ ಗುಣಗಳ ಜ್ಞಾನವನ್ನು ಈ ಗ್ರಂಥದಲ್ಲಿ ನೀಡಲಾಗಿದೆ. **(ತಫ್ಸೀರ್ ಕಬೀರ್ ಸಂ:1, ಪುಟ:228, ಖಾದಿಯಾನ್ ಮುದ್ರಣ 2010)**

---

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಎಷ್ಟೆಲ್ಲ ಜೀವಿಗಳಿವೆಯೋ ಅವು ಮೊದಲು ವಾಸ್ತವದಲ್ಲಿ ಮನುಷ್ಯರಾಗಿದ್ದರು. ಹಿಂದಿನ ಕಾಲದ ಪಾಪಗಳ ಪರಿಣಾಮವಾಗಿ ಅವರ ಪಾಪಗಳ ಅನುಗುಣವಾಗಿ ಬೇರೆ ಬೇರೆ ಪ್ರಾಣಿಗಳ ರೂಪದಲ್ಲಿ ಈ ಲೋಕದಲ್ಲಿ ಜನ್ಮ ಪಡೆಯುತ್ತಾರೆ. ಈ ಪೈಕಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರ ಒಂದು ಅಧ್ಯಾಪನೆ ಹೀಗಿದೆ. ಅವರು ಆರ್ಯ ಸಮಾಜ ಸದಸ್ಯರಾದ ಹೋಶಿಯಾರ್‌ಪುರದ ಲಾಲಾ ಮುರುಳಿಧರವರನ್ನು ಸಂಬೋಧಿಸಿ ಹೇಳುತ್ತಾರೆ.

"ಈ ನಿಮ್ಮ ಪುನರ್ಜನ್ಮ (ತನಾಸುಖ್) ಸಮಸ್ಯೆಯು ಹುಟ್ಟಲು ಕಾರಣವೇನೆಂದರೆ ಈ ಪ್ರಸ್ತುತ ಪರಮೇಶ್ವರನ ಇಚ್ಛೆ ಮತ್ತು ದೇವ ಸಾಮರ್ಥ್ಯದಿಂದ ನಿಂತಿಲ್ಲ ಮತ್ತು ಅವನ ಜಾಣ್ಮೆ ಹಾಗೂ ಜ್ಞಾನವು ಬೇಕಾಗಿಲ್ಲ ಬದಲು ಪಾಪಿಗಳ ಪಾಪಗಳು ಈ ಸ್ಥಿತಿಗೆ ತಂದೊಡ್ಡಿದೆ. ಇವೆಲ್ಲ ಭಂಡಾರ ಆಕಾಶ ಭೂಮಿಯಲ್ಲಿ ನಾವು ಕಾಣುತಿದ್ದೇವೋ ಇವೆಲ್ಲ ನಿಮ್ಮ ತತ್ವ ಅನುಸಾರ ಆಕಸ್ಮಿಕವಾಗಿರುವುದು ಹೊರತು ಅದರಲ್ಲಿ ಪರಮೇಶ್ವರನ ಯಾವ ವಿಧಿ ನಿಯಮದ ಹಂಗಿಲ್ಲ. ಮನುಷ್ಯನ ಈ ಆತ್ಮಗಳು ಪಾಪಗಳನ್ನು ಮಾಡದಿರುತ್ತಿದ್ದರೆ ನಾವು ಕಾಣುತ್ತಿರುವ ಸಾವಿರಾರು ರೀತಿಯ ಈ ಸೃಷ್ಟಿಗಳಲ್ಲಿ ಒಂದು ಕಾಣುತ್ತಿರಲಿಲ್ಲ. ಅಂದರೆ ನಮಗೆ ಲಭಿಸಿದ ಈ ಲೋಕದ ಸುಖಗಳನ್ನೆಲ್ಲವೂ ನಿಮ್ಮ ಅನುಸಾರ ಪಾಪಗಳದ್ದೆ ಫಲವಾಗಿ ಎಲ್ಲ ಲೌಕಿಕ ಅನುಗ್ರಹಗಳು ದೊರೆಯಲು ಆ ಪಾಪಗಳೇ ಕಾರಣವಾಗಿವೆ. ಒಬ್ಬನು ಪಾಪ ಮಾಡಿ ಹಸುವಾಗಿ ಜನ್ಮಪಡೆದು ಆಗ ನಿಮಗೆ ಹಾಲು ಕುಡಿಯಲು ಸಾಧ್ಯವಾಯಿತು. ಮತ್ತೆ ಯಾವುದೋ ಪಾಪದಿಂದ ಹೆಣ್ಣು ಕುದುರೆಯ ಜನ್ಮವಾಯಿತು ನಿಮಗೆ ಸವಾರಿ ದೊರೆಯಿತು. ಇನ್ನೊಬ್ಬರ ಪಾಪದಿಂದ ಹೆಣ್ಣು ಕತ್ತೆ ಅಥವಾ ಖಚ್ಚರ್ ಅಥವಾ ಒಂಟೆಯ ಆತ್ಮ ಸೇರಿದರೆ ನಿಮಗೆ ಸಾರಿಗೆಯ ಕೆಲ ದೊರೆಯಿತು, ಇನ್ನು ಯಾರಾದರೂ ದೊಡ್ಡ ಕೆಲಸ ಮಾಡಿದರೆ ಅದರ ಶಿಕ್ಷೆಯ ರೂಪದಲ್ಲಿ ಅವನಿಗೆ ಹೆಣ್ಣಿನ ರೂಪ ಧರಿಸಲು ಸಾಧ್ಯವಾದರೆ ನಿಮಗೆ ಹೆಂಡತಿ ದೊರೆಯುವುದು. ಮತ್ತೆ ಇನ್ಯಾರೋ ಒಬ್ಬ ವ್ಯಕ್ತಿ ಯಾವುದೇ ಪಾಪಕೃತ್ಯ ಪರಿಣಾಮವಾಗಿ ಸತ್ತರೆ ಆಗ ಅವನ ಆತ್ಮ ಅವನ ಮಗ ಅಥವಾ ಮಗಳಿಗೆ ಬಂದು ನಿಮ್ಮ ಸಂತಾನವಾಗುವುದು. ಇದರಿಂದ ಏನು ಸಾಬೀತಾಯಿತೆಂದರೆ ನಿಮ್ಮ ತತ್ವದನುಸಾರವಾಗಿ ನಿಮ್ಮ ಪರಮೇಶ್ವರನ ಎಲ್ಲಾ ಕಾರ್ಯಗಳು ಪಾಪಿಗಳ ಮೇಲೆ ಅವಲಂಬಿತವಾಗಿ ನಡೆಯುತ್ತಿದೆ.

**(ಸುರ್‌ಮಾ ಚಶ್ಮ ಆರ್ಯ, ರೂಹಾನಿ ಖಝಾಯೀನ್, ಸಂಪುಟ–2, ಪುಟ–133)**

ಇದು ಹಳೇ ಜನರ ವಿಶ್ವಾಸವಾಗಿತ್ತು ಈಗ ಆಧುನಿಕ ಯುಗವಾಗಿದೆ. ಹೊಸ ಪ್ರಕಾರದ ಜನರಿದ್ದಾರೆ ಈ ವಿಶ್ವಾಸ ಹೊಂದಿರುವುದಿಲ್ಲ ಎಂದು ಭಾವಿಸಿಕೊಂಡರೆ ಅದು ಶುದ್ಧ ತಪ್ಪು. 11 ಪೆಬ್ರವರಿ 2020 ರಂದು ಗುಜರಾತ್ ರಾಜ್ಯದ ಭುಜ್ ನಗರದಲ್ಲಿ "ಶ್ರೀ ಸಹಜಾ ನಂದ ಹೆಣ್ಣು ಮಕ್ಕಳ ಸಂಸ್ಥೆಯ ವಸತಿ ಗೃಹದಲ್ಲಿದ್ದು ಶಿಕ್ಷಣ ಪಡೆಯುತ್ತಿರುವ 60ಕ್ಕಿಂತ ಹೆಚ್ಚು ವಿದ್ಯಾರ್ಥಿನಿಯರನ್ನು ಸಂಸ್ಥೆಯ ಸಿಬ್ಬಂಧಿ ವರ್ಗವು ಅತ್ಯಂತ ಅನುಚಿತ ಮತ್ತು ಆಕ್ಷೇಪರ್ಹ ರೀತಿಯಲ್ಲಿ ತಪಾಸಣೆ ನಡೆಸಿದೆ ಅದರ ವಿವರಣೆ ನೀಡಲು ನಾವು ಬಯಸುವುದಿಲ್ಲ. ಅವರು ಮುಟ್ಟಿನ ದಿನಗಳೇನಾದರೂ ಇದೆಯೇ? ಎಂದು ನೋಡಬಯಸುತ್ತಿದ್ದರು. ಹೀಗೆ ಮಾಡುವ ಕಾರಣವೇನೆಂದರೆ ಸಂಸ್ಥೆಯ ಪದ್ದತಿ ಅನುಸಾರ ಮುಟ್ಟಾದವರು ಮುಟ್ಟುರಹಿತರೊಂದಿಗೆ ಊಟ ಮಾಡುವ ಅನುಮತಿ ಇರಲಿಲ್ಲ. ಆದುದರಿಂದ ಈ ನಿಯಮ ಯಾರಾದರೂ ಉಲ್ಲಂಘಿಸಿದ್ದಾರೆಯೇ? ಎಂದು ತಪಾಸಣೆ ಮಾಡುತಿದ್ದರು. ಈ ಘಟನೆಯು ಪತ್ರಿಕೆಗಳಲ್ಲಿ ಚರ್ಚೆಯ ವಿಷಯವಾದಾಗ ಆ ಸಂಸ್ಥೆಯ ಪ್ರಾಂಶಪಲರನ್ನು ವಸತಿ ಗೃಹದ ಇನ್‌ಚಾರ್ಜ್‌ರನ್ನು ಮತ್ತು ಪೇದೆಯೊಬ್ಬನನ್ನು ಪೆಬ್ರವರಿ 17ರಂದು ಸೆರೆಹಿಡಿಯಲಾಯಿತು. ಈ ಹಿನ್ನಲೆಯಲ್ಲಿ ಪೆಬ್ರವರಿ 18ರಂದು ಈ ಸಂಸ್ಥೆಯ ಚಾಲಕರಾದ ಧರ್ಮಗುರು ಅಂದರೆ ಧಾರ್ಮಿಕ ಮಾರ್ಗದರ್ಶಕರು "ಸ್ವಾಮಿ ಕೃಷ್ಣಸ್ವರೂಪದಾಸ ಜೀ" ತಮ್ಮ ಹಿತವಚನಗಳಲ್ಲಿ ಹೇಳಿದರು: "ಇದು ನಿಶ್ಚಿತವಾದ ವಿಷಯವಾಗಿದೆ ಮುಟ್ಟಿನ ಸಮಯ ಪತಿಗೆ ಅಡುಗೆ ಮಾಡುವ ಮಹಿಳೆಯರು ಮುಂದಿನ ಜನ್ಮದಲ್ಲಿ ಹೆಣ್ಣು ನಾಯಿಯಾಗಿ ಜನ್ಮ ತಾಳುವರು ಪುರುಷರು ಎತ್ತಿನ ರೂಪದಲ್ಲಿ ಜನ್ಮ ಪಡೆಯುವರು. ಯಾರಿಗಾದರೂ ನನ್ನ ಈ ವಿಚಾರಗಳು ಮೆಚ್ಚುಗೆಯಾಗಲಿಲ್ಲವಾದರೆ ನನಗೆ ಅವರ ಅಗತ್ಯವಿಲ್ಲ. ಆದರೆ ಇದೆಲ್ಲ ನಮ್ಮ ಶಾಸ್ತ್ರಗಳಲ್ಲಿ ಬರೆಯಲ್ಪಟ್ಟಿದೆ.

**(ನೋಡಿರಿ ಪತ್ರಿಕೆ ಹಿಂದ್ ಸಮಾಚಾರ ಜಾಲಂಧರ್ 20 ಪೆಬ್ರವರಿ 2020 ಪುಟ;4 ಮತ್ತು 8)**

ಅವರ ಇನ್ನೊಂದು ವಿಶ್ವಾಸವು ಹೀಗಿದೆ: ಆತ್ಮಗಳು ಮತ್ತು ದೇಹಗಳು ಹಾಗೂ ಬ್ರಹ್ಮಾಂಡದ ಅಣು ಅಣು ಸಹ ಸ್ವಯಂ ಅಸ್ತಿತ್ವ ಪಡೆದುದಾಗಿದೆ ಮತ್ತು ಪುರಾತನವಾಗಿದೆ. ದೇವನು ಅದರ ಸೃಷ್ಟಿಕರ್ತನಾಗಲಿ ಮಾಲಿಕನಾಗಲಿ ಅಲ್ಲ. ಅವರ ಇನ್ನೊಂದು ವಿಶ್ವಾಸವು ಹೀಗಿದೆ:– ಪರಿಮಿತವಾದ ಕರ್ಮಗಳ ಫಲವು ಅಪರಿಮಿತವಾಗಿ ದೊರೆಯಲು ಸಾಧ್ಯವಿಲ್ಲ ಆದುದರಿಂದ ದೇವನು ಯಾರಿಗೂ ಶಾಶ್ವತವಾದ ಮುಕ್ತಿ ಕೊಡಲು ಸಾಧ್ಯವಿಲ್ಲ. ಆದುದರಿಂದ ದೇವನು ಪ್ರತಿಯೊಬ್ಬ ದಾಸನ ಯಾವುದಾದರೊಂದು ಪಾಪವನ್ನು ತಮ್ಮ ಬಳಿ ಇರಿಸಿಕೊಳ್ಳುತ್ತಾನೆ ಮತ್ತೆ ಆ ಪಾಪದ ಪರಿಣಾಮವಾಗಿ ಅವನನ್ನು ಸ್ವರ್ಗದಿಂದ ಹೊರ ಹಾಕಿ ಲೋಕಕ್ಕೆ ಕಳುಹಿಸುತ್ತಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

"ಈ ಪುಸ್ತಕ ವೇದಗಳ ಎಲ್ಲಾ ಅವಲಂಬನೆಯು ಪುನರ್ಜನ್ಮ ಅಂದರೆ ಆತ್ಮಗಳು ಮೇಲಿದೆ. ಇದೆ ಪುನರ್ಜನ್ಮದ ರೀತಿ ನಂಬಬೇಕಾಗುತ್ತದೆ. ಲೋಕದ ಎಲ್ಲಾ ಪಕ್ಷಿ ಪ್ರಾಣಿಗಳು, ಕ್ರೂರ ಪ್ರಾಣಿಗಳು ಮತ್ತು ಹುಳ ಕ್ರಿಮಿಗಳು ಮನುಷ್ಯರೇ ಆಗಿವೆ, ಪುನರ್ಜನ್ಮ ರೀತ್ಯ ಇದು ಸಹ ನಂಬಬೇಕಾಗುತ್ತದೆ. ಶಾಶ್ವತವಾದ ಮುಕ್ತಿ ಅಸಂಭವವಾಗಿದೆ, ಇದೇ ಪುನರ್ಜನ್ಮದ ರೀತಿ ಎಂದು ಸಹ ನಂಬಬೇಕಾಗುತ್ತದೆ. ಯಾರ ಪಶ್ಚತ್ತಾಪವು ಸ್ವೀಕಾರವಾಗುವುದಿಲ್ಲ ಮತ್ತು ಪಾಪಗಳು ಕ್ಷಮಿಸಲ್ಪಡುವುದಿಲ್ಲ, ಇದೇ ಪುನರ್ಜನ್ಮ ರೀತಿ ಇದು ಸಹ ನಂಬಬೇಕಾಗುತ್ತದೆ. ಆತ್ಮಗಳನ್ನು ದೇವನು ಸೃಷ್ಟಿಸಲಿಲ್ಲ ಬದಲಾಗಿ ಅವೆಲ್ಲ ದೇವನ ರೀತಿಯಲ್ಲಿಯೇ ಪುರಾತನ ಹಾಗೂ ಅನಾದಿಯಾಗಿವೆ." **(ಚಶ್ಮಯೇ ಮಅರಿಫತ್, ರೂಹಾನಿ ಖಝಾಯೀನ್, ಸಂಪುಟ–23, ಪುಟ–123)**

ಒಟ್ಟಿನಲ್ಲಿ ಪುನರ್ಜನ್ಮ ವಿಶ್ವಾಸವು ಅಲ್ಲಾಹನ ಏಕತ್ವ, ಅವನು ಸೃಷ್ಟಿಕರ್ತ, ಮಾಲಿಕ, ಅಪರಿಮಿತ ಅಧಿಕಾರ ಹಾಗೂ ಶಕ್ತಿ ಹೊಂದಿರುವನು, ಸಾರ್ವಭೌಮ ಮತ್ತು ಅವನ ಪವಿತ್ರ ಗುಣಗಳಿಗೆ ಅಪ್ಪಟ ವಿರುದ್ಧವಾಗಿದೆ. ಆದುದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸಂಪೂರ್ಣ ಉತ್ಸಾಹ ಹಾಗೂ ಶಕ್ತಿಯುತವಾಗಿ ಈ ಮಿಥ್ಯ ವಿಶ್ವಾಸದ ಸತ್ಯ ಬಯಲು ಮಾಡಿದ್ದಾರೆ. ಅದಕ್ಕಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರ ಗ್ರಂಥ ಶಹನಾಯೇ ಹಖ್, ಸುರ್‌ಮಾ ಚಶ್‌ಮಅ ಆರ್ಯ, ಷಶ್‌ಮಯೇ ಮಅರಿಫತ್, ಸಾಕ್ಷ್ಯ ಸುಜ್ಞಾನದಿಂದ ತುಂಬಿದ ಅಮೂಲ್ಯ ಗ್ರಂಥಗಳಾಗಿವೆ. ಮುಂದೆ ಇನ್‌ಶಾ ಅಲ್ಲಾಹ್ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರ ಇನ್ನೊಂದು ಬಹುಮಾನದ ಪಂಥಾಹ್ವಾನದೊಂದಿಗೆ ಹಾಜರಾಗುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Vol No.1 Thursday, 20 August 2020 Issue No. 32

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 30ರ ವರದಿಯ ಉಳಿದ ಭಾಗ)**

ಒಂದು ಪ್ರಶ್ನೆ ಹೀಗೆ ಕೇಳಲಾಯಿತು. ಅಹ್ಮದಿ ಎಂದರೆ ಯಾರು? ಅದರ ಉತ್ತರವಾಗಿ ಹುಝೂರ್(ಅಬಿಅ) ಹೇಳಿದರು. ಹಝ್ರತ್ ರಸೂಲುಲ್ಲಾಹ್(ಸ) ಭವಿಷ್ಯವಾಣಿ ನುಡಿದಿದ್ದರು. ಅಂತ್ಯ ಕಾಲದಲ್ಲಿ ಇಮಾಮ್ ಮಹದಿ ಮಸೀಹ್ ಮೌಊದ್(ಅ) ಬರುವರೆಂದು ಮತ್ತು ಅವರು ಅದರ ಕುರುಹುಗಳನ್ನು ಸಹ ವಿವರಿಸಿದ್ದರು. ಆ ಭವಿಷ್ಯವಾಣಿಯ ಪ್ರಕಾರ ಆ ಮಹದಿ ಮಸೀಹರ ಆಗಮನ ಆಗಿರುತ್ತದೆ. ಅವರು ಹೇಳಿದ ಎಲ್ಲ ಕುರುಹುಗಳು ಪೂರ್ತಿಯಾಗಿವೆ.

ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) 1889 ರಲ್ಲಿ ಅಹ್ಮದಿಯಾ ಸಮುದಾಯವನ್ನು ಪ್ರಾರಂಭಿಸಿದರು. ನಾವು ಅವರನ್ನು ಸ್ವೀಕರಿಸಿದೆವು. ನಾವು ಒಬ್ಬನೇ ಅಲ್ಲಾಹ್ ಮತ್ತು ಒಂದೇ ಪವಿತ್ರ ಖುರ್‌ಆನ್ ಗ್ರಂಥದ ಮೇಲೆ ವಿಶ್ವಾಸ ಹೊಂದಿದ್ದೇವೆ. ಹಝ್ರತ್ ರಸೂಲುಲ್ಲಾಹ್(ಸ) ಅವರನ್ನು ಖಾತಮನ್ನಬಿಯೀನ್ ಎಂದು ನಂಬುತ್ತೇವೆ. ಅವರ ನಂತರ ಹೊಸ ಶರಿಅತ್‌ನೊಂದಿಗೆ ಯಾವ ಪ್ರವಾದಿಯೂ ಬರಲಿಕ್ಕಿಲ್ಲ. ಆದರೆ ಅವರ ಪ್ರತಿಬಿಂಬಿತ (ಝಿಲ್ಲಿ) ಪ್ರವಾದಿ ಬರಬಹುದಾಗಿದೆ ಎಂದು ನಂಬುತ್ತೇವೆ.

ಬೇರೆ ಮುಸ್ಲಿಮರ ಬಗ್ಗೆ ಹೇಳುವುದಾದರೆ ಅವರು ಮಸೀಹರನ್ನು ಆಕಾಶದಿಂದ ಬರುವರೆಂದು ನಂಬುತ್ತಾರೆ. ಹೀಗಾಗಿ ಅವರು ಇನ್ನೂ ಆಕಾಶದಿಂದ ಮಸೀಹರ ಬರುವಿಕೆಯನ್ನು ನಿರೀಕ್ಷಿಸುತ್ತಿದ್ದಾರೆ. ಈಗಂತೂ 15ನೇ ಶತಮಾನ ಬಂದಾಗಿದೆ. ಒಟ್ಟಿನಲ್ಲಿ ಅಹ್ಮದಿಯರು ಮಸೀಹ್ ಮೌಊದ್‌ರನ್ನು ನಂಬುವವರಾಗಿದ್ದಾರೆ.

ಹುಝೂರ್(ಅಬಿಅ) ಹೇಳಿದರು. ಪ್ರತಿ ಮುಸಲ್ಮಾನನು ಅಹ್ಮದಿಯಾಗಿದ್ದಾನೆ. ಮುಹಮ್ಮದ್ ಮತ್ತು ಅಹ್ಮದ್ ಹಝ್ರತ್ ರಸೂಲುಲ್ಲಾಹ್(ಸ) ರವರ ಹೆಸರಾಗಿವೆ. ನಾವು ಅಹ್ಮದಿ ಹೆಸರನ್ನು ಇಟ್ಟುಕೊಂಡಿದ್ದೇವೆ. ಏಕೆಂದರೆ ನಮ್ಮ ಪರಿಗಣನೆ ರಸೂಲುಲ್ಲಾಹ್(ಸ) ರವರನ್ನು ಅನುಸರಿಸುವವರಾಗಲಿ ಎಂದು. ಹಂಬಲಿ, ಶಾಫಿ, ಹನಫಿ, ಮಾಲಿಕಿ ಇತ್ಯಾದಿಯಾಗಿ ನಾವು ಹೆಸರು ಇಟ್ಟುಕೊಂಡಿಲ್ಲ.

ಉಳಿದ ವಿಷಯವೆಂದರೆ ಖುರ್‌ಆನ್ ಹಝ್ರತ್ ಇಬ್ರಾಹಿಂ(ಅ) ರವರನ್ನು ಸಹ ಮುಸ್ಲಿಮ್ ಎಂದು ಹೆಸರಿಸಿದೆ. ಯಾರೇ ಆಗಲಿ ತನ್ನ ಧರ್ಮದ ವಾಸ್ತವ ಶಿಕ್ಷಣದಂತೆ ನಡೆದುಕೊಳ್ಳುವವನು ನಿಜವಾದ ಮುಸಲ್ಮಾನನಾಗಿದ್ದಾನೆ.

ಪ್ರೋಫೆಸರ್‌ರೊಬ್ಬರು ಪ್ರಶ್ನೆ ಮಾಡಿದರು ತಾವು ಜಗತ್ತಿನಾದ್ಯಂತ ಧಾರ್ಮಿಕ ನೆಲೆಯವರೊಡನೆ ಸಂಪರ್ಕ ಹೊಂದಿದ್ದೀರಿ. ನೀವು ಪೋಪ್ ಮತ್ತು ದಲಾಯಿಲಾಮರನ್ನು ಭೇಟಿಯಾಗಿರುವಿರಾ?.

ಆಗ ಹುಝೂರ್ ಉತ್ತರಿಸಿದರು. ನನಗೆ ಭೇಟಿಯಾಗುವ ಅವಕಾಶ ದೊರೆಯಲಿಲ್ಲ. 1924 ರಲ್ಲಿ ಅಹ್ಮದಿಯಾ ಜಮಾಅತ್ತಿನ ದ್ವಿತೀಯ ಖಲೀಫರು ಯೂರೋಪ್ ಪ್ರವಾಸದಲ್ಲಿದ್ದರು. ಅವರು ಇಟಲಿಗೂ ಸಹ ಆಗಮಿಸಿದ್ದರು. ಆಗ ಪೋಪರೊಡನೆ ಭೇಟಿಯಾಗುವ ಪ್ರಯತ್ನಪಟ್ಟರು. ಆದರೆ ಪೋಪರು ಈಗ ನಮ್ಮಲ್ಲಿ ನಿರ್ಮಾಣ ಕಾರ್ಯಗಳು ನಡೆದಿವೆ, ಭೇಟಿಯಾಗಲು ಆಗುವುದಿಲ್ಲ ಎಂಬ ನೆಪ ಒಡ್ಡಿದರು.

ಆಗ ಇಟಲಿಯ ಒಬ್ಬ ಪತ್ರಕರ್ತನು ಪತ್ರಿಕೆಯಲ್ಲಿ ಬರೆದನು: ಪೋಪರು ಅಹ್ಮದಿಯಾ ಮುಸ್ಲಿಮ್ ನೇತಾರರೊಡನೆ ಭೇಟಿಯಾಗಲು ಬಯಸಲಿಲ್ಲ. ಆದ ಕಾರಣ ಅವರ ಅರಮನೆ ಎಂದೂ ಪರಿಪೂರ್ಣವಾಗಲಿಕ್ಕಿಲ್ಲ.

ಹುಝೂರ್ ಹೇಳಿದರು. ಸರ್ವ ಧರ್ಮ ಸಮ್ಮೇಳನವೂ ಲಂಡನ್ನ ಫೀಲ್ಡ್ ಹಾಲಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಅದಕ್ಕೆ ವಿವಿಧ ಧರ್ಮಗಳ ಪ್ರತಿನಿಧಿಗಳು ಆಗಮಿಸಿದ್ದರು, ಕ್ರೈಸ್ತರು, ಕ್ಯಾಥಲಿಕ್ ಚರ್ಚ್, ಇಸ್ರೇಲ್‌ನಿಂದಲೂ ಆಗಮಿಸಿದ್ದರು. ದರೂಝ್ ಸಮುದಾಯದ ಪ್ರತಿನಿಧಿಯೂ ಬಂದಿದ್ದರು. ಅದೇ ರೀತಿ ಹಿಂದೂ ಮತ್ತು ಇತರ ಧರ್ಮಿಯರೂ ಇದ್ದರು. ದಲಾಯಿಲಾಮಾ ಅವರ ಸಂದೇಶವನ್ನು ಓದಿ ಹೇಳಲಾಗಿತ್ತು.

ಹುಝೂರ್ ಹೇಳಿದರು. ನಾನು ದಲಾಯಿಲಾಮಾರೊಡನೆ ಭೇಟಿಯಾಗಲು ಸಿದ್ಧನಿದ್ದೇನೆ. ನಾನು ಕೇಳಿದ್ದೇನೆ. ಬಹುಶ: ಇದು ಅವರ ಹೇಳಿಕೆಯೇ ಆಗಿದೆ. ನಾನು ಅಂತಿಮ ದಲಾಯಿಲಾಮಾ ಆಗಿದ್ದೇನೆ ಎಂದು.

ಪ್ರೋಫೆಸರ್ ಮಹಾಶಯರ ಹುಝೂರರೊಂದಿಗಿನ ಈ ಭೇಟಿ 7 ಗಂಟೆ 5 ನಿಮಿಷದವರೆಗೆ ಜಾರಿಯಲ್ಲಿತ್ತು. ಕೊನೆಯಲ್ಲಿ ಇವೆಲ್ಲ ಅತಿಥಿಗಳು ಸರತಿಯಂತೆ ಹುಝೂರರ ಜೊತೆಯಲ್ಲಿ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು. ಹುಝೂರ್ ಎಲ್ಲ ಅತಿಥಿಗಳಿಗೆ ಉಡುಗೊರೆಗಳನ್ನು ನೀಡಿದರು.

**ಕುಟುಂಬ ಭೇಟಿಗಳು**

ಅನಂತರ ಕಾರ್ಯಕ್ರಮದನ್ವಯ ಕುಟುಂಬಗಳ ಭೇಟಿ ಪ್ರಾರಂಭವಾಯಿತು. 17 ಕುಟುಂಬಗಳ 59 ಜನರು ಮತ್ತು 42 ಜನರು ವೈಯಕ್ತಿಕ ಭೇಟಿಯ ಭಾಗ್ಯ ಪಡೆದರು. ಈ ಕುಟುಂಗಳು ಜರ್ಮನಿಯ ಜಮಾಅತುಗಳಾದ Hanau, ahaus, Midda, Hannover, Viersen, Koln, Munster, minheim, kosil, Leehiem, Osnaburck, Trier, Russelsheim, West Balingen, Olpe, Buren, zwickau ರಿಂದ ಬಂದಿದ್ದರು.

ಕೋಲೋನಿನಿಂದ ಬಂದವರು 190 ಕಿ.ಮೀ ಕಾಸಿಲ್‌ನಿಂದ ಬಂದವರು 200 ಕಿ.ಮೀ, ಮ್ಯಾನಿಸ್ಟರ್‌ನಿಂದ ಬಂದ ಕುಟುಂಬಗಳು 275 ಕಿ.ಮೀ ಮತ್ತು Osnaburck ಯಿಂದ ಬಂದ ಕುಟುಂಬಗಳು 330 ಕಿ.ಮೀ. ದೂರ ಪ್ರಯಾಣಿಸಿ ತಮ್ಮ ಪ್ರೀತಿಯ ಇಮಾಮರನ್ನು ಭೇಟಿಯಾಗಲು ಬಂದು ತಲುಪಿದ್ದರು.

ಇವರೆಲ್ಲರು ತಮ್ಮ ಪ್ರೀತಿಯ ನೇತಾರರೊಡನೆ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು. ಹುಝೂರ್ ಆತ್ಮೀಯವಾಗಿ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಲೇಖನಿಗಳನ್ನೂ, ಸಣ್ಣ ವಯಸ್ಸಿನ ಮಕ್ಕಳಿಗೆ ಚಾಕ್‌ಲೇಟ್‌ಗಳನ್ನೂ ನೀಡಿದರು. ಭೇಟಿಯ ಈ ಕಾರ್ಯಕ್ರಮವು 8 ಗಂಟೆಯ ತನಕ ನಡೆಯಿತು.

**ಮಜ್ಲಿಸ್ ಅನ್ಸಾರಲ್ಲಾಹ್ ಮತ್ತು ಲಜ್ನ ಇಮಾಇಲ್ಲಾಹ್‌ರವರ ಕಚ್ಚೇರಿ ಬೈತುಲ್ ಫಿಯತ್‌ನ ಉದ್ಘಾಟನೆ**

ಮಜ್ಲಿಸ್ ಅನ್ಸಾರುಲ್ಲಾಹ್ ಜರ್ಮನಿ ಮತ್ತು ಲಜ್ನ ಇಮಾವುಲ್ಲಾಹ್, ಜರ್ಮನಿ, ಅವರು ತಮ್ಮ ಕಚೇರಿಗಳಿಗಾಗಿ ಜರ್ಮನಿ ಜಮಾಅತಿನ ಕೇಂದ್ರ "ಬೈತುಸ್ಸಬೂಹ್" ಎದುರಿನಲ್ಲಿ ಒಂದು ವಿಶಾಲವಾದ ಕಟ್ಟಡ ಖರೀದಿಸಿದ್ದಾರೆ. ಹುಝೂರ್ ಈ ಕಟ್ಟಡದ ಹೆಸರು "ಬೈತುಲ್ ಆಫಿಯತ್" ಎಂದು ಹೆಸರಿಸಿದ್ದಾರೆ.

ಇಂದು "ಬೈತುಲ್ ಆಫಿಅತ್" ಉದ್ಘಾಟನಾ ಸಮಾರಂಭವಿತ್ತು. ಕಾರ್ಯಕ್ರಮದನ್ವಯ 8:15 ಗಂಟೆಗೆ ಹುಝೂರ್(ಅಬಿಅ) ನಡೆದುಕೊಂಡು ಈ ಕಟ್ಟಡದ ವೀಕ್ಷಣೆ ಮಾಡುತ್ತಾ ಉದ್ಘಾಟನೆಗೋಸ್ಕರ ತೆರಳಿದರು.

ಮಜ್ಲಿಸ್ ಅನ್ಸಾರುಲ್ಲಾಹ್ ಸದಸ್ಯರು ಮತ್ತು ಲಜ್ನ ಇಮಾವುಲ್ಲಾಹ್‌ರವರು ಬಹು ದೊಡ್ಡ ಸಂಖ್ಯೆಯಲ್ಲಿ ಹುಝೂರರನ್ನು ಸ್ವಾಗತಿಸಲು, ಶುಭಾಗಮನ ಕೋರಲು ನೆರೆದಿದ್ದರು. ಬಾಲಕಿಯರು ಸ್ವಾಗತ ಗೀತೆಗಳನ್ನು ಪ್ರಸ್ತುತಪಡಿಸಿದರು.

ಈ ವಿಶಾಲವಾದ ಕಟ್ಟಡ 5 ಅಂತಸ್ತುಗಳನ್ನು ಹೊಂದಿದೆ. ಅದರ ಒಟ್ಟು ವಿಸ್ತೀರ್ಣ 3,811 ಚ.ಮೀ ಆಗಿದೆ. ಅದರ ಸಂಪೂರ್ಣ ವಿಸ್ತೀರ್ಣ 11,250 ಚ.ಮಿ ಆಗಿದೆ. ಅದರಲ್ಲಿ ಹಲವು ವಿಶಾಲವಾದ ಸಭಾಂಗಣಗಳಿವೆ. ದೊಡ್ಡ ಸಂಖ್ಯೆಯಲ್ಲಿ ಕಚೇರಿಗಳಿವೆ. ಅದರ ಎರಡು ಅಂತಸ್ತುಗಳನ್ನು ಲಜ್ನ ಇಮಾವುಲ್ಲಾಹ್ ತನ್ನ ಕಚೇರಿಗಳಿಗೆ ಮತ್ತು ಸಭಾಂಗಣಗಳನ್ನು ಕ್ರೀಡಾ ಕಾರ್ಯಕ್ರಮಗಳಿಗಾಗಿ ಬಳಸಲಾಗುವುದು. ಎರಡು ಅಂತಸ್ತುಗಳನ್ನು ಮಜ್ಲಿಸ್ ಅನ್ಸಾರುಲ್ಲಾಹ್ ಬಳಸಿಕೊಳ್ಳುವುದು.

ಈ ಕಟ್ಟಡದ ಒಂದಿಷ್ಟು ವಿವರ ಹೀಗಿದೆ.

Basement ಸೇರಿಸಿ ಇದು ಐದು ಅಂತಸ್ತಿನ ಕಟ್ಟಡವಾಗಿದೆ. ಈ

***(ಉಳಿದ ವರದಿ ಪುಟ ಸಂಖೆ 09 ರಲ್ಲಿ ಓದಿರಿ)***

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE**

**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.